ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, the 8th June, 1982/Jyeista 18, 1904.S.E

The House met in the Assembly Chamber Vidhana Soudha, at One of the Clock.

[MR. SPEAKER (SRI K. H. RANGANATH) in the Chair]

ಸಂತಾಪಸೂಚಕ ನಿರ್ಣಯ

ಅಧ್ಯಕ್ಷರು.—ಸಭಾ ನಾಯಕರೆ, ವಿರೋಧಪಕ್ಷದ ನಾಯಕರೆ, ಸದನದ ಸನ್ಮಾನ್ಯ ಸದಸ್ಯ ಮಿತ್ರರೇ, ಈ ದಿನದ ಕಾರ್ಯಕ್ರಮದ ಪಟ್ಟಿಯಲ್ಲಿ ಮೊದಲನೆಯದು ದುಃಖಮಯವಾದುದು. ಅದನ್ನು ನಿರ್ವಹಿಸಲು ಎದ್ದು ನಿಂತಿದ್ದೇನೆ. ತಮಗೆಲ್ಲ ತಿಳಿದಿರುವಂತೆ ದಿನಾಂಕ ೬-೬-೧೯೮೨ರ ಸಂಜೆ ೫-೪೫ಕ್ಕೆ ನಮ್ಮನ್ನಗಲಿದ ಮಾಜಿ ಮುಖ್ಯ ಮಂತ್ರಿ, ಈ ಸದನದ ಹಿರಿಯ ಸದಸ್ಯ, ದಿವಂಗತ ಡಿ. ದೇವರಾಜ ಅರಸರವರ ನಿಧನದ ವಾರ್ತೆ. ಈ ವಾರ್ತೆಯನ್ನು ಸದನಕ್ಕೆ ತಿಳಿಸಲು, ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಸಭೆಯ ಮುಂದೆ ನಿಂತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ನೆನ್ನೆ ರಾಜ್ಯಕ್ಕೆ ರಜೆ ಕೊಟ್ಟು ರಾಜ್ಯ ಗೌರವದಿಂದ ಅವರ ಅಂತ್ಯಕ್ರಿಯೆಯನ್ನು ಮಾಡುವ ವ್ಯವಸ್ಥೆಗೊಳಿಸಿ, ರಾಜ್ಯದ ಎಲ್ಲ ಜನ ಪಕ್ಷಾತೀತವಾಗಿ ತಮ್ಮ ಗೌರವವನ್ನು ಅರ್ಪಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದು ಎಲ್ಲರೂ ಮೆಚ್ಚುವಂತಹದು. ಅವರು ನಮ್ಮನ್ನು ಇಷ್ಟು ಜಾಗ್ರತೆ ಅಗಲುತ್ತಾರೆ, ಅವರ ಮರಣಕ್ಕೆ ಈ ಸಭೆ ಸಂತಾಪ ವ್ಯಕ್ತಪಡಿಸುವ ನಿರ್ಣಯವನ್ನು ಪಾಸು ಮಾಡುವ ದುಃಖದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಾನು ವಹಿಸುವ ದುಃಖಮಯ ಪ್ರಸಂಗ ನನ್ನ ಪಾಲಿಗೆ ಬರುತ್ತದೆಂದು ಕನಸಿನಲ್ಲಿಯೂ ನಾನು ಭಾವಿಸಿರಲಿಲ್ಲ – ಅದು ನನ್ನ ಪಾಲಿಗೆ ಬಂದಿದೆ, ಈ ಸಭೆಗೆ ಬಂದಿದೆ. ಮರಣ ಯಾರ ಆಳೂ ಅಲ್ಲ, ಯಾರ ಶಿಫಾರಸನ್ನೂ ಕೇಳುವುದಿಲ್ಲ. 'ಚಿಟಿಕೆ' ಹೊಡೆದಂತೆ ಅವರು ಭಾನುವಾರ ಸಂಜೆ ನಮ್ಮನ್ನಗಲಿದರು. ಎಲ್ಲರನ್ನೂ ಅವರು ದುಃಖದಲ್ಲಿ ಬಿಟ್ಟು ಹೋಗಿದ್ದಾರೆ. ನಾವು ಇವರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಂತಾಪ ವ್ಯಕ್ತಪಡಿಸುವುದಕ್ಕಿಂತ ಮುನ್ನ ಸಭೆಯ ಅಪ್ಪಣೆ ಕೇಳಿ ಅವರ ಬಗ್ಗೆ ನಾಲ್ಕು ಮಾತುಗಳನ್ನು ಹೇಳಲು ಇಷ್ಟಪಡುತ್ತೇನೆ :—

೨೦ ವರ್ಷಗಳಿಗೂ ಹೆಚ್ಚು ಕಾಲ ನಾನು ಅವರನ್ನು ಬಲ್ಲೆ. ನಾನು ವಿರೋಧಪಕ್ಷದ ಸದಸ್ಯನಾಗಿ ಸುಮಾರು ಹತ್ತು ವರ್ಷಗಳ ಕಾಲ ಅವರು ಈ ಸದನದ ಸದಸ್ಯರಾಗಿ, ಮಂತ್ರಿಯಾಗಿ ಕೆಲಸ ಮಾಡಿದ್ದನ್ನು ನೋಡಿದ್ದೇನೆ. ಈಗಾಗಲೇ ತಿಳಿಸಿದಂತೆ ಈ ಸದನದ ಹಿರಿಯ ಸದಸ್ಯರಾಗಿದ್ದರು. ಹಳೆಯ ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿ ೧೯೫೨ ಅಂದರೆ ಘಟಕ ಜಾರಿಗೆ ಬಂದ ಮೇಲೆ ನಡೆದ ಮೊದಲನೆ ಚುನಾವಣೆಯಿಂದ ಇಲ್ಲಿಯವರೆಗೆ ಈ ಸದನದ ಸದಸ್ಯರಾಗಿ ಹುಣಸೂರು ಕ್ಷೇತ್ರವನ್ನು ಬಿಡದೆ ಪ್ರತಿನಿಧಿಸಿದ್ದಾರೆ. ಸಂಸದೀಯ ವ್ಯವಹಾರಗಳ ಕಾನೂನು ಚೌಕಟ್ಟಿನಲ್ಲಿ ಉತ್ತಮವಾಗಿ, ಪರಿಣಾಮಕಾರಿಯಾಗಿ ಈ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಿದ್ದ ಉತ್ತಮ ವಾಗ್ಮಿಯಾಗಿದ್ದರು. ಬಳಸುವ ಭಾಷೆಯ ಮೇಲೆ ಹಿಡಿತವಿತ್ತು. ಸಮಯೋಚಿತವಾದ ದಿನನಿತ್ಯದ ಪದಪ್ರಯೋಗದಿಂದ ಎಲ್ಲರ ಮನಮುಟ್ಟುವಂತೆ ಹೇಳಿ ಸಭೆಯನ್ನು ಒಲಿಸಿಕೊಳ್ಳುವುದು, ಅಷ್ಟೆ ಅಲ್ಲ, ವಿರೋಧಾಭಿಪ್ರಾಯವನ್ನು ಪರಿಣಾಮಕಾರಿಯಾಗಿ ಆಳಿಸುವ ಮಾತಿನ ಮಟ್ಟು ಅವರಿಗೆ ಕರಗತವಾಗಿತ್ತು. ಅವರು ಮಾತನಾಡುತ್ತಿದ್ದ ಧಾಟಿ ಪದ ಬಳಕೆಯ ರೀತಿ ಅನುಕರಣೀಯ. ಎಲ್ಲ ಪತ್ರಿಕೆಗಳಲ್ಲಿ ಈ ಎರಡು ದಿವಸಗಳಿಂದ ಅವರ ಬಗ್ಗೆ ಎಲ್ಲ ವಿಚಾರಗಳನ್ನು ಪ್ರಸ್ತಾಪ ಮಾಡಿ ಅಗ್ರ ಲೇಖನಗಳು ಬಂದಿವೆ. ನಾನು ಹೆಚ್ಚು ಹೇಳುವುದು ಪುನರಾವರ್ತನೆಯಾಗಬಹುದು. ಒಂದು ದಶಕದ ಕಾಲ ಅವರನ್ನು ಹತ್ತಿರದಿಂದ ಪಕ್ಷದ ಸದಸ್ಯನಾಗಿ ಕೆಲಸ ಮಾಡುವಾಗ ನೋಡುವ ಅವಕಾಶ ನನಗೂ ದೊರೆತ್ತಿತ್ತು. ಅವರು ಮುಖ್ಯ ಮಂತ್ರಿಯಾದ ನಂತರ ನನಗೆ ಪಕ್ಷದ

ಅಧ್ಯಕ್ಷನಾಗಿ, ಅವರು ಅಧ್ಯಕ್ಷರಾಗಿದ್ದ ಸಮಾಜವಾದಿ ಕ್ರಿಯಾರಂಗದ ಅಧ್ಯಕ್ಷನಾಗಿ, ತದನಂತರ ಅವರ ಮಂತ್ರಿಮಂಡಲದ ಸದಸ್ಯನಾಗಿ ಕೆಲಸ ಮಾಡುವ ಅವಕಾಶ ನನ್ನದಾಗಿತ್ತು. ಅವರೊಬ್ಬ ವೈವಿಧ್ಯಮಯ ವ್ಯಕ್ತಿ – ವಿಚಾರವಂತ – ರಾಜಕೀಯವಾಗಿ ಚಿಂತನೆ ಮಾಡುವ ವ್ಯಕ್ತಿಯಾಗಿದ್ದರು. ಸಮಾಜದ ಏರು ಪೇರು ಇಲ್ಲದಾಗಿ ಎಲ್ಲರಿಗೂ ದುಡಿಮೆಯ ಅವಕಾಶ ದೊರೆತು, ಮನುಷ್ಯ ಅದರಲ್ಲೂ ಸಾವಿರ ಸಾವಿರ ವರ್ಷಗಳಿಂದ ಶೋಷಣೆಗೆ ಒಳಗಾಗಿರುವ ದುಡಿಯುವ ಜನ ಅಗೋಚರ ಬಂಧನದಿಂದ ವಿಮುಕ್ತರಾಗ ಬೇಕೆಂಬ ಹಂಬಲ, ಆಶೆ ಅವರದಾಗಿತ್ತು. ಅದಕ್ಕಾಗಿ ಪ್ರಯತ್ನ ಪಟ್ಟು ಆ ದಾರಿಯಲ್ಲಿ ಕಾರ್ಯಪ್ರವೃತ ರಾಗಿದ್ದುದು ಕಣ್ಣಿಗೆ ಕಾಣುವ ವಿಚಾರ. ಈ ವಿಚಾರವೇ ಅವರು ಹಿಂದುಳಿದವರಿಗೆ ಹೆಚ್ಚು ಕೆಲಸ ಮಾಡಲು ಪ್ರೇರಕ ಶಕ್ತಿ. ಬೇರೆ ರಾಜ್ಯಗಳಲ್ಲಿ ಈ ವಿಚಾರ ಬರೀ ಮಾತಾಗಿದ್ದರೆ ಈ ಕರ್ನಾಟಕದಲ್ಲಿ ಕಾರ್ಯರೂಪಕ್ಕೆ ಬಂದಿತು. ಸಹೋದ್ಯೋಗಿಗಳು, ಕಾರ್ಯಕರ್ತರು ಸದಿಚ್ಛೆ ವ್ಯಕ್ತಪಡಿಸಿದಾಗ ಮನ್ನಿಸುವ ಗುಣ. ಇದರ ದುರುಪಯೋಗ ಪಡೆವವರೂ ಉಂಟು.

ಆಡಳಿತದ ಸೂಕ್ಷ್ಮ ವಿಷಯಗಳ ಪರಿಚಯ ಸಾಕಷ್ಟು ಇದ್ದು ಯಾವ ಕುದುರೆಯನ್ನು ಯಾವ ಚಾಟಿಯಿಂದ ಹೇಗೆ ಹೊಡೆಯಬೇಕೆಂಬ ಮರ್ಮವನ್ನು ಅರಿತಿದ್ದರು. ವಾದಗ್ರಸ್ತ ವ್ಯಕ್ತಿಯಾಗಿದ್ದರೂ ಮೆಚ್ಚಿಗೆಗೆ ಅರ್ಹರು.

ಕರ್ನಾಟಕಕ್ಕೆ – ಕರ್ನಾಟಕ ಎಂದು ಹೆಸರಿಡುವುದಕ್ಕೆ ವಿರೋಧವಾಗಿದ್ದ ವ್ಯಕ್ತಿ. ಇದೇ ಸಭೆಯಲ್ಲಿ ೧೯೬೭-೬೮ ರ ಹೊತ್ತಿಗೆ ಒಂದು ನಿರ್ಣಯ ಬಂದಾಗ ಮಂತ್ರಿಮಂಡಲದ ಸದಸ್ಯರಾಗಿದ್ದಾಗ್ಯೂ ಶ್ರೀ ನಿಜಲಿಂಗಪ್ಪನವರ (ಅಂದಿನ ಸಭಾನಾಯಕರು) ಅನುಮತಿ ಪಡೆದು ನಿರ್ಣಯವನ್ನು ವಿರೋಧ ಮಾಡಿದ್ದು ಉಂಟು. ೧೯೭೧-೭೨ರ ಸಮಯದಲ್ಲಿ ಪಕ್ಷ ಸಂಘಟನೆ ಕಾಲಕ್ಕೆ ನಾವೆಲ್ಲ ಪಕ್ಷದಲ್ಲಿ ಈ ಅಭಿಪ್ರಾಯ ಬದಲಾವಣೆಗೆ ಒತ್ತಾಯಿಸಿದಾಗ, ಅದನ್ನು ಚುನಾವಣೆಯ ಕಾಲಕ್ಕೆ ಪಕ್ಷದ ನೀತಿಯಾಗಿ ಪ್ರಸ್ತಾವ ಮಾಡಿ, ಚುನಾವಣೆಯಲ್ಲಿ ಜನಾಭಿಪ್ರಾಯ ದೊರೆತ ಮೇಲೆ ಅವರೇ ಮುಂದಾಗಿ ಸಂಸದೀಯ ಪಕ್ಷದ ಮೊದಲನೇ ಕಾರ್ಯಕಾರಿ ಸಭೆಯಲ್ಲಿ ಭೂಸುಧಾರಣೆ ರಾಜ್ಯದ ಹೆಸರಿನ ಬದಲಾವಣೆಯ ನಿರ್ಣಯಗಳನ್ನು ಪಾಸು ಮಾಡಿಸಿ ಜಾರಿಗೆ ತಂದರು. ಅಂದರೆ ಪ್ರಜಾಪ್ರಭುತ್ವದ ಮೌಲ್ಯಗಳಲ್ಲಿ ತಮಗೆ ತಿಳಿದ ಅಭಿಪ್ರಾಯವನ್ನು ಪ್ರಸ್ತಾಪ ಮಾಡುವಲ್ಲಿ ಅಳುಕಿರಲಿಲ್ಲವೆನ್ನುವ ಮಾತನ್ನು ಪ್ರಸ್ತಾಪಿಸುತ್ತಿದ್ದೇನೆ. ಹೆಚ್ಚು ಹೇಳಲು ಇಚ್ಛಿಸುವುದಿಲ್ಲ.

ಈ ಹಿರಿಯ ರಾಜಕಾರಣಿ ಇಲ್ಲವಾಗಿದ್ದಾರೆ. ಅವರ ನಿಧನವು ನಮಗೆಲ್ಲರಿಗೂ ದುಃಖವನ್ನುಂಟು ಮಾಡಿದೆ. ಅವರ ಆತ್ಮಕ್ಕೆ ಶಾಂತಿ ಕೋರುತ್ತಾ – ಅವರ ಕುಟುಂಬಕ್ಕೆ ದುಃಖದ ಭಾರವನ್ನು ಹೊರುವ ಶಕ್ತಿಯನ್ನು ಭಗವಂತನು ಕೊಡಲೆಂದು ಕೋರುತ್ತೇನೆ.

ಶ್ರೀ ಆರ್. ಗುಂಡೂರಾವ್ (ಮುಖ್ಯಮಂತ್ರಿಗಳು) —ಮಾನ್ಯ ಅಧ್ಯಕ್ಷರೇ ಈ ಮುಂದಿನ ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

> "ಈ ಸಭೆಯ ಅತ್ಯಂತ ಹಿರಿಯ ಸದಸ್ಯರು, ರಾಜ್ಯದ ಮಾಜಿ ಮುಖ್ಯಮಂತ್ರಿಗಳೂ ಆಗಿದ್ದ ಹಿರಿಯ ನಾಯಕ ಶ್ರೀ ಡಿ. ದೇವರಾಜ್ ಅರಸ್ ಅವರು ದಿನಾಂಕ ೬-೬-೧೯೮೨ರ ಸಂಜೆ ನಮ್ಮನ್ನು ಅಗಲಿದರು.
>
> ಶ್ರೀ ಡಿ. ದೇವರಾಜ್ ಅರಸ್‌ರವರು ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ನಾಲ್ಕು ದಶಕಗಳ ಕಾಲ ಸಲ್ಲಿಸಿದ ಸೇವೆ ಅಮೂಲ್ಯ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ರಾಜಕೀಯ ಜೀವನ ಪ್ರವೇಶಿಸಿದ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ನಂತರ, ೧೯೫೨ ರಿಂದ ಈ ಸಭೆಯ ಸದಸ್ಯರಾಗಿ ತಮ್ಮ ನಿಧನದವರೆಗೂ ಅಖಂಡವಾಗಿ ಮೂವತ್ತು ವರ್ಷಗಳ ಕಾಲ ರಾಜ್ಯ ಶಾಸನ ಸಭೆಯಲ್ಲಿ ಸೇವೆ ಸಲ್ಲಿಸಿದರು. ಕರ್ನಾಟಕದ ಮುಖ್ಯಮಂತ್ರಿಯಾಗಿ ೧೯೭೦ರ ದಶಕದಲ್ಲಿ ಅವರು ರಾಜ್ಯದ ದೀನದಲಿತರು, ಹಿಂದುಳಿದವರು ಮತ್ತು ಬಡವರ ಏಳಿಗೆಗಾಗಿ ಕೈಗೊಂಡ ಕ್ರಮಗಳು, ಈ ವರ್ಗದ ಜನತೆಯ ಪ್ರಗತಿಗೆ ಒಂದು ಹೊಸ ದಿಕ್ಕನ್ನು ಆಯಾಮವನ್ನು ತಂದು ಕೊಟ್ಟವು. ರಾಜ್ಯದ ರಾಜಕೀಯಕ್ಕೆ ಹೊಸ ತಿರುವನ್ನು ನೀಡಿದ ಅವರು ಒಬ್ಬ ದಕ್ಷ ಆಡಳಿತಗಾರರಾಗಿ ಜನತೆಯ ಸೇವೆ ಸಲ್ಲಿಸಿದ್ದಾರೆ.

ಪ್ರಜಾಸತ್ತೆ, ಸಮಾಜವಾದ ಮತ್ತು ಜಾತ್ಯಾತೀತ ತತ್ವಗಳಲ್ಲಿ ಅಚಲ ನಂಬಿಕೆಯನ್ನು ಇಟ್ಟು, ತಮ್ಮ ಜೀವನದುದ್ದಕ್ಕೂ ರಾಜ್ಯದ ಮತ್ತು ರಾಷ್ಟ್ರದ ಹಿತಕ್ಕಾಗಿ ಅವರು ನಿರಂತರವಾಗಿ ಶ್ರಮಿಸಿದ್ದಾರೆ. ಶ್ರೀ ಅರಸ್‌ರವರು ಜನ ಹಿತಚಿಂತನೆಗಾಗಿ ಸಲ್ಲಿಸಿದ ಅಪಾರ ಸೇವೆ ರಾಜ್ಯದ ಇತಿಹಾಸದಲ್ಲಿ ಒಂದು ಉಜ್ವಲ ಅಧ್ಯಾಯವಾಗಿ ಉಳಿಯಲಿದೆ.

ರಾಜ್ಯಕ್ಕೆ ಮತ್ತು ರಾಷ್ಟ್ರಕ್ಕೆ ಅಮೋಘ ಸೇವೆ ಸಲ್ಲಿಸಿದ ಶ್ರೀ ಡಿ. ದೇವರಾಜ ಅರಸ್ ಅವರ ಚಿರ ನೆನಪಿಗೆ ಈ ಸಭೆ ಗೌರವ ಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತಿದೆ.''

ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವರಾಜ್ ಅರಸ್ ಅವರ ನಿಧನದಿಂದ ಇಡೀ ರಾಷ್ಟ್ರಕ್ಕೆ ಒಬ್ಬ ಅತ್ಯಂತ ಹಿರಿಯ ಮತ್ತು ಮುತ್ಸದ್ದಿ ನಾಯಕನನ್ನು ಕಳೆದುಕೊಂಡಂತಹ ಪರಿಸ್ಥಿತಿ ಉಂಟಾಗಿದೆ. ನನಗೂ ಮತ್ತು ಅವರಿಗೂ ಸುಮಾರು ೧೫ ವರ್ಷಗಳ ಸ್ನೇಹ ೧೯೬೯ ರಿಂದ ೧೯೭೯ನೇ ಇಸವಿಯವರೆಗೆ ಅಂದರೆ ಸುಮಾರು ಹತ್ತು ವರ್ಷಗಳ ಕಾಲ ಎಲ್ಲ ವಿಷಯಗಳಲ್ಲಿಯೂ ಅವರ ಜೊತೆ ಸೇರಿ ಕೆಲಸ ಮಾಡುವಂತಹ ಒಂದು ಅವಕಾಶ ನನಗೆ ದೊರಕಿತ್ತು. ನನ್ನ ರಾಜಕೀಯ ಜೀವನದ ಬಗ್ಗೆ ಹೇಳಬೇಕೆಂದರೆ, ಬಹುಶಃ ನನ್ನನ್ನು ಕಾಂಗ್ರೆಸ್ಸಿಗೆ ೧೯೬೬ನೇ ಇಸವಿಯಲ್ಲಿ ಸೇರಿಸಿದವರೇ ಅವರು. ಅವರ ಮೇಲೆ ನನಗೆ ಹೆಚ್ಚಿನ ಒಂದು ಗೌರವ ಮತ್ತು ಅವರಿಗೆ ನನ್ನ ಮೇಲೆ ಗೌರವ ಬರುವುದಕ್ಕೆ ಕಾರಣವೇನೆಂದರೆ ನಾನು ೧೯೬೪ರಲ್ಲಿ ಪುರಸಭೆ ಅಧ್ಯಕ್ಷನಾಗಿದ್ದಾಗ ನಾನು ಇನ್ನೂ ಕಾಂಗ್ರೆಸ್ ಸದಸ್ಯನಾಗಿರಲಿಲ್ಲ. ಆ ಸಂದರ್ಭದಲ್ಲಿ ಇವರು ಸಾರಿಗೆ ಮಂತ್ರಿಯಾಗಿದ್ದರು. ನಮ್ಮ ಊರಿನ ಒಂದು ಸಮಾರಂಭಕ್ಕೆ ನಾನು ಬೆಂಗಳೂರಿಗೆ ಬಂದು ಇವರನ್ನು ಆಹ್ವಾನಿಸಿದಾಗ ಬರುತ್ತೇನೆಂದು ಒಪ್ಪಿದರು. ಆದರೆ ಅಲ್ಲಿನ ಸ್ಥಳೀಯ ಕಾಂಗ್ರೆಸ್‌ನವರು ಇವರು ಬರುವುದನ್ನು ವಿರೋಧ ಮಾಡಿದರು. ಅಲ್ಲಿನ ಸಮಾರಂಭಕ್ಕೆ ಬರಬಾರದೆಂದು ಕೇಳಿಕೊಂಡರು. ಅಲ್ಲಿನ ಕಾಂಗ್ರೆಸ್‌ನವರು ವಿರೋಧ ಮಾಡುತ್ತಿರುವ ಕಾರಣದಿಂದ ಹೋಗುವುದು ಸರಿಯಲ್ಲವೆಂದು ಇವರಿಗೆ ಆಗಿನ ಮುಖ್ಯಮಂತ್ರಿಗಳು ಹೇಳಿದರೂ ಸಹ ಇವರು ಮಾತ್ರ ನಾನು ಬರುತ್ತೇನೆಂದು ಅಲ್ಲಿನ ಪುರಸಭೆ ಅಧ್ಯಕ್ಷರಿಗೆ ಕಾಗದ ಬರೆದಿರುವ ಕಾರಣದಿಂದ ಹೋಗದಿದ್ದರೆ ತಪ್ಪಾಗುತ್ತದೆಂದು ತಿಳಿಸಿದರು. ಆ ಸಂದರ್ಭದಲ್ಲಿ ಇವರು ನಮ್ಮ ಊರಿಗೆ ಬರುವುದು ಒಂದು ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಅಲ್ಲಿನ ಕಾಂಗ್ರೆಸ್ಸಿಗರು ಇವರನ್ನು ಬರಲು ಬಿಡುವುದಿಲ್ಲವೆಂಬ ಮಾತನ್ನು ಹೇಳುತ್ತಿದ್ದಾಗ ಮತ್ತೊಂದು ಗುಂಪಿನವರು ಇವರು ಬಂದೇ ಬರುತ್ತಾರೆಂದು ಹೇಳುವಂತಹ ಸಂದರ್ಭದಲ್ಲಿ ಇವರು ಅಲ್ಲಿಗೆ ಬಂದರು. ಅವರು ಅಲ್ಲಿಗೆ ಬಂದಮೇಲೆ ನಾವು ಅವರಿಗೆ ದೊಡ್ಡ ಗೌರವವನ್ನು ಕೊಟ್ಟೆವು. ಆಗ ನನಗೆ ಇನ್ನೂ ಮದುವೆಯಾಗಿರಲಿಲ್ಲ. ನಾನಿನ್ನೂ ಯುವಕನಾಗಿದ್ದೆ. ಅವರು ಅಲ್ಲಿಗೆ ಬಂದಾಗ ನನಗೆ ಹೇಳಿದ್ದೇನೆಂದರೆ, ನೀವೂ ಸಹ ಏತಕ್ಕೆ ಕಾಂಗ್ರೆಸ್‌ಗೆ ಸೇರಬಾರದು ಎಂದು. ೧೯೬೬ನೇ ಇಸವಿಯಲ್ಲಿ ಶ್ರೀಮಾನ್ ಶಿವರುದ್ರಪ್ಪನವರು ವಿಧಾನಪರಿಷತ್ತಿಗೆ ಸ್ಪರ್ಧೆ ಮಾಡುವಂತಹ ಸಮಯದಲ್ಲಿ ನಾವೂ ಸಹ ಮತ ಕೊಡಬೇಕಾಗಿತ್ತು. ಆ ಸಂದರ್ಭದಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ಕೊಡಿ ಎಂದು ಕಾಂಗ್ರೆಸ್‌ನವರು ಯಾರೂ ಸಹ ನನ್ನ ಹತ್ತಿರ ಬಂದು ಕೇಳುವುದಕ್ಕೆ ಭಯಪಡುತ್ತಿದ್ದರು. ಆದರೆ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಬೇಕಾದರೆ ಕೊಡಗು ಹಾಗೂ ಸೋಮವಾರಪೇಟೆಯ ಮತಗಳು ಅಗತ್ಯವಾಗಿದ್ದವು. ಈ ಕಾರಣದಿಂದ ಮಾನ್ಯ ದೇವರಾಜಅರಸ್ ಅವರು ಮತ್ತು ಡಾ. ತಿಮ್ಮೇಗೌಡರು ನನ್ನಲ್ಲಿಗೆ ಬಂದು ನೀವು ಕಾಂಗ್ರೆಸ್ ಪಕ್ಷಕ್ಕೆ ಸೇರಬೇಕು ಮತ್ತು ಶ್ರೀಮಾನ್ ಶಿವರುದ್ರಪ್ಪನವರ ಪರವಾಗಿ ಕೆಲಸ ಮಾಡಬೇಕು ಎಂದು ಕೇಳಿಕೊಂಡರು. ನಾನು ಇದಕ್ಕೆ ಒಪ್ಪಿದಾಗ ಅವರು ನನ್ನನ್ನು ೧೯೬೬ನೇ ಇಸವಿಯಲ್ಲಿ ಕಾಂಗ್ರೆಸ್ಸಿಗೆ ಸೇರಿಸಿಕೊಂಡರು. ಅವೊತ್ತಿನಿಂದ ನನಗೆ ಅವರ ಮೇಲೆ ವೈಯಕ್ತಿಕವಾಗಿ ಬಹಳ ದೊಡ್ಡ ಅಭಿಮಾನ. ೧೯೬೯ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗವಾದಾಗ ನಾನು ಯುವಕ ಕಾಂಗ್ರೆಸ್ ಅಧ್ಯಕ್ಷನಾಗಿಯೂ ಮತ್ತು ಇವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿಯೂ ಕೆಲಸ ಮಾಡುವಂತಹ ಒಂದು ಅವಕಾಶ ಸಿಕ್ಕಿತು. ನಾವು ೩ ವರ್ಷಗಳ ಕಾಲ ಪಕ್ಷದ ಸಂಘಟನೆಗಾಗಿ ಜೊತೆಯಾಗಿ ಕೆಲಸ ಮಾಡಿದೆವು. ಅವರ ಒಂದು ಹಿರಿತನದಲ್ಲಿ ಕೆಲಸ ಮಾಡುವಾಗ ಪಕ್ಷದ ಸಂಘಟನೆಗೆ ಎಷ್ಟೇ ಅಡಚಣೆಗಳು ಬಂದರೂ ಸಹ ಅವನ್ನೆಲ್ಲಾ ಎದುರಿಸುವಂತಹ ಒಂದು ಶಕ್ತಿ ಅವರಲ್ಲಿರುವುದನ್ನು ನಾನು ಕಂಡುಕೊಂಡೆ. ಯಾವುದೇ ಸಂದರ್ಭದಲ್ಲಿಯೂ ಧೈರ್ಯಗೆಡಬಾರದು, ಕೆಲಸ ಮಾಡುತ್ತಾ ಹೋಗಬೇಕು. ಅಧಿಕಾರ ಎನ್ನುವುದು ಕೇವಲ ಒಂದು ಸಾಧನೆ ಮಾತ್ರ. ಇದು ಜನರಿಗೆ ಕೆಲವೊಂದು ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕೆ ಮಾತ್ರ ಇರುವ ಕಾರಣದಿಂದ ಅಧಿಕಾರಕ್ಕೇ ಯಾವಾಗಲೂ ಅಂಟಿಕೊಂಡಿರುವುದು ಸರಿಯಲ್ಲವೆನ್ನುವ ಮಾತುಗಳನ್ನು ನನಗೆ ಅವರು ಅನೇಕ ಸಂದರ್ಭದಲ್ಲಿ ಹೇಳುತ್ತಿದ್ದರು. ಒಂದು ಸಂದರ್ಭದಲ್ಲಿ ನಾನೂ ಮತ್ತು ಅವರು ಒಂದೇ ರೂಮಿನಲ್ಲಿ

ಉಳಿಯಬೇಕಾದಂಥ ಸಂದರ್ಭ ಬಂದಿದ್ದನ್ನು ನಾನು ನೆನ್ನೆ ದಿವಸ ಹುಣಸೂರಿನಲ್ಲಿ ನೆನಪಿಗೆ ತಂದುಕೊಂಡೆ. ಎಲ್ಲ ಸಂದರ್ಭದಲ್ಲಿಯೂ ಸಹ ನನಗೆ ಅವರು ಅನೇಕ ವಿಚಾರಗಳನ್ನು ಹೇಳುತ್ತಿದ್ದರು. ಇಷ್ಟೊಂದು ಸಂಬಂಧ ನನಗೂ ಅವರಿಗೂ ಇತ್ತು. ಅವರು ಇತ್ತೀಚೆಗೆ ವಿರೋಧಪಕ್ಷದಲ್ಲಿದ್ದರೂ ಸಹ ೧೯೫೨ನೇ ಇಸವಿಯಿಂದ ಇಲ್ಲಿಯವರೆಗೆ ನಮ್ಮ ಮತ್ತು ಈಗಿನ ಮಂತ್ರಿಮಂಡಲಕ್ಕೆ ಅವರು ಗುರುವಿನ ರೀತಿಯಲ್ಲಿದ್ದರು. ಪಾಂಡವರಿಗೂ ಮತ್ತು ಕೌರವರಿಗೂ ದ್ರೋಣಾಚಾರ್ಯರು ಯಾವ ರೀತಿ ಗುರುವಾಗಿದ್ದರೋ ಅದೇರೀತಿ ಈಗಿನ ಮಂತ್ರಿಮಂಡಲದಲ್ಲಿರುವಂತಹ ಪ್ರತಿಯೊಬ್ಬರೂ ಸಹ ಅವರಿಂದ ಕಲಿತಂತಹ ವಿದ್ಯೆಯಿಂದ ಇವೊತ್ತು ವಿವಿಧ ಹುದ್ದೆಗಳಲ್ಲಿರುವುದಕ್ಕೆ ಅವಕಾಶವಾಗಿದೆ ಎಂದು ಹೇಳುವುದಕ್ಕೆ ನಾನು ಹಿಂಜರಿಯುವುದಿಲ್ಲ. ಸುಮಾರು ಹತ್ತು ವರ್ಷಗಳ ಕಾಲ ಇಷ್ಟೊಂದು ಪ್ರೀತಿ ಮತ್ತು ಸ್ನೇಹದಿಂದ ಕೆಲಸ ಮಾಡಿದಂಥ ನಾವು ೧೯೭೮ರಲ್ಲಿ ರಾಜಕೀಯ ಕಾರಣಗಳಿಂದ ಬೇರೆ ಬೇರೆಯಾಗಬೇಕಾಯಿತು. ಆ ಸಂದರ್ಭದಲ್ಲಿ ನಾನು ಮೂರು ಸಲ ಭೇಟಿ ಮಾಡಿದೆ. ಕೊನೆಯ ಸಲದ ಭೇಟಿಯಲ್ಲಿ ನಾನು ಅವರಿಗೆ ಹೇಳಿದ್ದೇನೆಂದರೆ, ರಾಜಕೀಯವಾಗಿ ನಮ್ಮ ನಿಮ್ಮ ನೀತಿಗಳು ಸ್ವಲ್ಪ ಹೆಚ್ಚು ಕಡಿಮೆಯಾಗಿರುವುದರಿಂದ ನಾನು ನಿಮ್ಮ ಜೊತೆಯಲ್ಲಿರುವುದಕ್ಕೆ ಸಾಧ್ಯವಿಲ್ಲವಾದ ಕಾರಣ ನೀವು ನನ್ನನ್ನು ಮಂತ್ರಿಮಂಡಲದಿಂದ ಬಿಟ್ಟುಕೊಡಬೇಕಾಗುತ್ತದೆಂದು ಹೇಳಿದಾಗ ಅವರ ಮನಸ್ಸಿನಲ್ಲಿ ದೊಡ್ಡ ಗೊಂದಲ ಉಂಟಾಯಿತು ಅವರ ಜೊತೆಯಲ್ಲಿ ಹತ್ತು ವರ್ಷಗಳ ಕಾಲ ಕೆಲಸ ಮಾಡಿದ ಕಾರಣದಿಂದ ಅವರಿಂದ ಬೇರೆಯಾಗಬೇಕಲ್ಲ ಎಂದು ಆ ಸಂದರ್ಭದಲ್ಲಿ ನನಗೂ ಸಹ ಒಂದು ತರಹ ದುಃಖವಾಯಿತು. ನನಗಿಂತ ಅವರಿಗೇ ಹೆಚ್ಚು ದುಃಖವಾಯಿತೆಂದು ನಾನು ತಿಳಿದುಕೊಂಡಿದ್ದೇನೆ. ಆದರೂ ಸಹ ನಾವುಗಳು ಆ ಸಂದರ್ಭದಲ್ಲಿ ಬೇರೆಬೇರೆಯಾಗಬೇಕಾಯಿತು. ಅಲ್ಲಿಂದೀಚೆಗೆ ನಾವುಗಳು ರಾಜಕೀಯವಾಗಿ ವಿರೋಧ ವ್ಯಕ್ತಪಡಿಸುತ್ತಿದ್ದರೂ ಸಹ ನಾನು ಅವರನ್ನು ದೆಹಲಿಯಲ್ಲಿ ಇಲ್ಲವೇ ವಿಮಾನದಲ್ಲಿ ಭೇಟಿಯಾದಾಗ ಮೊದಲಿನ ಪ್ರೀತಿ ಮತ್ತು ವಿಶ್ವಾಸಗಳಿಂದಲೇ ಮಾತನಾಡುತ್ತಿದ್ದೆವು. ಅವರು ಅಧಿಕಾರದಲ್ಲಿದ್ದಾಗ ಹಿಂದುಳಿದವರ ವರ್ಗದವರಿಗಾಗಿ ಮಾಡಿದ ಸೇವೆ ಏನಿದೆ, ಅದು ಈ ರಾಜ್ಯದಲ್ಲಿ ಒಂದು ರೀತಿಯ ಜನಜಾಗೃತಿಯನ್ನು ಉಂಟುಮಾಡಿದೆ. ಹೇಳಹೆಸರಿಲ್ಲದಂಥ ಅನೇಕ ಜಾತಿಗಳನ್ನು ಗುರುತಿಸಿ ಅವರಿಗೂ ಸಹ ಈ ಸಮಾಜದಲ್ಲಿ ಒಂದು ಸ್ಥಾನವಿದೆ ಎಂಬುದನ್ನು ತಿಳಿಯಪಡಿಸಿದರು. ಯಾವುದೇ ಜನಾಂಗವೇ ಆಗಲಿ, ರಾಜಕೀಯವಾಗಿ ಜಾಗೃತಿಯಾಗದಿದ್ದರೆ ಸಾಮಾಜಿಕವಾಗಿಯಾಗಲೀ, ಶೈಕ್ಷಣಿಕವಾಗಿಯಾಗಲೀ ಈ ದೇಶದಲ್ಲಿ ಅವರುಗಳು ಮುಂದುವರೆಯಲು ಸಾಧ್ಯವಾಗುವುದಿಲ್ಲವೆಂಬ ಅರಿವನ್ನು ಅವರು ಎಲ್ಲರಲ್ಲಿಯೂ ಮೂಡಿಸಿದರು. ಪ್ರತಿಯೊಂದು ಜನಾಂಗದವರೂ ರಾಜಕೀಯ ಆಂದೋಳನದಲ್ಲಿ ಸೇರಿಕೊಂಡು ಅಧಿಕಾರವನ್ನು ಪಡೆದುಕೊಳ್ಳುವಂತಹ ಪರಿಸ್ಥಿತಿ ಬಂದಾಗ ಮಾತ್ರ ಅತ್ಯಂತ ಹಿಂದುಳಿದ ವರ್ಗದವರೂ ಸಹ ಈ ಸಮಾಜದಲ್ಲಿ ಸಮಸಮಾನವಾದಂಥ ಸ್ಥಾನಕ್ಕೆ ಬರಲು ಸಾಧ್ಯವಾಗುತ್ತದೆಂಬುದನ್ನು ದೂರದ ಆಲೋಚನೆಯಿಂದ ತಿಳಿದುಕೊಂಡಿದ್ದಂಥ ವ್ಯಕ್ತಿಯೆಂದರೆ ಶ್ರೀಮಾನ್ ದೇವರಾಜ ಅರಸ್. ನಮ್ಮ ರಾಜ್ಯ ವಿಶಾಲ ಕರ್ನಾಟಕವಾದಮೇಲೆ ಬಹಳ ದೊಡ್ಡ ವಿಶಾಲ ಮನೋಭಾವನೆಯಿಂದ ಹಾಗೂ ದೂರದೃಷ್ಟಿಯಿಂದ ಇವರು ವಿಚಾರ ಮಾಡಿ ಇಡೀ ರಾಷ್ಟ್ರದಲ್ಲೇ ಇಲ್ಲದಂಥ ಕೆಲವು ಯೋಜನೆಗಳನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಲು ಇವರು ಮುಂದಾದರು. ಹಿಂದುಳಿದವರ ಅಭಿವೃದ್ಧಿಗಾಗಿ ಹಾಗೂ ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ಮತ್ತು ಎಲ್ಲರಿಗೂ ಅನುಕೂಲವಾಗುವಂತಹ ಕೆಲವಾರು ಕ್ರಾಂತಿಕಾರಕವಾದಂಥ ಬದಲಾವಣೆಗಳನ್ನು ಇವರು ತಮ್ಮ ಒಂದು ಆಡಳಿತದಲ್ಲಿ ಮಾಡಿದರು. ಅವರಿಂದ ಇವತ್ತು ನನಗಂತೂ ವೈಯಕ್ತಿಕವಾಗಿ ಆದಂಥಾ ದುಃಖ ಅಷ್ಟಿಷ್ಟಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ನಾನು ತಮಗೆ ಮೊದಲೇ ತಿಳಿಸಿದ ಹಾಗೆ ನನ್ನ ಅವರ ಸಂಬಂಧ ಬೆಳೆದುದ್ದು ಆ ರೀತಿ ಇತ್ತು. ನಾನು ಇವೊತ್ತು ಮುಖ್ಯಮಂತ್ರಿಯಾಗಿರಬಹುದು. ಮುಖ್ಯಮಂತ್ರಿಯಾಗಿ ನನ್ನನ್ನು ಬರಸಲಿಕ್ಕೆ ಮುಖ್ಯ ಸೂತ್ರಧಾರಿ ನನ್ನ ಗುರುಸ್ಥಾನದಲ್ಲಿದ್ದಂಥಾ ಶ್ರೀಮಾನ್ ಡಿ. ದೇವರಾಜ ಅರಸರೇ, ಕಾರಣರು. ಅವರು ಈ ವಿಧಾನಸಭೆಯಲ್ಲಿ ಕೂತಿದ್ದರೆ ಸಾಕಾಗಿತ್ತು. ನನಗೆ ಒಂದು ಹೆಚ್ಚಿನ ಶಕ್ತಿ ಬರುತ್ತಿತ್ತು. ಯಾವ ವಿಷಯವನ್ನೇ ಎದುರಿಸುವಂಥಾ ಶಕ್ತಿ ಬರುತ್ತಿತ್ತು. ಅವರು ಇನ್ನೂ ಹೆಚ್ಚು ಕಾಲ ಇದ್ದಿದ್ದರೆ ಸಾರ್ಥಕ ಇತ್ತು. ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದಾಗಿತ್ತು. ಆದರೆ ಈ ಮಧ್ಯೆ ರಾಜಕೀಯವಾಗಿ ಸ್ವಲ್ಪ ದೂರ ಇರಬೇಕಾಯಿತು. ವಿಧಿ ಇಲ್ಲ, ರಾಜಕೀಯದಲ್ಲಿ ಅವರ ಕರ್ತವ್ಯ ಅವರು ಮಾಡಬೇಕಾಗುತ್ತದೆ. ನನ್ನ ಕರ್ತವ್ಯ ನಾನು ಮಾಡಬೇಕಾಗುತ್ತದೆ. ರಾಜಕೀಯ ಕಾರಣಗಳಿಗೋಸ್ಕರ ನಾವು ಬೇರೆ ಬೇರೆ ಆದವೇ ವಿನಾ ಅವರ ಬಗ್ಗೆ ನಾವು ಮಾತನಾಡುವಾಗ ಒಂದು ದಿವಸವಾದರೂ ಕೂಡ ಅವರನ್ನು ಒಂದು ಏಕವಚನದಲ್ಲಾಗಲೀ ಅಥವಾ ಅವರ ಬಗ್ಗೆ ನೇರವಾದ

ಮಾತನ್ನಾಗಲಿ ಯಾರೂ ಮಾತನಾಡಿಲ್ಲಾ, ಅಂಥಾವರು ಈವೊತ್ತಿನ ದಿವಸ ಈ ವಿಧಾನಸಭೆಯಲ್ಲಿ ಇಲ್ಲದೇ ಇರುವಂಥಾದ್ದು ನಮಗೆಲ್ಲರಿಗೂ ದುಃಖವಾಗುತ್ತದೆ. ಅವರು ಈ ವಿಧಾನಸಭೆಯಲ್ಲಿ ಮಾತನಾಡುವಾಗ ಒಂದು ರೋಷದಿಂದಾಗಲಿ, ಒಂದು ಉದ್ರೇಕದಿಂದಾಗಲಿ ಮಾತನಾಡುತ್ತಿದ್ದುದನ್ನು ನಾವು ಕಾಣುತ್ತಿದ್ದೆವು. ಅಂಥಾವರು ಈವೊತ್ತು ಇದ್ದಿದ್ದರೆ ನಮ್ಮ ಮೇಲೆ ಎಷ್ಟೋ ಪರಿಣಾಮಗಳು ಉಂಟಾಗುತ್ತಿತ್ತು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇಂತಹ ಅನುಭವಿಯಾದ ರಾಜಕಾರಿಣಿಗಳು ಅದರಲ್ಲೂ ಈ ವಿಧಾನಸಭೆಯ ಹಿರಿಯ ಸದಸ್ಯರೂ ಆದಂಥಾ ಶ್ರೀಮಾನ್ ಡಿ. ದೇವರಾಜ ಅರಸರವರನ್ನು ಕಳೆದುಕೊಂಡಿರುವುದರಿಂದ ಈ ವಿಧಾನಸಭೆ ಒಂದು ರೀತಿಯಾಗಿ ತಬ್ಬಲಿಯಾಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏತಕ್ಕೆಂದರೆ ನಮ್ಮ ಮಂತ್ರಿಮಂಡಲದಲ್ಲಿರತಕ್ಕಂಥಾ ಎಲ್ಲಾ ಸದಸ್ಯರೂ ಅವರ ಕೈಕೆಳಗೆ ಬೆಳೆದಿರತಕ್ಕಂಥಾವರು, ಅವರ ಶಿಷ್ಯರಾಗಿದ್ದಾರೆ. ಅಷ್ಟೇ ಅಲ್ಲ, ಅನೇಕ ಶಾಸಕರೂ ಸಹ ಅವರ ಕೈಕೆಳಗೆ ಬೆಳೆದಿದ್ದಾರೆ. ನಾನು ಮುಖ್ಯಮಂತ್ರಿಯಾಗಿರಬಹುದು, ಇನ್ನು ಕೆಲವರು ಮಂತ್ರಿಗಳಾಗಿರಬಹುದು ನಾವೆಲ್ಲಾ ಅವರ ಅನುಭವವನ್ನು ಪಡೆದಂಥಾವರೇ. ಅವರು ಹೇಳಿಕೊಟ್ಟಂಥಾ ಮಾರ್ಗದ ದಾರಿಯಲ್ಲೇ ಅವರು ಯಾವರೀತಿ ಆಡಳಿತ ನಡೆಸುತ್ತಾ ಇದ್ದರು ಆ ರೀತಿಯಲ್ಲೇ ನಾವು ನಡೆಯಬೇಕಾಗಿದೆ. ಯಾವ ನಿರ್ಣಯವನ್ನು ಕೈಗೊಳ್ಳಬೇಕಾದರೂ ಸಹ ಅವರು ಹೇಳಿಕೊಟ್ಟ ಮಾರ್ಗದಲ್ಲಿ ಹೋಗಬೇಕಾಗಿದೆ, ಏತಕ್ಕೆಂದರೆ ಆ ರೀತಿಯಾಗಿ ನಮ್ಮನ್ನು ಅವರು ಬೆಳೆಸಿದ್ದರು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಅವರ ಜೊತೆಯಲ್ಲೇ ಪಕ್ಷದ ಕಾರ್ಯದರ್ಶಿಯಾಗಿ, ಮಂತ್ರಿಯಾಗಿ, ಸದಸ್ಯನಾಗಿ ಕೆಲಸ ಮಾಡಿರುವುದರಿಂದ ಹೇಳುತ್ತಿದ್ದೇನೆ. ಅದರಲ್ಲೂ ಯೂತ್ ಕಾಂಗ್ರೆಸ್ ಸದಸ್ಯನಾಗಿ ಕೆಲಸ ಮಾಡುತ್ತಿದ್ದಾಗ ವೈಯುಕ್ತಿಕವಾಗಿ ನನ್ನ ಅವರ ಬಾಂಧವ್ಯ ಅಷ್ಟು ಬೆಳೆದಿದ್ದುದರಿಂದ ನಾನು ಅನೇಕ ವಿಷಯಗಳನ್ನು ಅವರಿಂದ ತಿಳಿದುಕೊಂಡಿದ್ದೇನೆ. ಅವರ ಅನುಭವವನ್ನು ತಿಳಿದುಕೊಳ್ಳುವುದು ಅಷ್ಟು ಸುಲಭವಲ್ಲ, ಅವರು ನಮ್ಮ ರಾಜ್ಯ ಒಂದರಲ್ಲೇ ಹೆಸರು ಪಡೆದಿಲ್ಲ, ಹೊರಗಿನ ರಾಜ್ಯದಲ್ಲೂ, ರಾಷ್ಟ್ರ ಮಟ್ಟದಲ್ಲೂ ಚೆನ್ನಾಗಿ ಕೆಲಸ ಮಾಡಿ ಹೆಸರುವಾಸಿಯಾಗಿದ್ದರು, ಯಾವುದೇ ರಾಷ್ಟ್ರಕ್ಕೆ ಹೋದರೂ ಕೂಡ ಹಿಂದುಳಿದ ವರ್ಗದವರ, ದೀನದಲಿತರ ಬಗ್ಗೆ ಶ್ರೀಮಾನ್ ಡಿ. ದೇವರಾಜ ಅರಸ್‌ರವರು ಏನು ಮಾಡುತ್ತಿದ್ದರು ಎನ್ನುವ ಬಗ್ಗೆ ವಿಷಯಗಳನ್ನು ನಾವು ಅನೇಕ ಸಂದರ್ಭಗಳಲ್ಲಿ ಕೇಳುತ್ತಿದ್ದೇವೆ. ಅವರು ಏನು ಹೇಳುತ್ತಾ ಇದ್ದರು ಎಂದರೆ ಕಮ್ಯುನಿಸ್ಟೇತರರ ರಾಜ್ಯಗಳಲ್ಲೂ ಕೂಡ ಈ ಹಿಂದುಳಿದವರ ಹಾಗೂ ಈ ದೀನದಲಿತರ ಏನೊಂದು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದರೋ ಅದಕ್ಕಿಂತಲೂ ಒಂದು ಹೆಚ್ಚಿನ ಬದಲಾವಣೆಯಲ್ಲಿ ನಮ್ಮ ರಾಜ್ಯದಲ್ಲಿ ಬದಲಾವಣೆ ಮಾಡಿ ಕೆಲಸಕಾರ್ಯಗಳನ್ನು ಕೈಗೊಂಡಿದ್ದಾರೆ ಎನ್ನುವ ಮಾತನ್ನು ಹೇಳುತ್ತಿದ್ದರು. ಅಂಥಾ ಒಂದು ವೈಶಿಷ್ಟ್ಯ ವ್ಯಕ್ತಿ ಇವರಾಗಿದ್ದರು. ವಿರೋಧ ಪಕ್ಷದಲ್ಲಿದ್ದಾಗಲೂ ಅದೇ ಸ್ಥೈರ್ಯದಿಂದ ಕೆಲಸ ಮಾಡಿದ್ದಾರೆ, ಅಧಿಕಾರ ಇರಲಿ, ಅಧಿಕಾರ ಇಲ್ಲದೇ ಇರಲಿ ಅದರ ಬಗ್ಗೆ ಏನೂ ನೋಡದೆ ಬಹಳ ಸ್ಥೈರ್ಯದಿಂದ ಕೆಲಸ ಮಾಡಿಕೊಂಡು ಹೋಗುವಂಥಾ ವ್ಯಕ್ತಿಯಾಗಿದ್ದರು. ಇಂಥಾ ಒಂದು ಸ್ಥಾನವನ್ನು ಈವೊತ್ತು ತುಂಬುವುದು ಬಹಳ ಕಷ್ಟವಾಗಿದೆ. ತಮಗೆ ಹೇಳಬೇಕಾದರೆ ಈ ವಿರೋಧ ಪಕ್ಷದವರನ್ನೆಲ್ಲಾ ಒಂದು ಸಂಘಟನೆ ಮಾಡಬೇಕೆಂದು ದೇಶಕ್ಕೆ ಒಂದು ಮಾದರಿ ಮಾಡಿಕೊಡಬೇಕೆಂದು ಈವೊತ್ತಿನ ದಿವಸ ಅವರು ಆಶೆಪಟ್ಟುಕೊಂಡಿದ್ದರು, ಮುಂದೆ ಏನಾಗಬಹುದೆಂದು ಚೆನ್ನಾಗಿ ತಿಳಿದಂಥಾ ವ್ಯಕ್ತಿ ಇವರಾಗಿದ್ದರು. ಸಾಮಾನ್ಯವಾಗಿ ತಮ್ಮ ಕೈಕೆಳಗಿದ್ದಂಥಾವರನ್ನು ಚೆನ್ನಾಗಿ ತರಬೇತಿ ಮಾಡುವ ವ್ಯಕ್ತಿ ಇವರಾಗಿದ್ದರು. ಅಂಥಾವರು ಈವತ್ತು ನಮ್ಮ ಮುಂದೆ ಇಲ್ಲ. ತಮಗೆಲ್ಲಾ ಹೇಳಬೇಕಾದರೆ ಶ್ರೀಮಾನ್ ಡಿ. ದೇವರಾಜ ಅರಸ್‌ರವರು ನಮ್ಮ ''ಗುರುಗಳಾಗಿದ್ದರು'' ಎಂದು ಹೇಳುತ್ತೇನೆ. ಅದಕ್ಕಾಗಿ ನಾವು ಅವರಿಗೆ ಒಂದು ಗುರುಕಾಣಿಕೆಯನ್ನು ಸಲ್ಲಿಸಲೇಬೇಕು. ಅವರಿಗೆ ನಾವು ಒಂದು ಗುರುಕಾಣಿಕೆಯನ್ನು ಸಲ್ಲಿಸದೇ ಹೋದರೆ ನಾವು ಮಂತ್ರಿಗಳಾಗಿರುವುದು, ಸದಸ್ಯರಾಗಿರುವುದು ವ್ಯರ್ಥ ಎಂದು ನಾನು ತಿಳಿದುಕೊಂಡಿದ್ದೇನೆ, ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಆ ಒಂದು ಗುರುಕಾಣಿಕೆ ಏನು ಎಂದರೆ ''ವಿಧಾನಸೌಧದ ಹತ್ತಿರ'' ಶ್ರೀಮಾನ್ ಡಿ ದೇವರಾಜ ಅರಸರ ಒಂದು ''ಶಿಲಾಮೂರ್ತಿ'' ಸರ್ಕಾರದ ಪರವಾಗಿ ಕಟ್ಟಿಸುವುದು ಒಂದು, ಎರಡನೆಯದಾಗಿ ಶ್ರೀಮಾನ್ ಡಿ. ದೇವರಾಜ ಅರಸ್‌ರವರು ಹಿಂದುಳಿದವರ ಬಗ್ಗೆ ಏನು ದುಡಿಯುತ್ತಿದ್ದರೋ ಅದರ ಬಗ್ಗೆ ಒಂದು ಪರಿಶೋಧನಾ ಸಂಸ್ಥೆ ''ರೀಸರ್ಚ್ ಇನ್‌ಸ್ಟಿಟ್ಯೂಟ್'' ಅಂದರೆ ಒಂದು ಸಂಶೋಧನಾ ಕೇಂದ್ರವನ್ನು ರಾಷ್ಟ್ರಮಟ್ಟದಲ್ಲಿ ಅವರ ಹೆಸರಿನಲ್ಲಿ ನಮ್ಮ ರಾಜ್ಯದಲ್ಲಿ ಅಂದರೆ ಬೆಂಗಳೂರಿನಲ್ಲಿ ಸ್ಥಾಪನೆ ಮಾಡುವುದು ಈ ಎರಡೂ ಕೆಲಸವನ್ನು ಸರ್ಕಾರದ ಪರವಾಗಿ ಮಾಡಬೇಕೆಂದಿದ್ದೇವೆ. ಈ ಹಿಂದುಳಿದವರ ಆರ್ಥಿಕ

ಬಗ್ಗೆ ಯಾವ ರೀತಿ ಸುಧಾರಣೆ ಮಾಡಬೇಕು ಎನ್ನುವುದನ್ನು ತಿಳಿದು ರಾಷ್ಟ್ರಮಟ್ಟದಲ್ಲಿ ಬೆಂಗಳೂರಿನಲ್ಲಿ ರೀಸರ್ಚ್ ಇನ್‌ಸ್ಟಿಟ್ಯೂಟ್ ಒಂದನ್ನು ದೇವರಾಜ್ ಅರಸ್‌ರವರ ಹೆಸರಿನಲ್ಲಿ ಸ್ಥಾಪನೆ ಮಾಡಿದರೆ ಇದಕ್ಕಿಂತ ಹೆಚ್ಚಿನ ಗುರು ಕಾಣಿಕೆ ಬೇರೆ ಏನೂ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಕೇಂದ್ರ ಸರ್ಕಾರವಾಗಲಿ ರಾಜ್ಯ ಸರ್ಕಾರವಾಗಲಿ ಈ ಬಗ್ಗೆ ಏನೇನು ಕ್ರಮತೆಗೆದುಕೊಳ್ಳಬೇಕಾಗುತ್ತದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ನಾನು ಮೊದಲೇ ಹೇಳಿದ ಹಾಗೆ ಹಿಂದುಳಿದವರ ಬಗ್ಗೆ ಈ ಒಂದು ಸಂಶೋಧನಾ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಲಿಕ್ಕೆ ನಾನು ಇಷ್ಟಪಟ್ಟಿದ್ದೇನೆ. ಹಾಗಾದರೆ ಅವರ ಆತ್ಮಕ್ಕೆ ಒಂದು ದೊಡ್ಡ ಶಾಂತಿ ಸಿಕ್ಕುವುದೂ ಅಲ್ಲದೆ ಹಿಂದುಳಿದವರ ಆರ್ಥಿಕ ಸ್ಥಿತಿ ಮತ್ತು ಅವರ ಅಭಿವೃದ್ಧಿ ಬಗ್ಗೆ ಹೆಚ್ಚಿನ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ ಶ್ರೀಮಾನ್ ಡಿ ದೇವರಾಜ ಅರಸ್‌ರವರು ಯಾವಾಗಲೂ ರಾಜ್ಯದ ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಗ್ಗೆ ಮನಸ್ಸಿಗೆ ಬಹಳ ಹಚ್ಚಿಕೊಳ್ಳುತ್ತಿದ್ದರು. ಅದರ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತಿದ್ದರು. ನಾನು ಮುಖ್ಯಮಂತ್ರಿಯಾದ ಮೇಲೂ ಸಹ ಒಂದೆರಡು ಸಾರಿ ಅವರನ್ನು ದೆಲ್ಲಿಯಲ್ಲಿ ಭೇಟಿ ಮಾಡಿದಾಗ ಕಾವೇರಿ ಜಲಾಶಯಗಳ ಬಗ್ಗೆ, ಈ ಕೆಲಸವನ್ನು ಬಹಳ ಬೇಗ ಮಾಡಿ ಅಲ್ಲಿಯ ಭೂಮಿಯನ್ನು ಬೇಗ ನೀರಾವರಿ ಮಾಡಬೇಕು ಎಂದು ಹೇಳುತ್ತಿದ್ದರು. ಜೊತೆಗೆ ನಮ್ಮ ರಾಜ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚು ಉತ್ಪತ್ತಿ ಮಾಡದೇ ಹೋದರೆ ನಮ್ಮ ರಾಜ್ಯದಲ್ಲಿರುವ ಕೈಗಾರಿಕೆಗಳು ಇತರೇ ರಾಜ್ಯಗಳಿಗಿಂತ ಬಹಳ ಹಿಂದುಬೀಳುತ್ತದೆ ಎಂದು ಹೇಳುತ್ತಿದ್ದರು. ಅವರು ಹೇಳಿದಂಥ ಈ ಮಾತುಗಳೆಲ್ಲವನ್ನೂ ನಾನು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಆ ಜನಗಳ ಅಭಿವೃದ್ಧಿ ಬಗ್ಗೆ ಕೆಲಸ ಮಾಡಲಿಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳುತ್ತೇನೆ. ಜೊತೆಗೆ ಈ ಎಲ್ಲಾ ಕಾರ್ಯಕ್ರಮಗಳಿಗೂ ಯಾವುದೇ ಪಕ್ಷಭೇದ ಇಲ್ಲದೆ ಎಲ್ಲರೂ ಸಹಕಾರ ಕೊಟ್ಟು ಕೆಲಸ ಮಾಡಿದರೆ ಕರ್ನಾಟಕ ರಾಜ್ಯದಲ್ಲಿ ಒಂದು ಹೊಸ ದಾರಿದೀಪವನ್ನು ತಂದುಕೊಟ್ಟಂತಾಗುತ್ತದೆ ಅಲ್ಲದೆ ರಾಜ್ಯದಲ್ಲಿ ಕ್ರಾಂತಿಕಾರಕವಾದ ಬದಲಾವಣೆಯಾಗುತ್ತದೆ. ಶ್ರೀಮಾನ್ ದೇವರಾಜ ಅರಸ್‌ರವರು ಬಹಳ ಹಿರಿಯರು ಅಲ್ಲದೆ ಎಲ್ಲರಿಗೂ ಮಾರ್ಗದರ್ಶಿಗಳಾಗಿದ್ದರು. ಅವರು ಈ ಹಿಂದೆ ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಸುಮಾರು ೧೦ ವರ್ಷಗಳ ಕಾಲ ಅವರ ಮಾರ್ಗದರ್ಶನದಲ್ಲಿ ಈ ರಾಜ್ಯದ ಸೂತ್ರಧಾರಿಗಳಾಗಿದ್ದರು ಅವರಿಗೆ ಎಲ್ಲರ ಮನಸ್ಸೂ ಚೆನ್ನಾಗಿ ಗೊತ್ತು. ಅವರು ಎಲ್ಲರ ಜೊತೆಗೂಡಿ ಕೆಲಸ ಮಾಡುತ್ತಿದ್ದರು. ಅಂಥವರನ್ನು ನಾವು ಈವತ್ತು ಕಳೆದುಕೊಂಡಿರುವಂಥಾದ್ದು ನಮ್ಮ ದುರ್ದೈವ ಎಂದು ಹೇಳಬಹುದು. ಅವರಿಗೆ ಇಷ್ಟು ಬೇಗ ಸಾವು ಬರುತ್ತದೆ ಎಂದು ನಾವ್ಯಾರೂ ನೆನಸಿರಲಿಲ್ಲ. ಅಲ್ಲದೆ ಅವರು ಅನೇಕ ಸಾರಿ ಕಾಯಿಲೆ ಬಿದ್ದ ವ್ಯಕ್ತಿಯೂ ಆಗಿರಲಿಲ್ಲ ಧೃಡಕಾಯರಾಗೇ ಇದ್ದರು. ಯಾವಾಗಲೂ ಆರೋಗ್ಯ ಚೆನ್ನಾಗೀ ಇರುತ್ತಿತ್ತು. ಅಂಥಾದ್ದರಲ್ಲಿ ಆಕಸ್ಮಿಕವಾಗಿ ಅವರು ಸಾವನ್ನಪ್ಪಿರುವುದು ನಮಗೆಲ್ಲಾ ಒಂದು ರೀತಿ ಕತ್ತಲೆಯಾದಂತೆ ಆಗಿದೆ. ಈ ರೀತಿ ದಾರಿ ತಪ್ಪುತ್ತದೆ ಎಂದು ನಾವು ಎಣಿಸಿರಲಿಲ್ಲ. ಆದರೆ ಸಾವು ಅನ್ನುವುದು ನಮ್ಮ ಕೈಯಲ್ಲಿ ಇಲ್ಲ. ಅದು ಭಗವಂತನ ಕೈಯಲ್ಲಿ ಇದೆ. ನಾನು ಮೊದಲೇ ಹೇಳಿದಂತೆ ಅವರು ರಾಜ್ಯಕ್ಕೆ ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಾವು ನಡೆದುಕೊಂಡರೆ, ನಾನು ಮೊದಲೇ ಹೇಳಿದ ಹಾಗೆ ಎರಡು ಮುಖ್ಯ ಅಂಶಗಳನ್ನು ಮಾಡಿದರೆ, ಬಹುಶಃ ಅವರ ಆತ್ಮಕ್ಕೆ ಶಾಂತಿ ಸಿಕ್ಕುತ್ತದೆ ಎಂದು ನನ್ನ ನಂಬಿಕೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ತೀರಾ ಹತ್ತಿರವಾಗಿ ಮೊದಲು ನಾನು ಅವರಲ್ಲಿ ಕೆಲಸ ಮಾಡಿದ್ದರಿಂದ ಅವರ ವಿಷಯಗಳೆಲ್ಲವನ್ನೂ ಚೆನ್ನಾಗಿ ತಿಳಿದುಕೊಂಡಿದ್ದೇನೆ. ಅವರು ನಮಗೆಲ್ಲಾ ದ್ರೋಣಾಚಾರ್ಯ ಇದ್ದ ಹಾಗೆ ಇದ್ದರು. ಅಂಥವರನ್ನು ನಾವು ಈವತ್ತು ಕಳೆದುಕೊಂಡಿದ್ದೇವೆ. ಅಂಥಾ ಒಂದು ಸ್ಥಾನವನ್ನು ಈವತ್ತು ಯಾರಿಂದಲೂ ಕೂಡ ತುಂಬುವುದಕ್ಕೆ ಆಗುವುದಿಲ್ಲ. ಅಂಥಾ ಒಂದು ಸ್ಥಾನವನ್ನು ಅವರು ಪಡೆದಿದ್ದರು. ಅಂಥಾ ಒಂದು ಗುರುವನ್ನು ನಾವು ಇಂದು ಕಾಣುತ್ತ ಇಲ್ಲ. ಹುಡುಕಿದರೆ ಸಿಕ್ಕುವುದೂ ಇಲ್ಲ. ಇಲ್ಲವೇ ಬೇರೆ ಕಡೆ ಹೋಗಿ ತೆಗೆದುಕೊಂಡು ಬರುವುದಕ್ಕಂತೂ ಆಗುವುದಿಲ್ಲ. ಅವರ ಜೊತೆಯಲ್ಲಿ ಕೆಲಸ ಮಾಡಿ, ಅವರ ಆಶೀರ್ವಾದವನ್ನು ಯಾರು ಪಡೆದಿರುತ್ತಾರೋ ಅಂಥವರಿಂದ ಆ ಸ್ಥಾನವನ್ನು ತುಂಬುವುದಕ್ಕೆ ಸಾಧ್ಯ, ಬೇರೆಯವರಿಗಂತೂ ಸಾಧ್ಯ ಇಲ್ಲ. ಪರಿಸ್ಥಿತಿ ಹಾಗೆ ಇದೆ. ಆದುದರಿಂದ ನಮ್ಮ ಗುರುಗಳಿಗೆ ಕೊಡಬೇಕಾದ ಕಾಣಿಕೆ ಏನೆಂದರೆ ಅವರ ಮನಸ್ಸಿನಲ್ಲಿ ರಾಜ್ಯದ ಬಗ್ಗೆ ಏನು ಒಂದು ಆತಂಕ ಇತ್ತೋ ಅದನ್ನು

ತಿಳಿದುಕೊಂಡು ಮುಂದುವರೆಸಿಕೊಂಡು ಹೋಗುವಂಥಾದ್ದು ಅತ್ಯಂತ ಮುಖ್ಯವಾದುದು. ಪಕ್ಷ ಭೇದಗಳಿಲ್ಲದೆ ಆ ಕೆಲಸಗಳನ್ನು ಸರ್ಕಾರ ಮಾಡಿಕೊಂಡು ಹೋಗುತ್ತದೆ ಎಂದು ಹೇಳುತ್ತೇನೆ. ಹಾಗಾದರೆ ನಮ್ಮ ರಾಜ್ಯದ ಜನತೆ ಶತ ಶತಮಾನಗಳಾದರೂ ಕೂಡ ಆ ಕೆಲಸ ಕಾರ್ಯಗಳನ್ನು ನೆನೆಸಿಕೊಂಡು ಹೋಗುತ್ತದೆ ಎಂದು ನನ್ನ ನಂಬಿಕೆ. ನಾನು ಮೊದಲೇ ಹೇಳಿದಹಾಗೆ ಮುಖ್ಯವಾಗಿ ಮೇಲೆ ಹೇಳಿದ ಎರಡು ಕಾರ್ಯಗಳನ್ನು ಸರ್ಕಾರ ಮಾಡಬೇಕೆಂದು ತೀರ್ಮಾನ ಮಾಡಿದೆ ಎಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇಷ್ಟು ಹೇಳುತ್ತಾ ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿ ನೀಡಲಿ ಮತ್ತು ಅವರ ಕುಟುಂಬಕ್ಕೂ ಶಾಂತಿಯನ್ನು ನೀಡಲಿ ಎಂದು ಹೇಳುತ್ತೇನೆ. ಅವರಿಗೆ ಇನ್ನೊಂದು ಆಘಾತ ಎಂದರೆ ದುಃಖ ವಿಪರೀತ ಆಗುವುದಕ್ಕೆ ಕಾರಣ ಕಳೆದ ೧½ ವರ್ಷದಲ್ಲಿ ಒಬ್ಬ ಮಗಳು ತೀರಿಹೋದಳು, ಮತ್ತು ಈಗ್ಗೆ ೧೮ ದಿವಸದ ಹಿಂದೆ ಒಬ್ಬ ತಮ್ಮ ತೀರಿ ಹೋದನು. ಯಾವಾಗಲೂ ಈ ಒಂದು ದುಃಖ ಇತ್ತು. ಜೊತೆಗೆ ಈಗ ಈ ಒಂದು ಕತ್ತಲು ಕವಿದಿದೆ. ಈ ಸಂದರ್ಭದಲ್ಲಿ ಅವರ ಕುಟುಂಬದವರಿಗೆ, ಅವರ ಪತ್ನಿಯವರಿಗೆ ಭಗವಂತನು ಶಾಂತಿಯನ್ನು ನೀಡಲಿ ಎಂದು ಪ್ರಾರ್ಥನೆ ಮಾಡಿ, ನಾನು ಈಗ ತಂದಿರತಕ್ಕಂಥಾ ನಿರ್ಣಯವನ್ನು ಈ ಸಭೆ ಸರ್ವಾನುಮತದಿಂದ ಒಪ್ಪಿ ಈ ದಿವಸದ ಸಭೆಯ ಕಾರ್ಯ ಕಲಾಪಗಳನ್ನು ಮುಂದೂಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯವನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಶ್ರೀಮಾನ್ ದೇವರಾಜ ಅರಸುರವರು ನನಗೆ ಪರಿಚಯವಾದುದು ಈಚೀಚೆಗೆ, ಅವರು ಮಂತ್ರಿಗಳಾಗಿದ್ದಾಗ ಮತ್ತು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದಾಗ ಅವರ ಕೆಲಸ ಮತ್ತು ಧೋರಣೆಗಳ ಬಗ್ಗೆ ಪತ್ರಿಕೆಗಳ ಮೂಲಕ ಓದಿ ಅವರ ಕೆಲಸವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದವರಲ್ಲಿ ನಾನೂ ಒಬ್ಬ. ಅಲ್ಲದೆ, ಅವರನ್ನು ಕಟುವಾಗಿ ಟೀಕೆ ಮಾಡುವವರಲ್ಲಿ ನಾನು ಕೂಡ ಒಬ್ಬ. ಆದರೆ ಅವರ ಬಗ್ಗೆ ಹೆಚ್ಚಿನ ತಿಳಿವಳಿಕೆ ನನಗೆ ಬಂದದ್ದು ಈ ಸಭೆಯ ಸದಸ್ಯನಾದ ಮೇಲೆ ಮತ್ತು ೧೯೮೦ರಲ್ಲಿ ಅವರು ಮುಖ್ಯಮಂತ್ರಿಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ವಿರೋಧ ಪಕ್ಷದ ನಾಯಕರಾಗಿ ಬಂದಮೇಲೆ ಇನ್ನೂ ಹೆಚ್ಚಿನ ಪರಿಚಯ ಅವರ ಬಗ್ಗೆ ನನಗೆ ಉಂಟಾಯಿತು. ಈ ಸ್ವಲ್ಪ ಕಾಲದಲ್ಲಿ ನಾನು ಅವರ ಬಗ್ಗೆ ಹಲವಾರು ಸಲ ಚಿಂತನೆ ಮಾಡಿದ್ದೇನೆ. ಆದರೆ ಅತ್ಯಂತ ದುಃಖಕರವಾದ ವಿಚಾರವೆಂದರೆ ಭಾನುವಾರ ೧೦-೧೧ ಗಂಟೆಯ ಸಮಯದಲ್ಲಿ ಅವರು ನಮ್ಮನ್ನು ಭೇಟಿ ಮಾಡಬೇಕೆಂದು ಅವರ ಮನೆಗೆ ಕರೆಸಿಕೊಂಡರು ಶ್ರೀಯುತರುಗಳಾದ ಬೊಮ್ಮಾಯಿಯವರು, ಪಟೇಲರು, ಪೆರುಮಾಳ್‌ರವರು ಮತ್ತು ನಾನು ಹೀಗೆ ೪ ಜನರು ಅವರ ಮನೆಗೆ ಹೋದೆವು. ಸ್ವಲ್ಪ ಹೊತ್ತಿನ ನಂತರ ಜಾರ್ಜ್ ಫರ್ನಾಂಡೀಸ್‌ರವರು ಕೂಡ ಅವರ ಮನೆಗೆ ಬಂದರು. ಅವತ್ತಿನ ದಿವಸ ಅವರು ಬಹಳ ಹರ್ಷಚಿತ್ತರಾಗಿದ್ದರು, ಸ್ನೇಹಮಯವಾದ ವಾತಾವರಣವಿತ್ತು. ಪಟೇಲರು ಪೆರುಮಾಳರು ಮತ್ತು ನಾನು ಶಿವಮೊಗ್ಗಕ್ಕೆ ಹೋಗಿ ವಾಪಸ್ಸು ಬರುತ್ತಿದ್ದ ಸಮಯದಲ್ಲಿ ಕಾರಿನ ಅಪಘಾತವಾಯಿತು. ಆದರೆ ನಮಗೆ ಯಾರಿಗೂ ತೊಂದರೆಯಾಗಲಿಲ್ಲ ಎಂದು ಹೇಳಿದನು. ಆಗ ಅವರು ಹೇಳಿದರು, ಯಾವುದೋ ಒಂದು ಕಾರಣಕ್ಕೋಸ್ಕರ ವಿಧಿ ಉಳಿಸಿದೆ ಎನ್ನುವ ಮಾತಿನಿಂದ ಚರ್ಚೆ ಪ್ರಾರಂಭವಾಯಿತು. ಈಶ್ವರವಾದ. ನಿರೀಶ್ವರವಾದದಿಂದ ಹಿಡಿದು ದೇಶದ ವಿದ್ಯಮಾನಗಳ ಬಗ್ಗೆ ೩ ಗಂಟೆಗಳಕಾಲ ದೀರ್ಘವಾಗಿ ಚರ್ಚೆ ನಡೆಯಿತು. ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ನಡೆದರೂ ನನ್ನ ಮನಸ್ಸಿನಲ್ಲಿ ಬಹಳ ಸ್ಪಷ್ಟವಾಗಿ ನೆನಪಿರತಕ್ಕ ವಿಚಾರವೆಂದರೆ, ಈ ದೇಶವನ್ನಿರಕ್ಕ ಎಲ್ಲ ವಿರೋಧಿ ರಾಜಕೀಯ ಪಕ್ಷಗಳು ಒಂದಾಗಬೇಕು ಮತ್ತು ಆಡಳಿತ ಪಕ್ಷದ ವಿರುದ್ಧವಾಗಿ ಎದ್ದುನಿಂತು ಆಡಳಿತ ಪಕ್ಷವನ್ನು ಹತೋಟಿಯಲ್ಲಿಡತಕ್ಕ ಕೆಲಸ ಮಾಡಬೇಕೆಂಬ ವಿಚಾರವನ್ನು ಆ ದಿನ ಪ್ರಸ್ತಾಪ ಮಾಡಿದೆವು, ಎರಡು ಗಂಟೆಯ ಸಮಯದಲ್ಲಿ ನಾವು ಊಟಕ್ಕೆ ಹೊರಡುತ್ತೇವೆಂದು ಹೊರಟಾಗ ನನ್ನನ್ನು ಮತ್ತು ಬೊಮ್ಮಾಯಿಯವರನ್ನು ಹೊರಗಡೆ ಬಂದು ಮಾತನಾಡಿಸಿ ನಾಳೆ ವಿಧಾನ ಸಭೆ ಸೇರುತ್ತಿದೆ, ನಾಳೆ ಎಲ್ಲರೂ ಸೇರೋಣ ಎಂದು ಹೇಳಿ ಕಳುಹಿಸಿದರು. ಆದರೆ ಮಾರನೇ ದಿನ ಸೋಮವಾರ ಬಂತೇ ವಿನಹ ಅವರನ್ನು ಭೇಟಿ ಮಾಡಲಿಕ್ಕೆ ಆಗಲಿಲ್ಲ. ದಿ. ದೇವರಾಜ ಅರಸುರವರ ಬಗ್ಗೆ ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ನಾವು ಅವುಗಳನ್ನು ಮತ್ತೆ ಪುನರುಚ್ಚಾರ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಅವರ ಬಗ್ಗೆ ನನಗೆ ಕಾಣತಕ್ಕ ಕೆಲವು ಮಾತುಗಳನ್ನು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಅವರು ಸಾಮಾಜಿಕ ನ್ಯಾಯದ ಆಧಾರದ ಮೇಲೆ

ಆಡಳಿತವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿದರು, ತತ್ವ ಹೇಳುವುದು ಸುಲಭ. ಪ್ರಚಾರ ಮಾಡುವುದು ಸುಲಭ, ಆದರೆ ಅಧಿಕಾರದ ಶಕ್ತಿ ಕೈಗೆ ಬಂದಾಗ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಆಡಳಿತ ಸೂತ್ರಗಳನ್ನು ಅಳವಡಿಸಿಕೊಂಡು ಆಡಳಿತ ನಡೆಸುವುದು ಸಾಮಾನ್ಯ ಕೆಲಸವಲ್ಲ. ಅದನ್ನು ಮುಖ್ಯ ಮಂತ್ರಿಯಾಗಿ ಅವರು ಆಡಳಿತದಲ್ಲಿ ಕಾರ್ಯರೂಪಕ್ಕೆ ತಂದರು. ಸಾಮಾಜಿಕ ನ್ಯಾಯದ ತತ್ವವನ್ನು ಅಳವಡಿಸಿಕೊಂಡು ಅದನ್ನು ಜಾರಿಗೆ ತಂದು ತೋರಿಸಿಕೊಟ್ಟಂತಹ ಸಾಹಸದ ಕೆಲಸ ದೇವರಾಜ ಅರಸರದ್ದು. ಎರಡನೆಯದಾಗಿ, ಹಿಂದುಳಿದವರ, ಹರಿಜನ ಗಿರಿಜನರ ಬಡವರ ಮತ್ತು ಯಾರೂ ಕೂಡ ಅವರ ಕಡೆ ಗಮನ ಹರಿಸದೆ ಇರತಕ್ಕವರ ಉದ್ಧಾರಕ್ಕಾಗಿ ಅಪಾರವಾಗಿ ಶ್ರಮಿಸಿದ್ದಾರೆ. ಹಿಂದುಳಿದವರ, ಬಡವರ ಹಾಗೂ ಅಲ್ಪ ಸಂಖ್ಯಾತರ ಬಗ್ಗೆ ಹೆಚ್ಚಿನ ಕಳವಳವಾಗಲಿ ಅಥವಾ ಹೆಚ್ಚಿನ ಆಸಕ್ತಿಯಾಗಲಿ ಇಂದಿನ ಸರ್ಕಾರಗಳು ತಾಳಿಲ್ಲ ಎಂಬುದನ್ನು ತಾವೆಲ್ಲರೂ ಹೇಳಿದ್ದೀರಿ. ಆದರೆ ಅವರು ಅಧಿಕಾರಕ್ಕೆ ಬಂದ ಮೇಲೆ ಹಿಂದುಳಿದ ವರ್ಗದವರಿಗೆ, ಹರಿಜನ–ಗಿರಿಜನರಿಗೆ, ಅಲ್ಪಸಂಖ್ಯಾತರಿಗೆ ಸಮಾಜದಲ್ಲಿ ಏನೇನು ಗೌರವ ಸ್ಥಾನಮಾನಗಳು ದೊರೆಯಬೇಕೋ ಅವೆಲ್ಲ ದೊರೆಯುವುದಕ್ಕೆ ಪ್ರಯತ್ನ ಮಾಡಿದರು. ಅದಕ್ಕೆ ಶಾಸ್ತ್ರೀಯವಾಗಿ, ತತ್ವ ಆಧಾರದ ರೀತಿಯಲ್ಲಿ ನಿರೂಪಣೆ ಕೊಟ್ಟು ಹಿಂದುಳಿದ ಆಯೋಗವನ್ನು ರಚನೆ ಮಾಡಿ ಅದರಿಂದ ಮಾಹಿತಿ ಸಂಗ್ರಹ ಮಾಡಿ ಅದರ ತತ್ವಾಧಾರದ ಮೇಲೆ, ಶತಶತಮಾನಗಳಿಂದ ತುಳಿಯಲ್ಪಟ್ಟಂತಹ ಹಿಂದುಳಿದವರಿಗೆ, ಹರಿಜನ–ಗಿರಿಜನರಿಗೆ ಸಮಾಜದಲ್ಲಿ ಒಂದು ಗೌರವ ಸ್ಥಾನಮಾನವನ್ನು ಕೊಟ್ಟು ಅವರು ಮುಂದುವರಿಯುವುದಕ್ಕೆ ಪ್ರಯತ್ನ ಮಾಡಿ ಬಹುಮಟ್ಟಿಗೆ ಯಶಸ್ವಿಯಾಗಿದ್ದರು ಅರಸುರವರು. ಇದು ಬಹಳ ಮುಖ್ಯವಾದ ವಿಚಾರ. ಇದರ ಜೊತೆಗೆ ಇನ್ನೂ ಅನೇಕ ಸಾಮಾಜಿಕ ವಿಷಯಗಳನ್ನು ಆಡಳಿತ ಸೂತ್ರಗಳಲ್ಲಿ ಅಳವಡಿಸಿ ಜಾರಿಗೆ ತಂದಿದ್ದರು. ಅವರು ನಿಜಕ್ಕೂ ನೈಜ ಸಮಾಜವಾದಿಯಾಗಿದ್ದರು, ಮತ್ತು ಪ್ರಜಾಪ್ರಭುತ್ವವಾದಿಯಾಗಿದ್ದರು. ಅವರು ಬರೀ ಮಾತಿನ ಮಳೆಗರೆಯದೆ ಕಾರ್ಯಸಾಧನೆಯ ಮುಖಾಂತರ ಈ ತತ್ವಗಳನ್ನು ಅನುಷ್ಠಾನಕ್ಕೆ ತರುವ ಮೂಲಕ ಪರಿಣಾಮಕಾರಿಯಾಗಿ ಕೆಲಸ ಮಾಡಿದ್ದಾರೆ. ಸಾಮಾನ್ಯವಾಗಿ ಮನುಷ್ಯ ತನ್ನ ಅಧಿಕಾರವನ್ನು ಬಿಟ್ಟುಕೊಡುವುದಿಲ್ಲ. ಅದು ಎಂತಹ ಸಣ್ಣ ಅಧಿಕಾರವಾಗಿರಲಿ ಅದನ್ನು ಬಿಟ್ಟುಕೊಡುವುದಕ್ಕೆ ಇಷ್ಟಪಡುವುದಿಲ್ಲ. ಆದರೆ ದಿ. ದೇವರಾಜ ಅರಸುರವರು ಅದಕ್ಕೆ ಹೊರತಾಗಿದ್ದರು. ಅವರು ತತ್ವಾಧಾರದ ಮೇಲೆ ಜೀವನ ನಡೆಸಿದವರು ಮತ್ತು ರಾಜಕೀಯದಲ್ಲಿ ಕೆಲಸ ಮಾಡಿದವರು. ತತ್ವಗಳಿಗೆ ಮೌಲ್ಯಗಳಿಗೆ ಚ್ಯುತಿ ಬಂದ ಸಮಯದಲ್ಲಿ ಅಧಿಕಾರವನ್ನು ಕಿತ್ತೊಗೆದು ತತ್ವಗಳನ್ನು ಎತ್ತಿ ಹಿಡಿಯಬೇಕು, ಮೌಲ್ಯಗಳನ್ನು ಎತ್ತಿಹಿಡಿಯಬೇಕೆಂದು ಅಧಿಕಾರವನ್ನು ತ್ಯಜಿಸಿ ಹೊರಗೆ ಬಂದಂತಹ ಧೀಮಂತ ವ್ಯಕ್ತಿ ಅವರು. ಈ ದೇಶವನ್ನು ಪೀಡಿಸತಕ್ಕ ಫ್ಯಾಸಿಸಂನ ವಿರುದ್ಧ ಹೋರಾಟ ಮಾಡಬೇಕೆಂದು ಹೊರಗೆ ಬಂದವರು ಅವರು. ನಾನು ಅವರಲ್ಲಿ ಕಂಡಂತಹ ಎರಡು ಮುಖ್ಯ ಗುಣಗಳು ಎಂದರೆ ಯಾವ ಒಂದು ಆಸೆಯೂ ಇಲ್ಲದೆ ಅಧಿಕಾರವನ್ನು ಕಿತ್ತೊಗೆದು ಹೊರಗೆ ಬಂದು ಫ್ಯಾಸಿಸಂನ ವಿರುದ್ಧ ಹೋರಾಡಲು ಈ ದೇಶದಲ್ಲಿ ಸಂಘಟನೆಯಾಗಬೇಕು, ವಿರೋಧ ಪಕ್ಷಗಳೆಲ್ಲ ಒಂದಾಗಬೇಕೆಂಬ ವಿಚಾರದಲ್ಲಿ ಅವರು ಬಹಳವಾಗಿ ಶ್ರಮಪಟ್ಟರು. ಇದನ್ನು ನಾನು ಸ್ವತಃ ನೋಡಿದ್ದೇನೆ. ಈಚೀಚಿನ ತಿಂಗಳಲ್ಲಿ ಅವರ ಜೊತೆಯಲ್ಲಿ ನಾನು ಪ್ರವಾಸ ಮಾಡಿ ಪ್ರಚಾರ ಕೆಲಸ ಮಾಡತಕ್ಕ ಸಮಯದಲ್ಲಿ ಅವರು ತಮ್ಮ ದೇಹಶ್ರಮವನ್ನು ಎಣಿಸದೆ ಸ್ವಲ್ಪವೂ ಆಲಸ್ಯವನ್ನು ತಾಳದೆ ಬೆಳಿಗ್ಗೆಯಿಂದ ರಾತ್ರಿ ೨-೩ ಗಂಟೆಗಳವರೆಗೆ ಕೆಲಸ ಮಾಡುವುದನ್ನು ನೋಡಿದ್ದೇನೆ, ಹಿಂದುಳಿದ ವರ್ಗದವರು, ಹರಿಜನ ಗಿರಿಜನರು ಅವರ ಬಗ್ಗೆ ಏನನ್ನುತ್ತಾರೆ ಮತ್ತು ಅವರಿಂದ ಏನನ್ನು ಇನ್ನೂ ಬಯಸುತ್ತಾರೆ ಎಂಬುದನ್ನು ನಾನು ಸ್ವಂತ ನೋಡಿದ್ದೇನೆ. ಅದು ಅವರ ವ್ಯಕ್ತಿತ್ವದ ಬಗ್ಗೆ ಜನ ತೋರಿಸತಕ್ಕ ಗೌರವ ಎಂದು ನಾನಾದರೂ ಭಾವಿಸಿದ್ದೇನೆ. ಅಂಥ ವ್ಯಕ್ತಿಯನ್ನು ಇವತ್ತು ಸಾವು ಕಳೆದುಕೊಂಡಿದ್ದೇವೆ. ಮಾನ್ಯ ಸಭಾನಾಯಕರು ಹೇಳಿದ ಹಾಗೆ ಅವರ ಹೆಸರು ಶಾಶ್ವತವಾಗಿ ನಿಲ್ಲತಕ್ಕದ್ದು, ಇವತ್ತು ಅವರು ಅಮರರಾಗಿದ್ದಾರೆ. ಅವರು ಪ್ರಾರಂಭ ಮಾಡಿ ಮುಗಿಸದ ಕೆಲಸಗಳನ್ನು ನಾವು ಪೂರ್ತಿ ಮಾಡುವುದಕ್ಕೆ ಪ್ರಯತ್ನ ಮಾಡೋಣವೆಂದು ಹೇಳಿ, ನಾವು ಈ ದಿನ ಆ ಒಂದು ಪ್ರತಿಜ್ಞೆಯನ್ನು ಮಾಡೋಣವೆಂದು ಅರಿಕೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ (ಚನ್ನಗಿರಿ).—ಸನ್ಮಾನ್ಯ ಅಧ್ಯಕ್ಷರೇ ಈಗಾಗಲೇ ತಾವು ಮತ್ತು ಸದನದ ನಾಯಕರು ವ್ಯಕ್ತಪಡಿಸಿರತಕ್ಕ ಗಂಭೀರ ಭಾವನೆಗಳನ್ನು ಮತ್ತು ಅವರು ಮಂಡಿಸಿರತಕ್ಕ ನಿರ್ಣಯವನ್ನು ಬೆಂಬಲಿಸಿ ನಾಲ್ಕು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ದಿ. ದೇವರಾಜ ಅರಸುರವರ

ಸಂಪರ್ಕ ಮತ್ತು ರಾಜಕೀಯ ಸಹವಾಸ ನನಗೆ ಇತ್ತೀಚಿನದು. ತಮಗೆ ತಿಳಿದಿರುವ ಹಾಗೆ, ನಾನು ಬಹಳ ವೈಚಾರಿಕವಾಗಿ ಲೋಹಿಯಾರವರ ವಿಚಾರದಿಂದ ಪ್ರಭಾವಿತನಾಗಿ ರಾಜಕಾರಣದಲ್ಲಿರತಕ್ಕವನು. ಅವರ ವಿಚಾರಗಳಿಂದ ನಾನು ಎಷ್ಟು ಪ್ರಭಾವಿತನಾದೆನೋ ಅಷ್ಟೇ ಇವರ ಆಚರಣೆ ಮತ್ತು ಆಯಾಮಗಳು ನನ್ನ ಮನಸ್ಸಿಗೆ ಹಿಡಿಸುತ್ತಿದ್ದವು. ನಿಜವಾಗಿಯೂ ಬಡತನವನ್ನು ಅವರು ಅರಿತಿದ್ದರಿಂದ ಮನವರಿಕೆಯಾಗಿತ್ತು. ಬಡವರ ಬಗ್ಗೆ ಮಾತನಾಡುವಾಗ ಹೃದಯದ ತಳದಿಂದ ಅವರಿಗೆ ಭಾವನೆಗಳು ಬರುತ್ತಿದ್ದವು. ಅದೊಂದು ವಿಶಿಷ್ಟ ಗುಣ ಅವರಲ್ಲಿತ್ತು.

ಹಿಂದುಳಿದ ವರ್ಗಗಳ ಹಾಗೂ ಜಾತಿಯ ಸಂಘರ್ಷಣೆಯನ್ನುಂಟು ಮಾಡಬೇಕೆಂಬ ಒಂದು ಹಂಬಲದಲ್ಲಿ ಅವರು ತೊಡಗಿದ್ದರು. ಆದರೆ ನಿಜವಾಗಿಯೂ ಹಿಂದುಳಿದ ವರ್ಗದವರ ಅಭಿವೃದ್ಧಿಯಾಗುವುದಕ್ಕೆ ಕೆಲಸ ಮಾಡಬೇಕು. ಎಲ್ಲರಿಗೂ ಅನುಕೂಲವಾಗಬೇಕು ಎನ್ನತಕ್ಕಂತಹ ಒಂದು ಹಂಬಲ ಅವರ ಮನಸ್ಸಿನಲ್ಲಿ ಇತ್ತು. ನಮ್ಮ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಮೊನ್ನೆ ನಾವೆಲ್ಲ ಸೇರಿ ಕೆಲವು ವಿಷಯಗಳನ್ನು ಚರ್ಚೆ ಮಾಡಿದ್ದೆವು ಅವರು ಆ ದಿನ ಎಂದೂ ಇಲ್ಲದ ಖುಷಿಯಲ್ಲಿದ್ದರು. ಆ ದಿನ ನಾವು ಸುಮಾರು ಮೂರು ಗಂಟೆಗಳ ತನಕ ಮಾತನಾಡಿದೆವು. ಆ ದಿನ ಅವರು ಅಷ್ಟು ಆರೋಗ್ಯವಾಗಿದ್ದರು. ಆ ರೀತಿ ಆರೋಗ್ಯವಾಗಿದ್ದಂತಹವರು ಹೃದಯಾಘಾತದಿಂದ ಸತ್ತರು ಎಂದು ಕೇಳಿದಾಗ ನಾನು ನಂಬುವುದಕ್ಕೆ ಸಾಧ್ಯವಾಗಲಿಲ್ಲ. ಅವರನ್ನು ನಾನು ನಿಜವಾಗಿಯೂ ವಜ್ರದ ಹೃದಯದವರೆಂದು ನಂಬಿದ್ದೆ. ಆದರೆ ಪ್ರಕೃತಿ ಮನುಷ್ಯನನ್ನು ಯಾವ ಕಾಲದಲ್ಲಿ ಯಾವ ಗಳಿಗೆಯಲ್ಲಿ ಸೋಲಿಸುತ್ತದೆಯೋ ಯಾರಿಗೂ ಗೊತ್ತಿಲ್ಲ. ಕಡೆಗೆ ಪ್ರಕೃತಿಯ ಜೊತೆಯಲ್ಲಿ ಸೆಣದಾಟ ಮಾಡಿ ಸೋಲನ್ನು ಒಪ್ಪಿಕೊಳ್ಳಲೇಬೇಕು. ಇಂತಹ ಧೀಮಂತರು ಹಾಗೂ ಧೈರ್ಯವಂತ. ಅನುಕಂಪವನ್ನು ಹೊಂದಿದ್ದ ಹೃದಯವಾಗಿತ್ತು. ಅವರ ಒಂದು ಸಾಹಸವನ್ನು ನಮ್ಮ ಸದನದ ನಾಯಕರು ಬಹಳ ಒಳ್ಳೆಯ ಶಬ್ದಗಳನ್ನು ಬಳಸಿ ಹೇಳಿದ್ದಾರೆ. ಶ್ರೀಮಾನ್ ದೇವರಾಜ ಅರಸ್‌ರವರು ನಮಗೆಲ್ಲ ಗುರು ಎಂದು ಹೇಳಿದ್ದಾರೆ. ಈ ಮಾತಿಗೆ ವಿರೋಧದಂತಹ ಸಂದರ್ಭದಲ್ಲಿ ನಾವು ಇರುವಾಗ ಹೆಚ್ಚು ಮಾತನಾಡುವುದು ಸೂಕ್ತವಲ್ಲವೆಂದು ಭಾವಿಸಿ ಶ್ರೀಮಾನ್ ದೇವರಾಜ ಅರಸರ ವಿಚಾರದಲ್ಲಿ ನಾವು ಸಾಮಾಜಿಕವಾಗಿ, ಆರ್ಥಿಕವಾಗಿ ತಳಪಾಯವನ್ನು ಹಾಕಿಕೊಂಡು ಅವರ ಆಸೆಗಳು ಕಾರ್ಯರೂಪಕ್ಕೆ ಬರತಕ್ಕಂತಹ ರಾಜಕೀಯ ಶಕ್ತಿಗಳನ್ನು ನಿರ್ಮಾಣ ಮಾಡಬೇಕು. ನಿರ್ಮಾಣ ಮಾಡಿದಂತಹ ಕಾರ್ಯಗಳನ್ನು ಬೆಳೆಸುವುದಕ್ಕೆ ಧೀಮಂತಿಕೆ ಬೇಕಾಗುತ್ತದೆ. ಬಿಹಾರದಲ್ಲಿ ನಮ್ಮವರೇ ಆದ ಕರ್ಪೂರಿ ಠಾಕೂರ್‌ರವರು ಮುಖ್ಯಮಂತ್ರಿಯಾಗಿದ್ದಾಗ ನೋಡಿದ್ದೇನೆ ಎಷ್ಟೋ ತೀವ್ರವಾದಂತಹ ಮೂಲಭೂತ ಬದಲಾವಣೆಗಳನ್ನು ಮಾಡಬೇಕೆಂದು ಇಚ್ಛೆ ಇತ್ತು. ಆದರೆ ಅಲ್ಲಿರತಕ್ಕಂತಹ ವಾತಾವರಣದಲ್ಲಿ ಮುಂದುವರಿಯುವುದಕ್ಕೆ ಅವಕಾಶ ಕೊಡಲಿಲ್ಲ. ಕರ್ನಾಟಕದಲ್ಲಿ ಅಂತಹ ಒಂದು ವಿಶೇಷ ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬಾರದು. ಶ್ರೀಮಾನ್ ದೇವರಾಜ ಅರಸರು ಜಾತೀಯ, ಹಾಗೂ ಪಂಗಡದ ವಿರೋಧಿಗಳು ಎಂದು ಅಪಪ್ರಚಾರವನ್ನುಂಟು ಮಾಡಿದ್ದರು. ಆದರೆ ಅವರು ಯಾವ ಜಾತಿಯ ವಿರೋಧಿಯೂ ಅಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ ಅನ್ಯಾಯವನ್ನು ತಡೆಗಟ್ಟುವುದೇ ಅವರ ಇಚ್ಛೆಯಾಗಿತ್ತು. ದುರ್ಬಲ ವರ್ಗಗಳ ಹಾಗೂ ಹಿಂದುಳಿದ ವರ್ಗಗಳ ಬಗ್ಗೆ ಅವರಿಗೆ ಆತ್ಮೀಯತೆ ಇತ್ತು ಆದರೆ ವಿಧಿ ಬೇರೆ ಬಯಸಿತು. ಇದಕ್ಕೆ ಯಾರೂ ಉತ್ತರ ಹೇಳುವುದಕ್ಕಾಗುವುದಿಲ್ಲ. ಈ ಸದನದ ಮೂಲಕ ಎಲ್ಲ ಪಕ್ಷಗಳ ಸಂಘರ್ಷಣೆ ಮಾಡುವುದಕ್ಕೋಸ್ಕರ ಸುಮಾರು ಒಂದು ವರ್ಷಗಳ ಕಾಲ ಅವರು ಸತತವಾದ ಪ್ರಯತ್ನವನ್ನು ಪಟ್ಟರು. ಎಲ್ಲ ಪಕ್ಷಗಳನ್ನು ಒಟ್ಟುಗೂಡಿಸಿ ಒಂದು ವಿರೋಧಪಕ್ಷವನ್ನು ತರುವುದರಿಂದ ರಾಷ್ಟ್ರದಲ್ಲಿ ಆಳುವ ಪಕ್ಷ ಹಾಗೂ ವಿರೋಧಪಕ್ಷ ಎರಡು ಮಾತ್ರ ಇರುತ್ತವೆ ಎಂದು ಅವರು ಅಭಿಪ್ರಾಯಪಟ್ಟಿದ್ದರು. ಅವರ ಒಂದು ಅಭಿಪ್ರಾಯವನ್ನು ಈಗಿನ ಬುದ್ಧಿವಂತ ಸ್ನೇಹಿತರುಗಳು ಈಡೇರಿಸಲಿ ಎಂದು ಬಹಳ ಕಳಕಳಿಯಿಂದ ಹೇಳಲು ಇಚ್ಛೆಪಡುತ್ತೇನೆ. ಈ ಒಂದು ಕೆಲಸವನ್ನು ಮಾಡಿದರೆ ಅವರ ಮನಸ್ಸಿನಲ್ಲಿದ್ದ ಯೋಜನೆಯನ್ನು ಸಾಧಿಸಿದಂತಾಗುತ್ತದೆ. ಹಾಗೂ ಇದರಿಂದ ಅವರ ಆತ್ಮಕ್ಕೆ ಶಾಂತಿಯನ್ನು ದೊರಕಿಸಿ ಕೊಟ್ಟಂತಾಗುತ್ತದೆ ಎಂದು ನಾನು ಹೇಳಬಯಸುತ್ತೇನೆ. ನಮ್ಮ ಸರ್ಕಾರದವರು ಶ್ರೀಮಾನ್‌ದೇವರಾಜ ಅರಸರ ನೆನಪಿಗೋಸ್ಕರ ಕೈಕೊಂಡಿರತಕ್ಕಂತಹ ಯೋಜನೆ ಬಹಳ ಪ್ರಾಶಂಸನೀಯವಾದದ್ದು ಎಂದು ನನಗನಿಸುತ್ತದೆ. ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ).—ಮಾನ್ಯ ಅಧ್ಯಕ್ಷರೇ, ಇದೀಗ ತಾನೇ ನಮ್ಮನ್ನು ಅಗಲಿ ಹೋಗಿರುವ ಧೀಮಂತ ನಾಯಕರಾದ ಶ್ರೀಮಾನ್ ದೇವರಾಜ ಅರಸ್‌ರವರ ಗುಣಗಾನವನ್ನು ಕುರಿತು ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಡಿ. ದೇವರಾಜ ಅರಸುರವರ ವಿಷಯದಲ್ಲಿ ಎಷ್ಟು ಹೇಳಿದರೂ ಸಾಲದು. ಎಷ್ಟು ಅನುಕರಣೀಯವಾಗಿ ಎಷ್ಟು ಸಾರಾಂಶವಾಗಿ ಅವರ ವಿಚಾರವನ್ನು ಈಗಾಗಲೇ ಒಂದು ರೂಪದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕಟ್ಟ ಕಡೆಯದಾಗಿ ನಮ್ಮ ರಾಜ್ಯದಲ್ಲಿ ಒಂದು ಹೊಸ ಪಕ್ಷವನ್ನು ಕಟ್ಟಲು ಶ್ರೀಮಾನ್ ಕೆಂಗಲ್ ಹನುಮಂತಯ್ಯನವರು ಪ್ರಯತ್ನಪಟ್ಟರು ಆದರೆ ದಿನೇ ದಿನೇ ಬದಲಾವಣೆಯಾದ ರಾಜಕೀಯವೆಂದು ನನಗನಿಸಿತು ಅದೇ ರೀತಿಯಾಗಿ ಶ್ರೀಮಾನ್ ದೇವರಾಜ ಅರಸ್‌ರವರು ಸಹ ಕ್ರಾಂತಿರಂಗ ಎಂಬ ಒಂದು ಪಕ್ಷವನ್ನು ಕಟ್ಟಿ ಆ ಪಕ್ಷವನ್ನು ಬೆಳೆಸಬೇಕೆಂದು ಕನಸು ಕಂಡರು. ದೇಶದಲ್ಲಿ ವಿರೋಧಪಕ್ಷಗಳು ಏಕೈಕ ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕು, ದೇಶದಲ್ಲಿ ಆಳುವ ಪಕ್ಷ ಮತ್ತು ವಿರೋಧಪಕ್ಷಗಳು ಎರಡು ಮಾತ್ರ ಇರಬೇಕು ಎಂದು ಅವರ ಭಾವನೆಯಾಗಿತ್ತು. ಆದರೆ ಇವತ್ತು ಕೋರಿಗೆ ನಾಲ್ಕು ಹೆಸರಿಗೆ ಎಂಟು ಎಂಬ ರಾಜಕೀಯ ಪಕ್ಷಗಳಾಗಿವೆ. ಆದ್ದರಿಂದ ಏಕೈಕ ವಿರೋಧಪಕ್ಷವಿದ್ದರೆ ಒಳ್ಳೆಯ ಕಾರ್ಯದಕ್ಷತೆಯನ್ನು ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ ಎಂದು ಅವರು ಕನಸು ಕಂಡರು. ಆದರೆ ಅವರು ಕಂಡ ಕನಸು ಅದು ನನಸಾಗಲಿಲ್ಲ. ಅವರ ಒಂದು ಕನಸನ್ನು ನನಸು ಮಾಡಿದರೆ ಅವರಿಗೆ ಮಹತ್ವಪೂರಿತವಾದಂತಹ ಗೌರವನ್ನು ನಾವು ತೋರಿಸಿದಂತಾಗುತ್ತದೆ. ಅವರ ಮಾದರಿಯನ್ನು ನಾವು ಅನುಸರಿಸಿದಂತಾಗುತ್ತದೆ ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ಶ್ರೀಮಾನ್ ದೇವರಾಜಅರಸ್‌ರವರ ಜ್ಞಾಪಕಾರ್ಥವಾಗಿ ಹಿಂದುಳಿದ ವರ್ಗಗಳ ಸಂಶೋಧನಾ ಕೇಂದ್ರವನ್ನು ತೆರೆಯಬೇಕೆಂದು ನಿರ್ಧಾರವನ್ನು ಸಹ ಮಾಡಿದ್ದಾರೆ. ಈ ಒಂದು ಕೆಲಸವನ್ನು ಒರಿಸ್ಸಾ ರಾಜ್ಯ ಸರ್ಕಾರದವರು ಮಾಡಿದ್ದಾರೆ. ಅವರಿಗಿಂತ ನಮ್ಮ ಕರ್ನಾಟಕ ರಾಜ್ಯ ಸರ್ಕಾರದವರು ಏನೂ ಕಡಿಮೆ ಇಲ್ಲ. ಇಂತಹ ಒಂದು ಚೆನ್ನಾದಂತಹ ಸದಾವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಶ್ರೀಮಾನ್ ದೇವರಾಜ ಅರಸ್‌ರವರು ಹರಿಜನ ಮತ್ತು ಗಿರಿಜನರಿಗೆ ಹಾಗೂ ಹಿಂದುಳಿದ ವರ್ಗದವರಿಗೆ ದೀನದಲಿತರ ಅಭ್ಯುದಯಕ್ಕೆ ಮಹತ್ವವಾದ ಹಾಗೂ ಖಾಯಂ ಆದ ಒಂದು ಇಲಾಖೆಯನ್ನು ಅಥವಾ ಒಂದು ಸಂಸ್ಥೆಯನ್ನು ಮಾಡುತ್ತಿರುವುದು ನಾವೆಲ್ಲರೂ ಮೆಚ್ಚತಕ್ಕಂತಹ ಕೆಲಸವೇ ಸರಿ. ನಮಗೆ ಸುಮಾರು ೩೦-೩೫ ವರ್ಷಗಳ ಹಿಂದೆಯೇ ಸ್ವರಾಜ್ಯ ಸಿಕ್ಕಿತು. ನಮಗೆ ಸ್ವರಾಜ್ಯ ಬಂದಾಗಿನಿಂದಲೂ ಇದುವರೆವಿಗೂ ಸಮಾಜದಲ್ಲಿರತಕ್ಕಂತಹ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಎಷ್ಟೇ ಮಾರ್ಗದರ್ಶನವಾದರೂ ಅದು ಸಾಲದು. ಇದನ್ನು ಕಂಡ ಶ್ರೀಮಾನ್ ದೇವರಾಜ ಅರಸ್‌ರವರು ಕ್ರಾಂತಿ ಎಂಬ ಪದವನ್ನು ಬಳಸಿ, ಕರ್ನಾಟಕದ ರಾಜಕೀಯವನ್ನು ಒಂದು ಕ್ರಾಂತಿಕಾರಕ ಬದಲಾವಣೆ ರೂಪದಲ್ಲಿ ಮಾಡಬೇಕು ಎಂಬುದು ಮನಸ್ಸಿನಲ್ಲಿ ಇಟ್ಟುಕೊಂಡು ರಾಜಕೀಯವಾಗಿ ಕ್ರಾಂತಿಯಾಗಬೇಕು, ಆರ್ಥಿಕವಾಗಿ ಕ್ರಾಂತಿಯಾಗಬೇಕು ಎಲ್ಲರೂ ಮೆಚ್ಚುವಂತಹ ಕೆಲಸವಾಗಬೇಕು ಅದಕ್ಕೆ ತಕ್ಕಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ನೀವು ಆಯವ್ಯಯದಲ್ಲಿ ಏನೇನು ಕೆಲಸಗಳನ್ನು ಮಾಡುತ್ತೇವೆಂದು ಹೇಳಿರುತ್ತೀರಿ ಅವು ಕಾರ್ಯಗತವಾಗುವುದು ಕಡಿಮೆಯಾಗಿದೆ. ಒಂದು ವೇಳೆ ಈ ಕೆಲಸಗಳನ್ನು ಸಮಾಜದ ಶಕ್ತಿಗಳಿಗಾಗಲೀ ಅಥವಾ ಸಂಸ್ಥೆಗಳಿಗಾಗಲಿ ಮಾಡುವುದಕ್ಕೆ ಆಸ್ಪದ ಮಾಡಿಕೊಡುವುದಾದರೆ ಬಹುಶಃ ಚೆನ್ನಾಗಿ ಆದಾವು ಈಗ ನೀವು ಕ್ರಾಂತಿ ಅನ್ನುವ ಶಬ್ದಕ್ಕೆ ಮಹತ್ವ ಕೊಡಬೇಕೋ ಬೇಡವೋ ಎಂಬ ಸಂಶಯ ಬರುತ್ತದೆ. ಒಟ್ಟಾರೆ ಕ್ರಾಂತಿಯಾಯಿತು ಎನ್ನುವುದು ಮುಖ್ಯವಲ್ಲ. ಇಂಥಿಂಥ ಕೆಲಸಗಳನ್ನು ಮಾಡಿಯೇ ಮಾಡುತ್ತೇವೆಂಬ ಛಲವನ್ನು ಹೊಂದಿರತಕ್ಕದ್ದು ಮುಖ್ಯ. ಮೊನ್ನೆ ತಾನೇ ಪತ್ರಿಕೆಗಳಲ್ಲಿ ಓದಿದ ಪ್ರಕಾರ ಒಬ್ಬೊಬ್ಬರು ಒಂದೊಂದು ವಿಚಾರಗಳನ್ನು ಹೇಳಿದ್ದಾರೆ. ಇದು ದೈವದತ್ತವಾದುದು ಎನ್ನುವುದಾದರೆ ನಮ್ಮ ಶಕ್ತಿ ಏನೂ ಇಲ್ಲ ಅನ್ನಬಹುದು. ದಿ॥ ದೇವರಾಜ ಅರಸುರವರು ಹಿಂದುಳಿದವರ ಬಗ್ಗೆ ಮತ್ತು ದೀನದಲಿತರ ಬಗ್ಗೆ ಮಾಡಿರತಕ್ಕ ಕ್ರಾಂತಿ ನಿಜಕ್ಕೂ ಮೆಚ್ಚತಕ್ಕದ್ದು. ಅದನ್ನು ಮುಂದುವರಿಸಿಕೊಂಡು ಹೋಗತಕ್ಕದ್ದು ನಮ್ಮೆಲ್ಲರ ಆದ್ಯ ಕರ್ತವ್ಯ. ಅದನ್ನು ಅಳವಡಿಸಿಕೊಳ್ಳತಕ್ಕದ್ದರಲ್ಲಿ ಹೆಚ್ಚು ಯಾರು, ಕಡಿಮೆ ಯಾರು ಎಂಬುದನ್ನು ಹೇಳುವುದು ಕಷ್ಟ. ಆದರೂ ಕೂಡ ಎಲ್ಲರೂ ಅದನ್ನು ಕಾರ್ಯರೂಪಕ್ಕೆ ತರುವ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಒಂದು ಸಂಶೋಧನಾ ಸಂಸ್ಥೆಯನ್ನು ರೂಪಿಸಿಕೊಂಡರೆ, ಇದು ಯಾವುದರ ಬಗ್ಗೆ ಏನು ಹೇಳುತ್ತದೆ ಅದನ್ನು ನಾವು ರೂಢಿಸಿಕೊಳ್ಳಲು ಅನುಕೂಲವಾಗುತ್ತದೆ. ನಮಗೆ ಸ್ವಾತಂತ್ರ್ಯ ಬಂದು

೩೫ ವರ್ಷಗಳಾದರೂ ಕೂಡ ನಾನಾ ರೀತಿಯ ಸಾಮಾಜಿಕ ವ್ಯಾಧಿಗಳು ನಮ್ಮ ಸಮಾಜದಲ್ಲಿವೆ. ಉದಾಹರಣೆಗೆ, ಅಸ್ಪೃಶ್ಯತೆ. ಇದು ಏತಕ್ಕೆ ಇದೆ ಎಂಬ ಬಗ್ಗೆ ಸಂಶೋಧನೆ ಮಾಡಿ ಎಂದು ಕಾಲೇಜಿನವರಾಗಲಿ, ಸರ್ಕಾರದ ಇಲಾಖೆಯವರಾಗಲಿ ರೂಢ ಮೂಲವಾಗಿ ಹೇಳಿಲ್ಲ. ಇದೇ ರೀತಿ ಆರ್ಥಿಕ ವಿಚಾರಗಳು ಕೂಡ ಇವೆ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ರೈತ ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸುತ್ತೇವೆಂದರೆ ಅದಕ್ಕೆ ಏನಾದರೂ ಒಂದು ಕಟ್ಟುಪಾಡು, ಗೊತ್ತು ಗುರಿ ಮತ್ತು ರೈತ ಮರ್ಯಾದೆ ಇರಬೇಕು, ಆ ರೀತಿ ಮಾಡದೇ ಬರೀ ಕಲ್ಲಿನ ಪ್ರತಿಮೆಗಳನ್ನು ಮಾಡಿ, ಇದು ಅಂಬೇಡ್ಕರ್‌ರವರದ್ದು, ಇದು ಅರಸರದ್ದು, ಇದು ಹನುಮಂತಯ್ಯನವರದ್ದು ಎಂದು ಹೇಳಿಕೊಂಡಿದ್ದರೆ ಸಾಲದು. It cannot function in nothingness and blackness. We are all the carying the matter of administrat on to a success step by step. ಆ ರೀತಿಯಾಗಿ ಇಷ್ಟು ವರ್ಷಕ್ಕೆ ನಮ್ಮ ದೇಶದಲ್ಲಿ ಇಂಥ ಸಮಸ್ಯೆಗಳು ಇರಬಾರದು ಎಂಬ ಮಟ್ಟದಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಅರಸರ ಹೆಸರಿನಲ್ಲಿ ನಾವು ಮುಂದುವರಿಯುವುದಾದರೆ. ನಾವು ಒಂದು ಮಹತ್ಸಾಧನೆ ಮಾಡಿದ ಹಾಗೆ ಆಗುತ್ತದೆಂದು ನಾವಾದರೂ ಭಾವಿಸಿದ್ದೇವೆ. ಕಡ್ಡಾಯವಾಗಿ ಹೇಳಬೇಕಾದ ವಿಚಾರವೆಂದರೆ, ಶೋಷಣೆಗೆ ಒಳಗಾಗಿದ್ದ, ಯಾವ ಒಂದು ಗೊತ್ತುಗುರಿಯೂ ಇಲ್ಲದಂತಹ ಜನ ಏನಿದ್ದರು ಅವರನ್ನು ಹೊಡೆದೆಬ್ಬಿಸಿ ನೀವು ಮುಂದುವರಿಯುವ ಕಡೆ ನೋಡಿ ಎಂದು ಚೇತನವನ್ನು ತುಂಬಿದ್ದರು. ಅದು ಇವತ್ತು ಮಾಟಕಾಗದೆ ನಾಗಾಲೋಕದಲ್ಲಿ ಓಡುತ್ತಿದೆ. ಇಂಥ ನಾಯಕರು ಈ ರಾಜ್ಯದಲ್ಲಿದ್ದರು ಎಂದು ಭಾರತ ಸರ್ಕಾರದವರು ನಮ್ಮ ಕಡೆ ನೋಡುವ ರೀತಿಯಲ್ಲಿ ರಾಜ್ಯಭಾರ ಮಾಡಿದ್ದಾರೆ. ಈ ವಿಚಾರದಲ್ಲಿ ನಾವು ಅವರ ಹೆಸರನ್ನು ಇವತ್ತಿನ ದಿವಸ ನೆನಸಿಕೊಳ್ಳಬೇಕಾಗಿದೆ. ಅವರು ಯಾರಿಗೂ ಗಿಳಿಪಾಠ ಹೇಳಿಕೊಡುತ್ತಿದ್ದವರಲ್ಲ. ಅವರು ಕೆಚ್ಚೆದೆಯ ವೀರ. ಅವರ ಮನಸ್ಸಿಗೆ ಯಾವುದಾದರೂ ಒಂದು ವಿಚಾರ ಹೊಳೆಯಿತೆಂದರೆ ಅದನ್ನು ಕಾರ್ಯಗತ ಮಾಡಲೇಬೇಕೆಂಬ ಧೋರಣೆಯನ್ನು ತಾಳುತ್ತಿದ್ದವರು ಅವರು, ಅಂಥ ಒಂದು ಛಲ ಇಲ್ಲದಿದ್ದರೆ ಯಾರೂ ಕೂಡ ಹೆಚ್ಚು ಪ್ರಗತಿ ಸಾಧಿಸುವುದಕ್ಕಾಗುವುದಿಲ್ಲ ಎಂಬುದನ್ನು ನಾವು ಸ್ಮರಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಭೂಸುಧಾರಣಾ ಕಾನೂನು ಬಂತು. ಆಗ ಇಂತಿಷ್ಟು ಭೂಮಿಗೆ ಸೀಲಿಂಗ್ ಲಿಮಿಟ್ ಹಾಕಬೇಕು, ಇಂತಿಷ್ಟು ಭೂಮಿಯನ್ನು ದೀನದಲಿತರಿಗೆ ಕೊಡಬೇಕೆಂಬ ಪ್ರಸಂಗ ಬಂದಾಗ ತಮ್ಮ ಅನಿಸಿಕೆಗಳನ್ನು ಪಕ್ಷದ ಮುಂದಿಟ್ಟು ತೀರ್ಮಾನ ಕೈಗೊಂಡರು. ಇಂಥ ಪ್ರಸಂಗಗಳನ್ನೆಲ್ಲ ಒಂದೊಂದಾಗಿ ನಾವು ಸ್ಮರಿಸಿಕೊಳ್ಳಬಹುದು. ಪಂಚಾಯಿತಿ ರಾಜ್ಯದ ಬಗ್ಗೆ ಏನು ಕನಸು ಇತ್ತೋ ಅದು ನನಸಾಗಲಿಲ್ಲ. ಅವು ಇವತ್ತು ಯಾವ ಮಟ್ಟದಲ್ಲಿವೆ ಎನ್ನುವುದಕ್ಕೆ ಬೇಕಾದರೆ ಮಾಹಿತಿ ಕೊಡಬಹುದು. ಅವುಗಳನ್ನೆಲ್ಲ ಕ್ರೋಢೀಕರಿಸಿ ಅರಸರ ಜ್ಞಾಪಕಾರ್ಥವಾಗಿ taking the administration from stage to stage and step by step into a greater success. ಅನ್ನುವ ಮಟ್ಟಕ್ಕೆ ಮಾಡಿಯೇ ಮಾಡುತ್ತೇನೆಂಬ ನಂಬಿಕೆ ಇಟ್ಟುಕೊಂಡು ನಮ್ಮೆಲ್ಲರನ್ನು ಆ ಒಂದು ನಂಬಿಕೆಯಲ್ಲಿಟ್ಟುಕೊಂಡು ತಾವು ಕಾರ್ಯ ಮಾಡುತ್ತಾ ಹೋದರೆ ಹೆಚ್ಚಿನ ಕಾರ್ಯ ಸಾಧನೆಯಾಗುವುದರ ಜೊತೆಗೆ ತಾವೆಲ್ಲರೂ ಕೀರ್ತಿ ಶ್ರೇಷ್ಠರಾಗುತ್ತೀರಿ. ದಿ॥ ಅರಸುರವರು ಯಾವ ರೀತಿ, ಯಾವ ಒಂದು ಆದರ್ಶವನ್ನಿಟ್ಟುಕೊಂಡು ರಾಜ್ಯಭಾರ ಮಾಡಿದರೋ ಆ ದಿಶೆಯಲ್ಲಿ ನಾವು ಕೂಡ ದೇಶಕ್ಕಾಗಿ ದುಡಿಯಲು ಪಣ ತೊಟ್ಟರೆ ಅವರನ್ನು ನಾವು ನಿಜವಾಗಿಯೂ ಸ್ಮರಿಸಿಕೊಂಡಂತ ಗುತ್ತದೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ವಿಠಲ).—ಮಾನ್ಯ ಅಧ್ಯಕ್ಷರೇ, ತಾವು ಮತ್ತು ಮಾನ್ಯ ಮುಖ್ಯಮಂತ್ರಿಯವರು ದಿ॥ ದೇವರಾಜ ಅರಸುರವರ ಬಗ್ಗೆ ಏನು ಗಂಭೀರವಾದ ವಿಚಾರಗಳನ್ನು ಮಂಡಿಸಿದ್ದೀರಿ ಅದಕ್ಕೆ ನಾನೂ ಕೂಡ ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ದಿವಂಗತರು ಈ ಸದನದ ಅತ್ಯಂತ ಹಿರಿಯ ಸದಸ್ಯರು. ಅವರು ರಾಜಕೀಯದಲ್ಲಿ ೩೦-೪೦ ವರ್ಷಗಳಿಂದ ದುಡಿದಿದ್ದರೂ ನನಗೆ ಅವರ ಪರಿಚಯವಾದದ್ದು ೧೯೭೨ರಲ್ಲಿ. ಅಂದರೆ ನಾನು ಈ ಸದನದ ಸದಸ್ಯನಾಗಿ ಆಯ್ಕೆಯಾದಾಗ ಮತ್ತು ಚುನಾವಣಾ ಕಾಲದಲ್ಲಿ. ಅವರು ನಮ್ಮ ಈ ಸದನದ ಒಂದು ಸ್ವರೂಪ ಶಿಲ್ಪಿ ಮತ್ತು ಸಾಮರ್ಥ್ಯದ ಒಂದು ಸಂಕೇತವೆಂದು ಭಾವಿಸುತ್ತೇನೆ. ೧೯೭೨ಕ್ಕೆ ಹಿಂದೆ ಇದ್ದಂತಹ ಈ ಸದನದ ಸ್ವರೂಪಕ್ಕೂ, ನಂತರ ಅವರ ನಾಯಕತ್ವದಲ್ಲಿ ಈ ಸದನ ರಚನೆಯಾದಂತಹ ಸ್ವರೂಪಕ್ಕೂ ಬಹಳ ಹೆಚ್ಚಿನ ವ್ಯತ್ಯಾಸ ಇದೆ ಎಂದು ನಾನಾದರೂ ಭಾವಿಸಿದ್ದೇನೆ. ಅದೇ ಇವತ್ತಿಗೂ ಮುಂದುವರಿಯುತ್ತಿದೆ ಎಂಬುದು ನಮಗೆಲ್ಲರಿಗೂ ಸಂತೋಷದ ವಿಚಾರ. ೧೯೭೨ರಲ್ಲಿ ಯಾವ ರೀತಿ ದೀನದಲಿತರು, ಹಿಂದುಳಿದ ವರ್ಗದವರು, ಕಾರ್ಮಿಕರು, ಬಡಜನರು, ಅಲ್ಪಸಂಖ್ಯಾತರು ಮತ್ತಿತರ

ಬೆಂಬಲಿಸಿದರೋ ಅದೇ ರೀತಿ ೧೯೭೮ರಲ್ಲಿ ನಡೆದ ಚುನಾವಣೆಯಲ್ಲಿ ಕೂಡ ಬೆಂಬಲ ನೀಡಿದರು, ಅದೇ ರೀತಿ, ಇವರೂ ಕೂಡ ಅವರ ಹಿತಚಿಂತನೆ ಮಾಡುವವರಾಗಿದ್ದರು. ಅವತ್ತಿನ ದಿವಸ, ಬಹುಮತದಿಂದ ಆರಿಸಿ ಬಂದದ್ದರ ಪರಿಣಾಮವಾಗಿ ಈ ಸದನದಲ್ಲಿ ಸರ್ವಾನುಮತದಿಂದ ಅನೇಕ ಕ್ರಾಂತಿಕಾರಕ ನಿರ್ಣಯಗಳನ್ನು ಮತ್ತು ಕಾನೂನುಗಳನ್ನು ರಚನೆ ಮಾಡಲಿಕ್ಕೆ ಸಾಧ್ಯವಾಯಿತು. ಚುನಾವಣಾ ಕಾಲದಲ್ಲಿ ಅನೇಕ ತರಹದ ವಾಗ್ದಾನಗಳನ್ನು ಮಾಡುವುದು, ಚುನಾವಣಾ ಘೋಷಣೆಗಳನ್ನು ಜನತೆಯ ಮುಂದಿಡುವುದು ಎಲ್ಲ ರಾಜಕೀಯ ಪಕ್ಷಗಳ ಸಂಪ್ರದಾಯ. ಆದರೆ ೧೯೭೨ರಲ್ಲಿ ಇದಕ್ಕೆ ಭಿನ್ನವಾದ ಒಂದು ಕ್ರಮವನ್ನು ದಿ|| ದೇವರಾಜ ಅರಸುರವರ ನಾಯಕತ್ವದಲ್ಲಿ ಈ ಸದನ ಮತ್ತು ಅಂದಿನ ಸರ್ಕಾರ ಅನುಸರಿಸಿತ್ತು. ಅದೇನೆಂದರೆ, ೧೯೭೨ರ ಚುನಾವಣಾ ಕಾಲದಲ್ಲಿ ಆಳುವ ಪಕ್ಷದವರ ಜೊತೆ ನಮ್ಮ ಪಕ್ಷ ಕೂಡ ಸೇರಿ ಚುನಾವಣೆಯಲ್ಲಿ ಭಾಗವಹಿಸಿತ್ತು. ಆಗ ನಾವು ಏನು ಜನತೆಗೆ ಆಶ್ವಾಸನೆಗಳನ್ನು ಕೊಟ್ಟಿದ್ದೆವೋ ಅವನ್ನು ಆಯ್ಕೆಯ ನಂತರ ಈಡೇರಿಸಲಿಕ್ಕೆ ಸಾಧ್ಯವಾಯಿತು. ಅಲ್ಲದೆ ನಮ್ಮಂಥವರು ಕೂಡ ಆರಿಸಿಬರಲಿಕ್ಕೆ ಸಾಧ್ಯವಾಯಿತು. ಮೇಲಾಗಿ, ಆ ವಾಗ್ದಾನಗಳನ್ನೆಲ್ಲ ಕಾರ್ಯರೂಪಕ್ಕೆ ತರುವುದಕ್ಕೆ ದೇವರಾಜ ಅರಸುರವರ ನಾಯಕತ್ವದಲ್ಲಿ ನಿಷ್ಠೆಯಿಂದ ಪ್ರಯತ್ನ ನಡೆದಿದೆ ಎಂಬುದನ್ನು ಇವತ್ತಿನ ಸಂದರ್ಭದಲ್ಲಿ ನಾವು ಸ್ಮರಿಸಬೇಕಾಗಿದೆ. ಸಾಮಾನ್ಯವಾಗಿ, ಭೂಸುಧಾರಣೆಯ ವಿಚಾರದಲ್ಲಿ ಎಲ್ಲರೂ ಮಾತನಾಡುತ್ತಾರೆ. ಈ ಬಗ್ಗೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲೇ ಜನತೆಗೆ ವಾಗ್ದಾನ ಕೊಡಲಾಗಿತ್ತು. ಆಮೇಲೆ ಕಾನೂನು ಬಂತು ಆದರೆ ಅದಕ್ಕೆ ಸೂಕ್ತ ತಿದ್ದುಪಡಿಗಳನ್ನು ಮಾಡಿ ಅದನ್ನು ಕಾರ್ಯರೂಪಕ್ಕೆ ತರುವಂತಹ ಒಂದು ಪ್ರಯತ್ನ ೧೯೭೨ರ ನಂತರ ನಡೆಯಿತು. ಅದಕ್ಕೆ ಈ ಸದನದ ಒಪ್ಪಿಗೆ ಸರ್ವಾನುಮತದಿಂದ ದೊರೆಯಿತಲ್ಲದೆ ಜನತೆಯ ಬೆಂಬಲ ಕೂಡ ಇದ್ದುದರಿಂದ ಆ ಕಾರ್ಯ ಸಾಧ್ಯವಾಯಿತು. ಅದನ್ನು ಕೂಡ ನಾವು ಈ ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ.

ತುರ್ತು ಪರಿಸ್ಥಿತಿ ಬಂದಾಗ ಅದರ ಕಠೋರತೆಯನ್ನು ನಮ್ಮ ದೇಶದ ಎಲ್ಲಾ ರಾಜ್ಯಗಳವರೂ ಅನುಭವಿಸಿದ್ದಾರೆ ನಮ್ಮಲ್ಲೂ ಕೂಡ ಜನ ಅನುಭವಿಸಿದ್ದಾರೆ. ಆದರೆ ಆಗಿನ ಒಂದು ಸಂದರ್ಭದಲ್ಲೂ ಕೂಡ ಸಾಮಾನ್ಯ ಜನತೆಯ ಕಷ್ಟ ನಿವಾರಣೆ ಮಾಡುವುದಕೋಸ್ಕರವಾಗಿ ಆರ್ಥಿಕ ಮತ್ತು ಸಾಮಾಜಿಕವಾದಂಥ ಕಾರ್ಯಕ್ರಮಗಳನ್ನು ರೂಪಿಸಿ ಮುಂದೆ ನಡೆಸಿಕೊಂಡು ಹೋಗುವುದಕ್ಕೆ ೨೦ ಅಂಶದ ಕಾರ್ಯಕ್ರಮ ಘೋಷಣೆಯಾಯಿತು. ಆದರೆ ದೇಶದ ಯಾವುದೇ ರಾಜ್ಯದಲ್ಲೂ ಕೂಡ ಈ ಒಂದು ಕಾರ್ಯಕ್ರಮ ಅಷ್ಟು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರಲಿಲ್ಲ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಯಶಸ್ವಿಯಾಗಿ ಜಾರಿಗೆ ಬಂದಿತು. ಈ ಕಾರ್ಯಕ್ರಮದಿಂದ ನಮ್ಮ ಕರ್ನಾಟಕದಲ್ಲಿನ ದೀನದಲಿತರಿಗೆ, ಬಡಜನತೆಗೆ ಸಾಮಾನ್ಯ ಜನರಿಗೆ ಪ್ರಜಾಪ್ರಭುತ್ವ ರೀತಿಯಲ್ಲಿ ನಿಯಮಕ್ಕೆ ಅನುಗುಣವಾಗಿ ನೆಮ್ಮದಿಯಿಂದ ಬಾಳು ಮಾಡುವುದಕ್ಕೆ ಬೇಕಾದಂಥ ಅವಕಾಶಗಳನ್ನು ಈ ಕಾರ್ಯಕ್ರಮಗಳ ಮೂಲಕ ಮಾಡಿಕೊಟ್ಟು ಈ ಒಂದು ಕಾರ್ಯಕ್ರಮ ನಮ್ಮ ರಾಜ್ಯದಲ್ಲಿ ಬಹಳ ಯಶಸ್ವಿಯಾಗಿ ಜಾರಿಗೆ ಬಂದಿತು. ಅದರ ಪರಿಣಾಮವಾಗಿ ನಮ್ಮ ಜನ ನಿಮ್ಮ ಆಡಳಿತವನ್ನು ಮೆಚ್ಚಿದ್ದರು ಎನ್ನುವುದನ್ನು ಕೂಡ ನಾವು ಈ ಒಂದು ಸಂದರ್ಭದಲ್ಲಿ ಸ್ಮರಿಸಬೇಕಾಗಿದೆ. ಹಿಂದೆ ದಿ|| ದೇವರಾಜ್ ಅರಸ್‌ರವರು ಏನು ಕಾರ್ಯಕ್ರಮವನ್ನು ಆರಂಭ ಮಾಡಿದ್ದರು ಅದನ್ನೇ ತಾವು ಕೂಡ ಮುಂದುವರಿಸಿಕೊಂಡು ಹೋಗುವುದಾಗಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಗುಂಡೂರಾಯರು ಹೇಳಿದ್ದಾರೆ. ಹಿಂದೆ ಈ ಒಂದು ಕಾರ್ಯಕ್ರಮ ಯಶಸ್ವಿಯಾಗುವುದಕ್ಕೆ ಈಗಿನ ಮುಖ್ಯ ಮಂತ್ರಿಗಳೂ ಕೂಡ ಭಾಗಿಯಾಗಿದ್ದರು. ಅದನ್ನೇ ಇವತ್ತು ಯಶಸ್ವಿಯಾಗಿ ಮುಂದುವರಿಸಿಕೊಂಡು ಹೋಗುವುದಾಗಿ ಮಾನ್ಯ ಮುಖ್ಯ ಮಂತ್ರಿಗಳವರು ಈ ಸದನದಲ್ಲಿ ಹೇಳಿದ್ದಾರೆ. ಸಾಮಾನ್ಯ ಜನತೆಯ ಕಷ್ಟ ನಿವಾರಣೆ ಮಾಡುವುದಕ್ಕೆ ಅವರ ಕಣ್ಣೀರನ್ನು ಒರೆಸುವುದಕ್ಕೆ ಪ್ರತಿಯೊಂದು ಕಾರ್ಯಕ್ರಮಕ್ಕೆ ವಿರೋಧ ಪಕ್ಷದವರ ಕಡೆಯಿಂದ ಸಂಪೂರ್ಣವಾಗಿ ಬೆಂಬಲ ಮತ್ತು ಸಹಕಾರವನ್ನು ೧೯೭೨ರ ಈಚೆಗೆ ನಾವು ಈ ಸದನದಲ್ಲಿ ಕೊಟ್ಟುಕೊಂಡು ಬಂದಿದ್ದೇವೆ. ಅದರ ಪರಿಣಾಮವಾಗಿ ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೆ ಕೊಡುವುದಕ್ಕೆ ಸಾಧ್ಯವಾಯಿತು ಎನ್ನುವುದನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಈ ರೀತಿಯ ಬೆಂಬಲವನ್ನು ವಿರೋಧ ಪಕ್ಷದವರ ಕಡೆಯಿಂದ ಪಡೆದುಕೊಳ್ಳಲು ಶ್ರೀ ದೇವರಾಜ್ ಅರಸ್‌ರವರು ಪ್ರಯತ್ನ ಮಾಡಿದ್ದು ಬಹಳ ಮುಖ್ಯವಾದುದು. ವಿರೋಧ ಪಕ್ಷದವರೂ ಕೂಡ ಒಪ್ಪುವಂತೆ ಮತ್ತೆ ಬೆಂಬಲ ಕೊಡುವಂಥ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಏನು ದೇವರಾಜ್ ಅರಸರವರು ಪ್ರಯತ್ನ ಮಾಡಿದ್ದರು ಅದನ್ನೇ ತಾವು ಸಹ ಮುಂದುವರಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಶ್ರೀ ದೇವರಾಜ್ ಅರಸ್‌ರವರು

ಕಾರ್ಮಿಕ ಮಂತ್ರಿಗಳಾಗಿದ್ದಾಗ ಬಹಳ ಒಳ್ಳೆಯ ಕೆಲಸಗಳನ್ನು ಮಾಡಿದ್ದರು. ಕಾರ್ಮಿಕರು ಚಳುವಳಿ ಹೂಡಿದಾಗ ಅವರ ಹಿತಾಸಕ್ತಿಯನ್ನು ಎತ್ತಿ ಹಿಡಿಯುವುದಕ್ಕೆ ಅವರು ಕಾರ್ಮಿಕ ಮಂತ್ರಿಯಾಗಿದ್ದಾಗ, ಸಚಿವರಾಗಿದ್ದಾಗ ತಮ್ಮ ಜವಾಬ್ದಾರಿಯನ್ನು ಅರಿತು ಕಾನೂನ್ನು ಕಾರ್ಮಿಕರ ಪರವಾಗಿ ಚಲಾವಣೆ ಮಾಡಬೇಕೇ ಹೊರತು ಕಾರ್ಮಿಕರ ಹಕ್ಕನ್ನು ಮೊಟಕು ಮಾಡುವುದಕ್ಕೆ ಅಲ್ಲ, ಎನ್ನುವ ಧೃಡವಾದ ಮನೋಬಲ ಅವರಲ್ಲಿತ್ತು ಎನ್ನುವುದನ್ನು ನಾವು ಅವರೊಡನೇ ಎಷ್ಟೋ ಸಾರಿ ವ್ಯವಹರಿಸುವುದಕ್ಕೆ ಹೋದಾಗ ನಮ್ಮ ಗಮನಕ್ಕೆ ಬಂದಿದೆ. ಮತ್ತೆ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಯಾವುದೇ ಒಂದು ಪ್ರಶ್ನೆ ಬರಲಿ, ಇಲ್ಲ ಯಾವುದೇ ಒಂದು ಕಾರ್ಯವನ್ನು ಮಾಡಬೇಕಾಗಿದ್ದಾಗಲೂ ಸಹ, ಸಾಮಾನ್ಯ ಜನತೆಗೆ ಅದರಿಂದ ಪ್ರಯೋಜನವಾಗಬೇಕು, ಮತ್ತೆ ಅದಕ್ಕೆ ಯಾವುದೇ ಪಟ್ಟಭದ್ರ ಹಿತಾಶಕ್ತಿಗಳು ಆತಂಕವನ್ನು ಉಂಟು ಮಾಡಿದರೆ ಆ ಒಂದು ಒತ್ತಡಕ್ಕೆ ಮಣಿಯದೇ ಜನತೆಗೆ. ಅದರಿಂದ ಪ್ರಯೋಜನ ಆಗಲೇಬೇಕು ಎನ್ನುವ ಉದ್ದೇಶದಿಂದ ಪ್ರಯತ್ನ ಮಾಡುತ್ತಿದ್ದರು, ಅದಕ್ಕಾಗಿ ಸರ್ಕಾರದ ಪರವಾಗಿ ಆಡಳಿತ ವರ್ಗದವರನ್ನು ಸಜ್ಜುಗೊಳಿಸತಕ್ಕಂಥ ಒಂದು ಶಕ್ತಿ ಆ ಒಂದು ಪ್ರಯತ್ನ ಸದಾ ನಡೆಯುತ್ತಿತ್ತು ಎನ್ನುವುದು ಕೂಡ ನಮ್ಮ ತಿಳುವಳಿಕೆಗೆ ಬಂದಿತ್ತು. ರಾಜಕೀಯದಲ್ಲಿ ಬದಲಾವಣೆಯಾದುದರಿಂದ ಅವರು ಅಧಿಕಾರವನ್ನು ಬಿಟ್ಟು ವಿರೋಧ ಪಕ್ಷದಲ್ಲಿ ಬಂದು ಕೂತರು. ಅವರನ್ನು ಅಧಿಕಾರದಿಂದ ಉರುಳಿಸಿದ್ದು ಎಂಬುದಾಗಿ ಎಲ್ಲರಿಗೂಗೊತ್ತಿದೆ. ಅವರು ಅಧಿಕಾರವನ್ನು ಬಿಟ್ಟು ಕೊಟ್ಟರು. ಆ ರೀತಿಯಾಗಿ ರಾಜಕೀಯದಲ್ಲಿ ಹೊಸ ಸನ್ನಿವೇಶ ಬಂತು. ಪ್ರಜಾಪ್ರಭುತ್ವದಲ್ಲಿ ಸತ್ ಸಂಪ್ರದಾಯವನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟರು. ವಿರೋಧ ಪಕ್ಷದಲ್ಲಿ ಬಂದು ಕುಳಿತ ಸಂದರ್ಭದಲ್ಲೂ ಕೂಡ ಅವರು ಇಲ್ಲಿ ಅನೇಕ ಸಂದರ್ಭಗಳಲ್ಲಿ ಮಾತನಾಡಿ ಆಡಳಿತ ಪಕ್ಷದವರು ಜನತೆಗೋಸ್ಕರವಾಗಿ ಯಾವ ದಾರಿಯಲ್ಲಿ ಹೋಗಬೇಕು ಇದರಲ್ಲಿ ಏನು ತಪ್ಪುಗಳಿವೆ, ಎಂಬುದನ್ನು ತೋರಿಸಿಕೊಟ್ಟು, ಅವರ ಅನುಭವವನ್ನು ಅವರು ವಿನಿಮಯ ಮಾಡಿಕೊಟ್ಟು. ಸರ್ಕಾರದವರು ಸರಿಯಾಗಿ ಆಡಳಿತವನ್ನು ನಡೆಸುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದರು, ಎನ್ನುವುದನ್ನು ನಾವು ನೀವು ಎಲ್ಲರೂ ಇಲ್ಲಿ ನೋಡಿದ್ದೇವೆ. ಮತ್ತೆ ವಿರೋಧ ಪಕ್ಷದವರೆಲ್ಲರನ್ನೂ ವಿಧಾನ ಸಭೆಯಲ್ಲಿ ಮತ್ತು ಹೊರಗಡೆ ಒಂದುಗೂಡಿಸುವುದಕ್ಕೆ ಸತತವಾಗಿ ಪ್ರಯತ್ನ ಮಾಡುತ್ತಾ ಬಂದಿದ್ದರು. ಆದರೆ ವಿರೋಧ ಪಕ್ಷಗಳವರನ್ನು ಒಂದುಗೂಡಿಸಬೇಕು ಎನ್ನುವ ವಿಚಾರದಲ್ಲಿ ಭಿನ್ನಾಭಿಪ್ರಾಯಗಳು ಬಂದಿದ್ದವು. ಇನ್ನು ಅವರು ಭೂಸುಧಾರಣೆಯ ವಿಚಾರದಲ್ಲಿ ಮತ್ತು ೨೦ ಅಂಶದ ಕಾರ್ಯಕ್ರಮವನ್ನು ಬಡ ಜನತೆಯ ಕಲ್ಯಾಣಕೋಸ್ಕರವಾಗಿ ಮುಂದುವರಿಸಬೇಕು ಎನ್ನುವ ಬಗ್ಗೆ ತುಂಬಾ ಆಶೆಯನ್ನಿಟ್ಟುಕೊಂಡಿದ್ದರು. ಇಂಥಾ ಒಬ್ಬ ಮಾರ್ಗದರ್ಶಕರ ವಿಧಾನದಿಂದ ನಮ್ಮ ಈ ಸದನಕ್ಕೆ ತುಂಬಲಾರದ ನಷ್ಟವಾಗಿದೆ. ಅಲ್ಲದೇ ಇಡೀ ರಾಷ್ಟ್ರದಲ್ಲೂ ಕೂಡ ಒಬ್ಬ ಹಿರಿಯ ರಾಜಕಾರಣಿ, ಮತ್ತು ಅತ್ಯಂತ ಮೇಧಾವಿಯಾಗಿದ್ದ ಮುತ್ಸದಿಯೊಬ್ಬರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಅವರ ಈ ಒಂದು ನಿಧನದಿಂದ ಅವರ ಕುಟುಂಬ ವರ್ಗದವರಿಗೆ ಆಗಿರತಕ್ಕ ನಷ್ಟವನ್ನು ತುಂಬಲು ಭಗವಂತ ಶಕ್ತಿಯನ್ನು ಅವರಿಗೆ ಕೊಡಲಿ ಎಂದು ಹಾರೈಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

SRI C. M. ARUMUGHAM (K.G.F).—Sir, I find no words to express my grief over the sad and sudden demise of our great leader Sri D Devaraj Urs. Sri D. Devraj Urs was a great Parlamentaran, an excellent debator and above all a great administrator. He will be rembered for all the years to come since he, who changed the name of Mysore State as "Karnataka State". He was the main architect in renaming the State as Karnataka and for which the people of Karnataka will always remember him. During his period, the minorities started ruling the country. It is in his period, that the youths and youngsters received encouragement. It was for the first time in Karnataka that he gave berths in his Cabinet to all minorities. It is during his period, that poor people. have nots took place of hon our, It is in his period, That the 20-Point Economic

Programme was set in motion to improve the lots of the poor people-site for siteless and house for houseless. For the first time, he introduced reservation in promotion for the Scheduled Castes and Scheduled Tribes. The development Schemes which he formulated in Karnataka, you do not find them in other States. He increased the representation in reservation for Scheduled Castes/Scheduled Tribes. He appointed Havanoor Commission and implemented its recommendations. Really Sri D. Devaraj Urs will be remembered by the people as a man of masses. I had the occasion to work with him as a Member of the House since 1957 For the first time I was elected to the Legislative Assembly in 1957 when Sri D. Devraj Urs was Chief Whip. During the course of my speech on the Budget, I mentioned a small story-'Morning Star and Evening Star'. I will tell the story on some other occasion. Anyhow, my story attracted him and since then he loved me and liked me for all these years. He appointed me on one man Commission on the drought affected areas-Bidar, Belgaum, Raichur etc., I had the privilege to present the Report to the drought Report to the Prime Minister of India Mrs. Indira Gandhi. After seeing the report and Sri D. Devaraj Urs, Mrs. Indira Gandhi sanctioned Rs. 53 crores for the drought affected areas. He always used to think about the ways and means to improve the socio-economic conditions of the poor and downtrodden. The Hon'ble Chief Minister, Sri R. Gundu Rao now just mentioned that he accepted him as Guru and considered himself as the Shishya of Sri D. Devaraj Urs. I heartily welcome the proposal of the Hon'ble Chief Minister to erect a statue of late Sri D. Devraj Urs in front of Vidhana Soudha I also welcome his proposal to establish a Research Institute to be named after Sri D. Devraj Urs to study the problems and development of Scheduled Castes/Scheduled Tribes, Backward Classes and Minorities.

Sir, I fail to believe how the House could function without the presence of Sri D. Devaraj Urs, who ruled this State for eight long years. He created history next to, probably, the Prime Minister of India. I used to say, there are national leaders in the country who have come from the Ganges valley but there was not a single leader who has come from the Cauvery valley. We produced one great leader i e, Sri D Devaraj Urs and we have lost him. Had he remained in the Congress-I all these years, he would have become a man next to the Prime Minister Some how, he could not continue with the Prime Minister for all the time. But, never the less, his stature and popularity cannot be compared with any national leader except the hon. Prime Minister. I bow my head humbly for the services he rendered to the havenots in the State of Karnataka.

SRI N. B. SIRDESAI (Khanapur).—Mr. Speaker Sir, day before yesterday, while we were on our way to Bangalore, at Hubli Bus Station, we heard the shocking news of the sad demise of Sri D. Devaraj Urs. We were deeply grieved at this sad news of demise. Immediately on arrival at Bangalore, we all the M.E.S. Members rushed to the residence of Sri Urs and had a glimpse of the dead body of the great leader. We paid our homage by placing a wrath on his body and returned to the L.H. with a heavy heart. Sir, we were introduced to Sri Devaraj Urs when he was the Minister for Animal Husbandry and later on we came in closer contact with him when he became the Chief Minister. During the period of his Chief Ministership we could read his mind closely. I found him to be a man of high fortitude, high ambition strong will. He was the champion of backward classes and downtrodden of this State. I founed him to be a best parliamentrian, experienced and well-read politician. Though I belong to M.E.S. and though I differed from him very often on the border issues, he was very much sympathetic towards us. He had sanctioned some developmental works in the disputed border area also. We will remember and everybody will remember him for his note worthy achievements, he had made in the State of Karnataka. Nobody can dispute or deny the fact that he had struggled hard for the betterment of Karnataka State. He was a great leader and in his passing way a great loss has been caused not only to the State, but also to the whole nation. I on behalf of the M.E.S fully appreciate and associate with the feelings and sentiments expressed by the Hon. Speaker, the Chief Minister, the Leader of the Opposition and so many hon. Members of this House. We pray god to give eternal peace to the departed leader and courage to the grief stricken family Members of the departed great leader.

ಶ್ರೀ ಎಚ್. ಗಂಗಾಧರನ್ (ಕೃಷ್ಣರಾಜ).— ಸನ್ಮಾನ್ಯ ಅಧ್ಯಕ್ಷರೇ, ತಾವು ಹೃದಯ ತುಂಬಿ ಅಗಲಿದ ಈ ದೇಶದ ಮಹಾ ನಾಯಕರಿಗೆ ತಮ್ಮ ಹೃದಯ ಪೂರ್ವಕವಾದ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದೀರಿ. ಹಾಗೆಯೇ ಸನ್ಮಾನ್ಯ ಮುಖ್ಯಮಂತ್ರಿಯವರೂ ಕೂಡ ಹೃದಯಾಂತರಾಳದಿಂದ ಅಂತಃಕರಣ ಪೂರ್ವಕವಾಗಿ ತಮ್ಮ ರಾಜಕೀಯ ಭಿನ್ನತೆಯನ್ನು ಮರೆತು ನಿಜವಾಗಿಯೂ ಆ ಮಹಾ ವ್ಯಕ್ತಿಯಲ್ಲಿ ಕಂಡಂತಹ ಗುಣಗಳನ್ನು ಪ್ರಶಂಸೆ ಮಾಡಿ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ. ತಮ್ಮಗಳ ಈ ಶ್ರದ್ಧಾಂಜಲಿಯ ಭಾವನೆಗಳಲ್ಲಿ ನಾನು ಕೂಡ ಭಾರತೀಯ ಜನತಾ ಪಾರ್ಟಿಯ ಪರವಾಗಿ ನನ್ನ ಅಭಿಮತವನ್ನು ಸೂಚಿಸುವುದರ ಜೊತೆಗೆ ಈ ಬಗ್ಗೆ ಕೇವಲ ಒಂದೆರಡು ಮಾತುಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಾನು ೬ನೇ ತಾರೀಖು ಮಧ್ಯ ರಾತ್ರಿಯಲ್ಲಿ ಸೂರತ್ ನಿಂದ ಬಂದು ಬಸ್ ನಿಲ್ದಾಣದಲ್ಲಿ ಇಳಿದು ಒಂದು ರಿಕ್ಷಾದಲ್ಲಿ ಕುಳಿತಾಗ ಆ ರಿಕ್ಷಾ ಚಾಲಕ ಕಣ್ಣೀರು ಕರೆಯುತ್ತಾ 'ಶ್ರೀಮಾನ್ ದೇವರಾಜ ಅರಸ್‌ರವರು ದಿವಂಗತರಾದರು' ಎಂದು ಹೇಳಿದಂತಹ ಸುದ್ದಿಯನ್ನು ಕೇಳಿ ನನ್ನ ಹೃದಯ ತಲ್ಲಣಗೊಂಡಿತು. ಆದರೆ ನಾನು ಅದನ್ನು ನಂಬದೇ ಶಾಸಕರ ಭವನಕ್ಕೆ ಬಂದಾಗ ಈ ವಿಷಯವನ್ನು ತಿಳಿದು ಅನಂತರ ನನ್ನ ಶ್ರದ್ಧಾಂಜಲಿಯನ್ನು ಸೂಕ್ತ ರೀತಿಯಲ್ಲಿ ಅರ್ಪಿಸಿದ್ದೇನೆ. ಸೂರತ್ ನಗರದಲ್ಲಿ ೨ ಮತ್ತು ೩ನೇ ತಾರೀಖಿನ ದಿವಸಗಳಲ್ಲಿ ಸೇರಿದಂತಹ ಭಾರತೀಯ ಜನತಾ ಪಾರ್ಟಿಯ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಈ ದೇಶದಲ್ಲಿ ನಡೆದಂತಹ

ಚುನಾವಣೆಗಳ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ನಾವು ಕರ್ನಾಟಕ ರಾಜ್ಯದಲ್ಲಿ ನಡೆದಂತಹ ರಾಜಕೀಯ ಪರಿಸ್ಥಿತಿಯನ್ನು ಕುರಿತು ವಿಶ್ಲೇಷಣೆ ಮಾಡತಕ್ಕಂಥ ಸಂದರ್ಭದಲ್ಲಿ ಶ್ರೀಮಾನ್ ದೇವರಾಜ ಅರಸ್‌ರವರು ಕರ್ನಾಟಕದಲ್ಲಿ ಇತ್ತೀಚಿನ ಚುನಾವಣೆಗಳಲ್ಲಿ ವಹಿಸಿದಂತಹ ಪಾತ್ರ ಹಾಗೂ ಅವರು ರಾಜಕೀಯದಲ್ಲಿ ತೆಗೆದುಕೊಂಡಂತಹ ನಿಲುವುಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಾ ಇದ್ದೆ. ಆ ಸಂದರ್ಭದಲ್ಲಿ ಅವರು ಇತ್ತೀಚೆಗೆ ಕರ್ನಾಟಕ ರಾಜ್ಯದಲ್ಲಿ 'ಕರ್ನಾಟಕ ಕ್ರಾಂತಿ ರಂಗ' ಎಂಬ ಪ್ರಾದೇಶಿಕ ಪಕ್ಷವನ್ನು ಸ್ಥಾಪನೆ ಮಾಡಿದಂತಹ ವಿಚಾರವನ್ನು ಸಹ ನಾನು ಪ್ರಸ್ತಾಪ ಮಾಡಿದ್ದೆ. ಆಗ ನಮ್ಮ ಪಕ್ಷದ ಕಾರ್ಯಕಾರೀ ಸಮಿತಿಯ ಮಿತ್ರರೊಬ್ಬರು, 'ಬಡಾ ನಾಮ್-ಛೋಟಾ ಕಾಮ್' ಎಂದು ಒಂದು ಮಾತನ್ನು ಹೇಳಿದರು. 'ಅವರು ಒಂದು ದೊಡ್ಡ ಹೆಸರನ್ನು ಪಡೆದುಕೊಂಡೂ ಕೂಡ ಏತಕ್ಕೆ ಹೀಗೆ ಮಾಡಿದರು ? ಏತಕ್ಕೆ ಈ ಒಂದು ಪ್ರಾದೇಶಿಕ ಪಕ್ಷವನ್ನು ಕಟ್ಟಿದರು ? ಎನ್ನತಕ್ಕಂಥ ಮಾತನ್ನು ಹೇಳಿದಾಗ, ನನ್ನ ಇನ್ನೊಬ್ಬ ಮಿತ್ರರು 'He will become the southern leader of Lokdal' ಎನ್ನತಕ್ಕಂಥ ಮಾತನ್ನು ಹೇಳಿದರು. ಅವರು ಹಾಗೆ ಹೇಳಿದಾಗ ನಮ್ಮ ಪಕ್ಷದ ರಾಷ್ಟ್ರೀಯ ನಾಯಕರಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು 'ಐಸಾ ನಹೀ ಹೋಗಾ' ಎಂದು ಹೇಳಿದರು. ಆ ದಿವಸದ ಚರ್ಚೆ ಅಲ್ಲಿಗೇ ಮುಗಿಯಿತು. ಆ ಮಾತನ್ನು ಅವರು ಯಾವ ಕಾರಣಕ್ಕಾಗಿ ಹೇಳಿದರು ಎಂಬುದು ನನಗೆ ತಿಳಿಯದು. 'ಅವರು ಆದಾಗುವುದಿಲ್ಲ, ಅವರು ದೊಡ್ಡ ವ್ಯಕ್ತಿಯಾಗುತ್ತಾರೆ' ಎನ್ನತಕ್ಕಂಥ ಭಾವನೆ ಅವರ ಮನಸ್ಸಿನಲ್ಲಿ ಇತ್ತೋ ಏನೋ, ಆ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದರು. ಹೀಗೆ ಎರಡು ದಿವಸಗಳ ಕಾಲ ನಡೆದಂತಹ ಚರ್ಚೆಯಲ್ಲಿ ಅವರ ವಿಷಯವನ್ನೇ ನಾವು ಪ್ರಸ್ತಾಪ ಮಾಡಿದೆವು. ಆ ಸಂದರ್ಭದಲ್ಲಿ ಅವರೊಬ್ಬ ರಾಷ್ಟ್ರೀಯ ನಾಯಕರ ಪಟ್ಟವನ್ನು ವಹಿಸಿಕೊಳ್ಳುತ್ತಾರೆ ಎನ್ನತಕ್ಕಂಥ ಭಾವನೆ ಅನೇಕ ಜನ ಮಿತ್ರರಲ್ಲಿ ಮೂಡಿ ಬಂತು. ನಾನು ಕರ್ನಾಟಕದಲ್ಲಿ ಕಾಲಿಟ್ಟು ಬೆಂಗಳೂರು ನಗರಕ್ಕೆ ಬಂದಕೂಡಲೇ 'ಅಂತಹ ಒಬ್ಬ ಮಹಾ ವ್ಯಕ್ತಿಯನ್ನು ನಾವು ಅಗಲಿದ್ದೇವೆ' ಎನ್ನತಕ್ಕಂಥ ಸುದ್ದಿ ತಿಳಿದು ನಾನು ಬಹಳ ದುಃಖಪಟ್ಟಿದ್ದೇನೆ. ಈ ಸಂದರ್ಭದಲ್ಲಿ ನಾವು ಅವರನ್ನು ಸ್ಮರಿಸಿಕೊಳ್ಳುವ ರೀತಿ ಬಹಳ ಸೂಕ್ತವಾಗಿದೆ. ಹಳೆಯ ಮೈಸೂರಿನಲ್ಲಿ ೫೦೦ ವರ್ಷಗಳ ಕಾಲ ಆಳಿದ ರಾಜಮನೆತನದ ನಿಕಟ ಬಂಧುಗಳಾಗಿ ಹುಟ್ಟಿದವರು ಅವರು. ಅಂದು ರಾಜಮನೆತನದ ವೈಭವ ಇದ್ದಂತಹ ಕಾಲದಲ್ಲಿ ಅವರು ಅಪೇಕ್ಷಿಪಟ್ಟಿದ್ದರೆ ರಾಜಮನೆತನದ ಗೌರವಗಳೊಡನೆ ಅಧಿಕಾರದಲ್ಲಿ ಇರಬಹುದಾಗಿತ್ತು, ಮತ್ತು ಅದೇ ವೈಭವವನ್ನು ಅನುಭವಿಸಬಹುದಾಗಿತ್ತು. ರಾಜ ಮನೆತನದ ಗೊಂದಲದಿಂದ ಹೊರಬಂದು ಅದರ ವಿರುದ್ಧವಾಗಿ ನಿಂತು ರಾಜಕೀಯದಲ್ಲಿ ನೇರವಾಗಿ ಪ್ರವೇಶ ಮಾಡಿದರು. ತಮ್ಮ ಕಾಲಮೇಲೆ ತಾವು ನಿಂತು ಸುಮಾರು ೪೦ ವರ್ಷಗಳ ಕಾಲ ದೇಶ ಸೇವೆಯನ್ನು ಅಮೋಘವಾಗಿ ಸಲ್ಲಿಸಿದ್ದಾರೆ. ಅವರು ಸಲ್ಲಿಸಿದ ನಾನಾ ಮುಖವಾದ ಸೇವೆಗಳನ್ನು ಈಗಾಗಲೇ ಸನ್ಮಾನ್ಯ ಮಿತ್ರರನೇಕರು ವರ್ಣನೆ ಮಾಡಿದ್ದಾರೆ. ಅವರು ಎಲ್ಲ ವರ್ಗದವರ ಕಲ್ಯಾಣಕ್ಕಾಗಿ ಸಲ್ಲಿಸಿದ ಸೇವೆ ಕೈಗೊಂಡಂತ ನಿರ್ಧಾರಗಳನ್ನು ಸವಿಸ್ತಾರವಾಗಿ ಪ್ರಸ್ತಾಪ ಮಾಡಿರುವುದರಿಂದ ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಭಗವಂತನು ಮನುಷ್ಯರಿಗೆ ಅವಶ್ಯಕವಾದಂತ ಒಂದು ಚೈತನ್ಯವನ್ನು ಒದಗಿಸಿರುತ್ತಾನೆ, ಅದನ್ನು ಹೇಗೆ ಬಳಸಿಕೊಳ್ಳುತ್ತೇವೆಂಬುದು ಬಹಳ ಮುಖ್ಯ, ಅದರ ಮೇಲೆ ಜೀವನ ಸ್ಮರಣೆಯಾಗುತ್ತದೆ. ದೈವಾನುಗ್ರಹದಿಂದ ಮಾನ್ಯ ಅರಸುರವರಿಗೆ ಮುಖ್ಯಮಂತ್ರಿ ಪದವಿ ಬಂದಾಗ ಅದನ್ನು ಸದುಪಯೋಗ ಮಾಡಿಕೊಂಡು ಅಪೂರ್ವವಾದ ಸೇವೆಗಳನ್ನು ಸಲ್ಲಿಸಿದ್ದಾರೆ. ಅವರ ಸೇವೆಯನ್ನು ಸ್ಮರಣೆ ಮಾಡತಕ್ಕಂಥಾದ್ದು ನಮ್ಮ ಕರ್ತವ್ಯ. ಅವರಿಗೆ ಜೀವನದಲ್ಲಿ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಬೇಕಾದ ಪ್ರಸಂಗಗಳು ಬಂದರೂ ಎದೆಗುಂದದೆ ಧೈರ್ಯವಾಗಿ ಎದುರಿಸಿದರು. ಅವರು ಹುಟ್ಟಿದ ತಾಲ್ಲೂಕಿನಲ್ಲಿ ಒಂದು ಅಣೆಕಟ್ಟು ಒಡೆದಾಗ ಸ್ವತಃ ತಾವೇ ಮರಳು ಮೂಟೆಯನ್ನು ಹೊತ್ತು, ಸ್ವತ: ನೇಗಿಲು ಹಿಡಿದು, ನಂತರ ಅಧಿಕಾರ ಸೂತ್ರವನ್ನು ಹಿಡಿದು ರಾಜ್ಯದ ರಥವನ್ನು ಸಾಗಿಸಿಕೊಂಡು ಬಂದಂತ ವ್ಯಕ್ತಿ. ಮುಖ್ಯ ಮಂತ್ರಿಯಾಗಿ ವೈಭವದ ರಾಜ್ಯಭಾರ ನಡೆಸಿ ಮುಖ್ಯ ಮಂತ್ರಿ ಪದವಿ ಹೋದಮೇಲೂ ಆಶಾವಾದಿಯಾಗಿಯೇ ಬದುಕಿದಂತ ವ್ಯಕ್ತಿ. ಅವರು ಎಂದೂ ನಿರಾಶವಾದಿಯಾಗಿರಲಿಲ್ಲ. ಮುಖ್ಯಮಂತ್ರಿಗಳ ಒಂದು ಸಭೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿ, ತೀರ್ಮಾನ ಕೈಗೊಂಡಂತ ಸಂದರ್ಭದಲ್ಲಿ, ತೀರ್ಮಾನ ಕೈಗೊಳ್ಳುತ್ತೀರಿ, ಕೆಲಸ ಮಾತ್ರ ಆಗುವುದಿಲ್ಲವೆಂದು ಹೇಳಿದಾಗ ಅವರು ನಗುಮುಖದಿಂದ ಹೇಳಿದರು, ನೀವು ಚಿಂತೆ ಮಾಡಬೇಡಿ, ಅವರು ಮಾಡದಿದ್ದರೂ ನಿಮ್ಮ ಸರ್ಕಾರ ಬಂದಾಗ ಮಾಡುತ್ತೀರಿ ಎಂದು. ಅವರ ಸ್ಥೈರ್ಯ ಚಿರಸ್ಮರಣೀಯವಾದುದು. ಸ್ವಾತಂತ್ರ್ಯ ಬಂದಮೇಲೆ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದಂತ

ವ್ಯಕ್ತಿ. ಒಂದು ಮಾತು ಈ ಸಂದರ್ಭದಲ್ಲಿ ನನಗೆ ನೆನಪಿಗೆ ಬರುತ್ತೆ. ಪಂಡಿತ ಜವಹರಲಾಲ್ ನೆಹರೂ ರವರು ರಾಜ್ಯಾಂಗ ಸಭೆ ಪ್ರಾರಂಭವಾದಾಗ ಮೊಟ್ಟಮೊದಲಿಗೆ ಒಂದು ಮಾತನ್ನು ಹೇಳಿದ್ದರು :

> "Past history of our country clearly shows that we do not follow the policy of appeasement ; we stand up against wherever and whenever there is wrong – whatever might be the consequences".

ಆ ಒಂದು ಮಾತನ್ನು ಜೀವನದ ಉದ್ದಕ್ಕೂ ಸ್ಮರಣೆ ಮಾಡಿಕೊಂಡು ಬಂದರೂ, ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಎಲ್ಲಿ ಒಂದು ವಂಶದ ಅಧಿಕಾರಶಾಹಿ ಬರುತ್ತೆ, ಪ್ರಜಾಪ್ರಭುತ್ವಕ್ಕೆ ಧಕ್ಕೆ ಬರುತ್ತೆ, ತನ್ನ ಸ್ಥಾನ ಮತ್ತು ಅಧಿಕಾರವನ್ನು ಬದಿಗಿಟ್ಟು ವಿರೋಧಿಸುವಂತ ಎದೆಗಾರಿಕೆಯ ರಾಜಕಾರಣಿ ದೇವರಾಜ ಅರಸು ಆಗಿದ್ದರು. ಅಂಥ ಒಂದು ಧೈರ್ಯ ಮತ್ತು ಎದೆಗಾರಿಕೆಯನ್ನು ಈ ಸಮಯದಲ್ಲಿ ಬಹಳ ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಕರ್ನಾಟಕದಲ್ಲಿ ಅನೇಕ ಜನ ಮುಖ್ಯ ಮಂತ್ರಿಗಳಾಗಿ ಹೋಗಿದ್ದಾರೆ, ಪ್ರಜಾಪ್ರಭುತ್ವಕ್ಕೆ ಧಕ್ಕೆಬರತಕ್ಕಂಥ ಕಾಲದಲ್ಲಿ ತನ್ನ ಸ್ಥಾನಮಾನದ ಕಡೆ ಗಮನಕೊಡದೆ ಎದೆಗಾರಿಕೆಯಿಂದ ವಿರೋಧಿಸುತ್ತಿದ್ದವರೆಂದರೆ ದೇವರಾಜ ಅರಸುರವರು ಎಂದು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಬಂದಂತ ಕಷ್ಟ ಪರಂಪರೆಗಳನ್ನು ನಗುಮುಖದಿಂದಲೇ ಮಿತ್ರರೊಂದಿಗೆ ಪ್ರಜೆಗಳೊಂದಿಗೆ, ಬಂಧುಗಳೊಂದಿಗೆ ವಾತ್ಸಲ್ಯದಿಂದ ಎದುರಿಸಿದ್ದನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಯವರು "ಗುರುಕಾಣಿಕೆ" ಯಾಗಿ ಕೆಲವು ಸ್ಮರಣೆಗಳನ್ನು ಪ್ರಸ್ತಾಪ ಮಾಡಿದ್ದಾರೆ ಮಾನ್ಯ ಮುಖ್ಯಮಂತ್ರಿಯವರ ಮನೋಭಾವನೆಯನ್ನು ನಾನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ. ಪ್ರತಿಮೆಗಳನ್ನು ಮಾಡುವುದನ್ನು ವಿರೋಧ ಮಾಡುತ್ತೇನೆಂದಲ್ಲ, ಪ್ರತಿಮೆಗಳನ್ನು ಮಾಡತಕ್ಕಂತಾದ್ದು ಬ್ರಿಟಿಷ್ ಇಂಪೀರಿಯಲಿಸ್ಟಿಕ್ ಟ್ರೆಂಡ್ಸ್. ಆ ಕಾಲದಲ್ಲಿ ಅದನ್ನು ಮಾಡುತ್ತಿದ್ದರು ಅದು ರಾಜ ಮಹಾರಾಜರುಗಳಿಗೆ ಕೊಡುವ ಗುರುತಾಗಿತ್ತು. ೧೨ನೇ ಶತಮಾನದಲ್ಲಿ ಬಸವಣ್ಣನವರು ಪ್ರತಿಮೆಗಳನ್ನು ಮಾಡುವುದರ ಬಗ್ಗೆ ಒಂದು ಮಾತು ಹೇಳಿದ್ದರು ಕಾಗೆ ವಿಷ್ಟ ವಿಸವ ಹೊನ್ನ ಕಳಶವಾಗುವುದಕ್ಕಿಂತ ನಿಮ್ಮ ಶರಣರು ಮಾಡುವ ಚಮತ್ಕಾರಿಕೆಯ ಮಾಡಯ್ಯ ಎಂದಿದ್ದಾರೆ ಇವತ್ತು ರಾಷ್ಟ್ರದಲ್ಲಿರತಕ್ಕ ಜವಹರಲಾಲ್ ನೆಹರೂರವರ ಮತ್ತು ಡಾ॥ ಅಂಬೇಡ್ಕರ್ ರವರ ಪ್ರತಿಮೆಗಳು ಇವತ್ತು ಕಾಗೆಗಳ ತಾಣಗಳಾಗಿವೆ. ಆದ್ದರಿಂದ ಪ್ರತಿಮೆಗಳನ್ನು ಹಾಕುವುದಕ್ಕೆ ಬದಲಾಗಿ ದಿವಂಗತ ಅರಸು ಅವರು ಯಾವ ಉದ್ದೇಶಕ್ಕಾಗಿ ತಮ್ಮ ಜೀವನವನ್ನು ಇಟ್ಟಿದ್ದರೋ ಅಂಥ ಉದ್ದೇಶಗಳನ್ನು ಸಫಲಗೊಳಿಸುವಂತ ಕಾರ್ಯಕ್ರಮಗಳನ್ನು ಕೈಗೊಂಡರೆ ಸ್ವಾಗತಾರ್ಹವಾದುದೆಂದು ನನ್ನ ಅಭಿಪ್ರಾಯ. ದಿವಂಗತ ಅರಸು ಅವರ ಹೆಸರಿನಲ್ಲಿ ಒಂದು ಸಂಶೋಧನ ಕೇಂದ್ರ ಮಾಡುತ್ತೇವೆಂದು ಹೇಳಿರುವುದು ಸ್ವಾಗತಾರ್ಹವಾದುದು. ನನ್ನ ಒಂದು ಸೂಚನೆ ಏನೆಂದರೆ, ಪ್ರತಿಯೊಂದು ವಿಶ್ವವಿದ್ಯಾನಿಲಯಗಳಲ್ಲಿಯೂ ದೇವರಾಜ ಅರಸು ಅವರ ಹೆಸರಿನಲ್ಲಿ ಒಂದೊಂದು ಸಮಾಜ ಕಲ್ಯಾಣ ಶಾಸ್ತ್ರಕ್ಕೆ ಸೇರಿದ ಅಧ್ಯಯನ ಪೀಠಗಳನ್ನು ಸ್ಥಾಪನೆ ಮಾಡಿ, ರಾಷ್ಟ್ರದಲ್ಲಿ ವಿದ್ಯಾರ್ಥಿಗಳು ಬಂದು ವ್ಯಾಸಂಗ ಮಾಡಿ, ಎಂ.ಎ. ಪದವಿ ಪಡೆಯುವಂತ ಅವಕಾಶ ಕಲ್ಪಿಸುವುದು ಸೂಕ್ತವಾದುದೆಂದು ಹೇಳುತ್ತೇನೆ. ಪ್ರತಿಮೆಗಳನ್ನು ಮಾಡುವುದಕ್ಕೆ ಈ ದೇಶದ ಬಡ ಜನರ ದುಡಿಮೆಯ ದುಡ್ಡನ್ನು ವಿನಿಯೋಗ ಮಾಡುತ್ತೇವೆ ಅದೇ ಹಣವನ್ನು ಉಪಯೋಗಿಸಿ ಒಂದು ಲಕ್ಷ ಎಕರೆ ನೀರಾವರಿ ಮಾಡಿದರೆ ಹತ್ತು ಲಕ್ಷ ಜನರ ಬಡತನ ನಿವಾರಣೆಯಾಗುತ್ತದೆ. ಇವತ್ತು ರಾಜ್ಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ವರುಣಾನಾಲೆಗೆ ಹೆಚ್ಚು ಹಣವನ್ನು ಮಾಡುವುದರ ಮೂಲಕ ಅದನ್ನು ದೇವರಾಜ ಅರಸು ಅವರ ನಾಲೆಯೆಂದು ನಾಮಕರಣಮಾಡಿ, ಒಂದೆರಡು ವರ್ಷಗಳೊಳಗೆ ಆ ಕೆಲಸವನ್ನು ಪೂರೈಸಿದರೆ, ಕಷ್ಟದಲ್ಲಿರತಕ್ಕ ಲಕ್ಷಾಂತರ ಮಂದಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಹೊಟ್ಟೆಗಿಲ್ಲದ ಜನಗಳಿಗೆ ಅನುಕೂಲ ಮಾಡಿಕೊಟ್ಟಂತಗುತ್ತದೆ. ಇಂಥ ಒಂದು ಕೆಲಸಗಳನ್ನು ಮಾಡುವುದರಿಂದ ದಿವಂಗತರ ಆತ್ಮಕ್ಕೆ ನಿಜವಾದ ಶಾಂತಿ ದೊರಕುವಂತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಭಾರತೀಯ ಜನತಾ ಪಕ್ಷದ ಪರವಾಗಿ ಅವರ ಆತ್ಮಕ್ಕೆ ತುಂಬು ಹೃದಯದಿಂದ ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡಿ, ಅವರ ನಿಧನದಿಂದ ಆಗಿರತಕ್ಕ ದುಃಖವನ್ನು ಭರಿಸುವಂತ ಶಕ್ತಿಯನ್ನು ಭಗವಂತನು ಅವರ ಕುಟುಂಬ ವರ್ಗದವರಿಗೂ, ಪ್ರಜಾವರ್ಗದವರಿಗೂ ಕರುಣಿಸಲಿ ಎಂದು ನನ್ನ ಅಂತಃಕರಣಪೂರ್ವಕವಾದ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಅಧ್ಯಕ್ಷರೇ ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಯವರು ದಿವಂಗತ ದೇವರಾಜ್ ಅರಸರ ಬಗ್ಗೆ ಒಳ್ಳೆಯ ಮಾತುಗಳನ್ನು ಆಡಿದ್ದೀರಿ ಮಾನ್ಯ ಮುಖ್ಯಮಂತ್ರಿಯವರು ದಿವಂಗತ ದೇವರಾಜ ಅರಸುರವರ ಹೆಸರಿನಲ್ಲಿ ಹಿಂದುಳಿದವರ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಒಂದು ಸಂಶೋಧನ ಕೇಂದ್ರವನ್ನು ಪ್ರಾರಂಭ ಮಾಡುವುದಾಗಿ ಪ್ರಕಟಣೆ ಕೂಡ ಮಾಡಿದ್ದಾರೆ. ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಮತ್ತೊಂದು ವಿಚಾರ ನಿನ್ನೆ ದಿವಸ ಸರ್ಕಾರ ರಜ ಘೋಷಣೆ ಮಾಡಿದೆ. ಮಾನ್ಯ ಮುಖ್ಯಮಂತ್ರಿಯವರು ಸಚಿವ ಸಂಪುಟದ ಇತರೇ ಸದಸ್ಯರುಗಳು ಕೂಡ ದಿವಂಗತ ದೇವರಾಜ್ ಅರಸು ಅವರಿಗೆ ಗೌರವ ಸಲ್ಲಿಸುವುದರ ಮೂಲಕ ನಮ್ಮ ರಾಜ್ಯಕ್ಕೆ ನಮ್ಮ ನಾಯಕನಿಗೆ ಹೃತ್ಪೂರ್ವಕ ಗೌರವವನ್ನು ಸೂಚನೆ ಮಾಡಿದ್ದಾರೆ. ಅದಕ್ಕಾಗಿ ಮಾನ್ಯ ಗುಂಡೂರಾಯರನ್ನು ರಾಜ್ಯದ ಜನತೆಯ ಪರವಾಗಿ ಶ್ಲಾಘಿಸಿ, ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಮಗೆಲ್ಲಾ ಗೊತ್ತಿರುವಂತೆ ನಾನು ಹುಣಸೂರಿನವನು. ನಾನು ಮತ್ತು ದೇವರಾಜ ಅರಸು ಅವರು ೧೯೫೩-ನೇ ಇಸವಿಯಿಂದ ಕಾಂಗ್ರೆಸ್ ಎರಡು ಭಾಗವಾಗುವವರೆಗೆ ಸುಮಾರು ೧೬ ವರ್ಷಗಳ ಕಾಲ ಅಣ್ಣತಮ್ಮಂದಿರಂತೆ ಇದ್ದೆವು.

೨-೩೦ ಪಿ. ಎಂ.

ರಾಜಕೀಯ ಜೀವನದಲ್ಲಿ ಮತ್ತು ವೈಯಕ್ತಿಕ ಜೀವನದಲ್ಲಿ ಎರಡರಲ್ಲೂ ಸ್ನೇಹಿತರಾಗಿದ್ದೆವು. ನಮ್ಮಿಬ್ಬರನ್ನು ಬೇರ್ಪಡಿಸಬೇಕೆಂದು ಬಹಳ ಜನ ಪ್ರಯತ್ನಪಟ್ಟರು. ಆದರೆ ರಾಜಕೀಯ ಜೀವನದಲ್ಲೂ ಬೇರ್ಪಡಿಸುವುದಕ್ಕೆ ಆಗಲಿಲ್ಲ ಮತ್ತು ವೈಯಕ್ತಿಕ ಜೀವನದಲ್ಲೂ ಬೇರ್ಪಡಿಸುವುದಕ್ಕೆ ಸಾಧ್ಯವಾಗಲಿಲ್ಲ. ದುರ್ವಿಧಿ, ೧೯೬೯ನೇ ಇಸವಿಯಲ್ಲಿ ಕಾಂಗ್ರೆಸ್ ಇಬ್ಭಾಗ ಆದಾಗ ಅವರು ಒಂದು ಕಡೆಗೆ ಹೋದರು, ನಾನು ಒಂದು ಕಡೆಗೆ ಹೋದೆ ದೇವರಾಜ ಅರಸು ಅವರು ೭ ವರ್ಷಗಳ ಕಾಲ ಮಂತ್ರಿಗಳಾಗಿ ಕೆಲಸ ಮಾಡಿದರು. ಅವರು ಬಡ ಜನರಿಗೋಸ್ಕರ ಸತ್ಯಸಾಧರಾಗಿ ಯಾವ ರೀತಿ ಕೆಲಸ ಮಾಡುತ್ತಿದ್ದರು ಎಂಬುದನ್ನು ಅವರ ನಿಕಟವರ್ತಿಯಾಗಿ ನಾನು ನೋಡಿದ್ದೇನೆ. ಮತ್ತು, ನಾನು ಅವರಿಗೆ ಸಹಾಯಕನಾಗಿ ತಾಲ್ಲೂಕು ಮಟ್ಟದಲ್ಲಿ ಅಧ್ಯಕ್ಷನಾಗಿ, ಮುನಿಸಿಪಲ್ ಸದಸ್ಯನಾಗಿಯೂ ಕೆಲಸ ಮಾಡಿದ್ದೇನೆ. ಅವರು ನಮ್ಮ ಮುಂದೆ ಇಲ್ಲದಿರುವುದರಿಂದ ನಮ್ಮ ರಾಜ್ಯಕ್ಕೆ, ನಮ್ಮ ದೇಶಕ್ಕೆ ಎಷ್ಟು ನಷ್ಟವಾಗಿದೆ ಎಂಬುದನ್ನು ನಾವೆಲ್ಲಾ ತಿಳಿದುಕೊಂಡಿದ್ದೇವೆ. ನಾಡಿಗೂ ತುಂಬಲಾರದ ನಷ್ಟವಾಗಿದೆ, ವೈಯಕ್ತಿಕವಾಗಿಯೂ ತುಂಬಲಾರದ ನಷ್ಟವಾಗಿದೆ ೧೯೫೨ನೇ ಇಸವಿಯಿಂದಲೂ ಒಂದೇ ಸಮನೆ ಹುಣಸೂರು ಕ್ಷೇತ್ರದಿಂದ ಒಂದು ಸಲವೂ ಕೂಡ ಸೋಲದೆ ಆ ಕ್ಷೇತ್ರವನ್ನು ಪ್ರತಿನಿಧಿಸಿಕೊಂಡು ಬರುತ್ತಿದ್ದರು. ಇದು ನಮ್ಮ ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭಾರತ ದೇಶದಲ್ಲೇ ೪೦ ವರ್ಷಗಳ ಕಾಲ ಯಾರಾಗಲೂ ಒಂದೇ ಕ್ಷೇತ್ರದಿಂದ ಸೋಲದೇ ಚುನಾವಣೆಯಲ್ಲಿ ಗೆದ್ದುಬಂದಿರುವ ಕ್ಷೇತ್ರವೆಂದರೆ ಮಾನ್ಯ ದೇವರಾಜ ಅರಸ್ ಅವರ ಹುಣಸೂರು ಕ್ಷೇತ್ರ. ದೇವರಾಜ ಅರಸರ ರಾಜಕೀಯ ಜೀವನದಲ್ಲಿ ಬಿಟ್ಟರೆ ಬೇರೆಲ್ಲೂ ಇಂಥ ಸಂದರ್ಭಗಳಿಲ್ಲ ಎಂದು ನಾನು ಭಾವಿಸಿಕೊಂಡಿದ್ದೇನೆ. ಇದು ಬಹಳ ಆಶ್ಚರ್ಯಕರವಾದುದು. ಹುಣಸೂರು ತಾಲ್ಲೂಕಿನಲ್ಲಿ ದೇವರಾಜ ಅರಸು ಅವರ ಜಾತಿಗೆ ಸೇರಿರತಕ್ಕ ಮತದಾರರು ಕೇವಲ ೧೦೦-೧೫೦ ಮಾತ್ರ. ಆದರೂ ಕೂಡ ಒಂದು ವರ್ಷವೂ ಸೋಲದೆ ಆರಿಸಿ ಬರುವುದೆಂದರೆ ಅದನ್ನು ಮೆಚ್ಚಬೇಕು. ೧೯೬೭ರಲ್ಲಿ ಅವರು ಅವಿರೋಧವಾಗಿ ಚುನಾಯಿತರಾಗಿದ್ದರು. ಇದು ಜನರಲ್ಲಿ ಅವರು ಗಳಿಸಿಕೊಂಡಿದ್ದ ಪ್ರೇಮವನ್ನು ತೋರಿಸುತ್ತದೆ. ಅದೇ ರೀತಿ ಯಾವ ಜಾತಿ ಮತ ಭೇದವಿಲ್ಲದೆ ಒಳ್ಳೆಯ ವ್ಯಕ್ತಿಯನ್ನು ಆರಿಸತಕ್ಕ ಒಳ್ಳೆಯ ಭಾವನೆ ಹುಣಸೂರು ಕ್ಷೇತ್ರದಲ್ಲಿನ ಜನರಿಗಿತ್ತು. ನಾನು ಮತ್ತು ದೇವರಾಜ ಅರಸ್ ಅವರು ರಾಜಕೀಯದಲ್ಲಿ ಭಿನ್ನತೆಯನ್ನು ಹೊಂದಿದ್ದರೂ ಕೂಡ ವೈಯಕ್ತಿಕವಾಗಿ ಸ್ನೇಹಿತರಾಗಿದ್ದೆವು. ನನಗೆ ೧೯೭೪ ರಲ್ಲಿ ಬ್ಲಡ್ ಕ್ಯಾನ್ಸರ್ ಆಗಿದ್ದಾಗ ಅವರು ನನ್ನನ್ನು ನೋಡಿಕೊಂಡು ಹೋಗುತ್ತಿದ್ದರು. ಖಾಯಿಲೆ ಹೆಚ್ಚಾದಾಗ ಸ್ಪೆಷಲ್ ಟ್ರೀಟ್‌ಮೆಂಟಿಗೆ ಬೇಕಾದರೆ ಅಮೆರಿಕಾಕ್ಕೆ ಕಳಿಸೋಣ ಎಂದು ನನ್ನ ಸ್ನೇಹಿತರ ಹತ್ತಿರ ಹೇಳಿದ್ದರು. ನಾನು ಸದಸ್ಯನಾಗಿ ಈ ಮನೆಯಲ್ಲಿ ಇಲ್ಲದೇ ಇದ್ದುದರಿಂದ ಸರ್ಕಾರದ ಮುಖಾಂತರವಾಗಿ ಕಳಿಸುವ ಅವಕಾಶ ಇರಲಿಲ್ಲ. ಆದ್ದರಿಂದ ಅವರು ದುಡ್ಡು ಎಷ್ಟೇ ಆದರೂ ನಾನು ಕೊಡುತ್ತೇನೆ, ಅಮೆರಿಕಾಕ್ಕೆ ಕಳಿಸೋಣ ಎಂದು ಹೇಳಿದ್ದರು. ಆದರೆ ಕಾರಣಾಂತರದಿಂದ ಅವರ ಅವಶ್ಯಕತೆ ಬೀಳಲಿಲ್ಲ ಇಲ್ಲೇ ಔಷಧಿ ತರಿಸಿ ಉಪಚಾರ ಪಡೆದು ಬದುಕಿಕೊಂಡೆ ರಾಜಕೀಯದಲ್ಲಿ ೧೯೬೯ನೇ ಇಸವಿಯಿಂದ ನಾನು ಅವರಿಂದ ದೂರವಾದ ಮೇಲೆ ಒಂದು ಸಲವೂ ಅವರನ್ನು ಹೋಗಿ ಭೇಟಿ ಮಾಡಲಿಲ್ಲ. ಅಂದರೆ ಯಾವಾಗಲಾದರೂ ನನಗೆ ಖಾಯಿಲೆ ಬಂದಾಗ ಅವರು, ಅವರಿಗೆ ಖಾಯಿಲೆ ಬಂದಾಗ

ನಾನು—ಹೀಗೆ ಒಬ್ಬರಿಗೊಬ್ಬರು ನೋಡುತ್ತಿದ್ದೆವು. ನಾನು ಕಾಯಿಲೆ ಬಿದ್ದಾಗ ಅವರು ಬಂದು ನೋಡಿ ಎಷ್ಟು ಹಣವಾದರೂ ಖರ್ಚಾಗಲಿ, ನಾನು ನೋಡಿಕೊಳ್ಳುತ್ತೇನೆ ಎಂದು ಹೇಳಿದ್ದನ್ನು ನೋಡಿದರೆ ಅವರಲ್ಲಿ ಮಾನವೀಯತೆ ಗುಣ ಯಾವರೀತಿ ಇತ್ತು, ಸ್ನೇಹಕ್ಕೆ ಯಾವರೀತಿ ಬೆಲೆ ಕೊಡುತ್ತಿದ್ದರು ಎಂಬುದು ಗೊತ್ತಾಗುತ್ತದೆ. ಮಾನ್ಯ ದೇವರಾಜ ಅರಸು ಅವರು ಬಡವರ್ಗದವರಿಗಾಗಿ ಯಾವರೀತಿ ಕೆಲಸ ಮಾಡಿದ್ದಾರೆ, ಬೇರೆಯವರಿಗೆ ಯಾವರೀತಿ ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ತಾವೂ ಹೇಳಿದ್ದೀರಿ. ಬೇರೆ ಬೇರೆ ನಾಯಕರೂ ಹೇಳಿದ್ದಾರೆ. ನಾನು ಪುತ್ತೆ ಅದನ್ನು ಪುನರಾವರ್ತನೆ ಮಾಡಲಿಕ್ಕೆ ಹೋಗುವುದಿಲ್ಲ. ಇಷ್ಟನ್ನು ಹೇಳಿ ದಿವಂಗತ ದೇವರಾಜ ಅರಸರ ಆತ್ಮಕ್ಕೆ ಪರಮಾತ್ಮ ಚಿರಶಾಂತಿಯನ್ನು ನೀಡಲಿ, ಮತ್ತು ಅವರ ಶ್ರೀಮತಿಯವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ದೇವರಾಜ ಅರಸು ಅವರು ನಿಧನಹೊಂದಿದ ದಿವಸದಿಂದ ಅವರ ಶ್ರೀಮತಿಯವರು ಆರೋಗ್ಯವನ್ನು ಕಳೆದುಕೊಂಡಿದ್ದಾರೆ. ಅವರ ಆರೋಗ್ಯ ಕೆಟ್ಟಿದೆ. ದೇವರು ಅವರ ಆರೋಗ್ಯವನ್ನು ಉತ್ತಮಪಡಿಸಲಿ ಮತ್ತು ಅವರ ಕುಟುಂಬ ವರ್ಗದವರಿಗೂ ದುಃಖವನ್ನು ಸಹಿಸುವ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥನೆ ಮಾಡಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಮುಖ್ಯ ಮಂತ್ರಿಗಳು, ವಿರೋಧಪಕ್ಷದ ನಾಯಕರು ಮತ್ತು ಇತರ ಸದಸ್ಯರು ವ್ಯಕ್ತ ಮಾಡಿದ ಭಾವನೆಗಳಲ್ಲಿ ನಾನೂ ಪಾಲ್ಗೊಳ್ಳುತ್ತಿದ್ದೇನೆ. ಸಭೆಯ ಮುಂದೆ ಮಂಡಿಸಿರುವ ನಿರ್ಣಯವನ್ನು ನಾನೂ ಬೆಂಬಲಿಸುತ್ತಾ ದಿವಂಗತ ದೇವರಾಜ ಅರಸು ಅವರು ಸ್ಮಾರಕಕ್ಕೆ ಸರ್ಕಾರ ಕೈಗೊಂಡಿರುವ ನಿರ್ಣಯವನ್ನೂ ನಾನು ಸ್ವಾಗತಿಸುತ್ತೇನೆ. ದಿವಂಗತ ದೇವರಾಜ ಅರಸು ಅವರು ದೀನದಲಿತರ ಆತ್ಮೀಯ ಗೆಳೆಯರಾಗಿದ್ದರು, ನಾಯಕರಾಗಿದ್ದರು ಎಂಬ ಮಾತನ್ನು ಎಲ್ಲರೂ ಹೇಳಿದ್ದಾರೆ. ಅದನ್ನು ನಾವೆಲ್ಲಾ ಮನಗಂಡಿದ್ದೇವೆ. ನಾನು ವಿರೋಧಪಕ್ಷದ ಸದಸ್ಯನಾಗಿ ಮೇಲ್ಮನೆಯ ವಿರೋಧ ಪಕ್ಷದ ನಾಯಕನಾಗಿ, ಈ ಮನೆಯ ನಾಯಕನಾಗಿ ಅವರು ಮಂತ್ರಿಯಾಗಿದ್ದಾಗ ಮತ್ತು ಮುಖ್ಯ ಮಂತ್ರಿಗಳಾಗಿದ್ದಾಗ ನೋಡಿದ್ದೇನೆ. ಅವರು ಮುಖ್ಯ ಮಂತ್ರಿ ಪದವಿಯನ್ನು ಕಳೆದುಕೊಂಡ ಮೇಲೆ ನಮ್ಮ ಜೊತೆಗೆ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡುವಾಗ ಕೂಡ ನೋಡಿದ್ದೇನೆ. ಶ್ರೀಮಾನ್ ದೇವರಾಜ ಅರಸು ಅವರು ಮುಖ್ಯ ಮಂತ್ರಿಗಳಾದ ಮೇಲೆ ಈ ರಾಜ್ಯದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಹೊಸ ತಿರುವನ್ನು ಕೊಟ್ಟರು. ಅವರು ಅನೇಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಸಭೆಯ ಮುಂದಿಟ್ಟು ಅದನ್ನು ಜಾರಿಗೆ ತಂದರು. ಗೆಳೆಯ ಕಕ್ಕಿಲಾಯ ಅವರು ಹೇಳಿದಂತೆ ಅವರ ಕಾರ್ಯಕ್ರಮಗಳಿಗೆ ಬೆಂಬಲ ಕೊಟ್ಟು ವಿರೋಧಪಕ್ಷದವರೂ ಒಮ್ಮತದಿಂದ ಅದಕ್ಕೆ ಅನುಮತಿ ಕೊಡುವಂತೆ ಮಾಡುವುದರಲ್ಲಿ ಅವರು ಸಫಲರಾಗಿದ್ದರು. ಶ್ರೀಮಾನ್ ಅರಸರವರು ಕ್ರಾಂತಿಕಾರಕವಾದ ಬದಲಾವಣೆ ಮಾಡತಕ್ಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ತಂದಾಗ ಅದಕ್ಕೆ ಎಷ್ಟು ಸಂತೋಷದಿಂದ ಬೆಂಬಲ ಸೂಚಿಸಿದ್ದೆವೋ ಅಷ್ಟೇ ಕಟುವಾಗಿ ಸರ್ಕಾರದ ಲೋಪ ದೋಷಗಳನ್ನು ಟೀಕೆ ಮಾಡಿದ್ದೇವೆ; ಕಟುತರವಾದ ಅಪಾದನೆ ಮಾಡಿದ್ದೇವೆ; ವಿಚಾರಣೆಗೆ ಗುರಿ ಮಾಡಿದ್ದೇವೆ; ನಮ್ಮ ಕರ್ತವ್ಯ ಪಾಲನೆ ಮಾಡಿದ್ದೇವೆ. ನಾವು ಟೀಕೆ ಮಾಡುವಾಗ ಶ್ರೀಮಾನ್ ದೇವರಾಜ ಅರಸ್ ಅವರು ಅತ್ಯಂತ ಸಮತೋಲನ ಬುದ್ಧಿ ಮತ್ತು ತಾಳ್ಮೆಯಿಂದ ಕೇಳಿಕೊಂಡು ಒಬ್ಬ ಉತ್ತಮ ವಾಗ್ಮಿ, ಮೇಧಾವಿ ಕೊಡತಕ್ಕ ಉತ್ತರವನ್ನು ಕೊಟ್ಟು ನಮ್ಮನ್ನು ನಿರುತ್ತರರನ್ನಾಗಿ ಮಾಡುವುದರಲ್ಲಿ ಸಫಲರಾಗಿದ್ದಾರೆ. ಎಂಥ ಟೀಕೆ ಮಾಡಿದರೂ ಕೂಡ ಉತ್ತರ ಕೊಡುವಾಗ ಪ್ರತಿಯೊಂದು ಮಾತಿಗೂ ತಲೆದೂಗುವ ರೀತಿಯಲ್ಲಿ ಮನವರಿಕೆ ಮಾಡಿಕೊಡತಕ್ಕ ಪ್ರಯತ್ನ ಮಾಡುತ್ತಿದ್ದರು. ಜನತಾ ಮನೆ ಯೋಜನೆಯನ್ನಲ್ಲದೆ ಸಣ್ಣ ರೈತರಿಗಾಗಿ. ಹಿಂದುಳಿದವರಿಗಾಗಿ ಅವರ ರಿಸರ್ವೇಷನ್ ಸಲುವಾಗಿ ಅನೇಕ ಕಾರ್ಯಗಳನ್ನು ಮಾಡಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಹಿಂದುಳಿದ ವರ್ಗದವರಲ್ಲಿ, ಬಡ ವರ್ಗದವರಲ್ಲಿ ಒಂದು ಹೊಸ ಚೈತನ್ಯವನ್ನು ಚಿಂತನೆಯನ್ನು ಮೂಡಿಸಿದಂಥ ಶ್ರೇಯಸ್ಸು ಶ್ರೀಮಾನ್ ಅರಸರಿಗೆ ಹೋಗುತ್ತದೆ. ಹಿಂದಿನ ಸರ್ಕಾರದವರೂ ಅನೇಕ ಯೋಜನೆಗಳನ್ನು ಮಾಡಿದ್ದರು. ಆದರೆ ಇವರಿಗೆ ಹೊಸ ವಿಚಾರ ಕ್ರಾಂತಿಯನ್ನು ಮೂಡಿಸಿದಂಥ, ಒಗ್ಗಟ್ಟನ್ನು ತಂದಂಥ ಶ್ರೇಯಸ್ಸು ಮೀಸಲಾಗಿದೆ. ಇದರ ಜೊತೆಗೆ ಆ ಜನಾಂಗಗಳಿಗೆ ಹೊಸ ನಾಯಕತ್ವವನ್ನು ಕೊಟ್ಟರು. ಆ ನಾಯಕತ್ವದ ಮುಖಾಂತರ ಸಂಘಟನೆ ಮಾಡತಕ್ಕ ಪ್ರಯತ್ನ ನಡೆಯುತ್ತಿತ್ತು. ಶ್ರೀಮಾನ್ ದೇವರಾಜ ಅರಸರ ಶ್ರೇಷ್ಠ ವಿಚಾರಗಳು, ಉತ್ತಮ ಕಾರ್ಯಕ್ರಮಗಳು ಏನಿವೆ ಅದನ್ನು ಮುಂದುವರೆಸಿಕೊಂಡು ಹೋಗುವುದೇ ಗುರುವಿನ ಶಿಷ್ಯರಾಗಿ ಅವರ ಜೊತೆಯಲ್ಲಿ ಕೆಲಸ ಮಾಡಿದ

ಕಾರ್ಯಕರ್ತರಾಗಿ ಸಲ್ಲಿಸುವ ಶ್ರೇಷ್ಠ ಶ್ರದ್ಧಾಂಜಲಿ ಎಂದು ಹೇಳುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ತಮ್ಮ ನೆನಪಿಗೆ ತರುತ್ತೇನೆ, ಶರಣರ ಗುಣವನ್ನು ಮರಣದಲ್ಲಿ ನೋಡು ಎಂಬ ಮಾತಿದೆ. ಶ್ರೀಮಾನ್ ದೇವರಾಜ ಅರಸ್ ಅವರು ಏನಾಗಿದ್ದರು, ಏನಾಗಬೇಕಾಗಿತ್ತು ಎಂಬುದು ನಿನ್ನೆ ಮೊನ್ನೆ ಅವರ ನಿಧನದ ನಂತರ ಕರ್ನಾಟಕದ ಜನತೆ ಅವರಿಗೆ ಕೊಟ್ಟಂಥ ಗೌರವ, ಶ್ರದ್ಧಾಂಜಲಿಯನ್ನು ನೋಡಿದಾಗ ಅರಿವಾಗುತ್ತದೆ. ಅನೇಕ ಜನ ಮುಖ್ಯಮಂತ್ರಿಗಳಾಗುತ್ತಾರೆ. ಅಧಿಕಾರ ಹೋದಮೇಲೆ ಜನ ಅವರನ್ನು ನೋಡುವುದಿಲ್ಲ. ಆದರೆ ಅರಸು ಅವರ ಮರಣದಲ್ಲಿ ಆ ಒಂದು ಹಿರಿಮೆಯನ್ನು ಕಂಡಿದ್ದೇವೆ. ಸಾಮಾನ್ಯ ಜನ ಯಾವ ರೀತಿ ಮರುಗುತ್ತಿದ್ದರು, ಕಣ್ಣೀರಿಡುತ್ತಿದ್ದರು ಅವರಲ್ಲಿರತಕ್ಕ ಮಾನವೀಯ ಗುಣಗಳನ್ನು ಮೆಚ್ಚಿಕೊಳ್ಳಬೇಕಾಗುತ್ತದೆ. ಅರಸು ಅವರ ವರ್ಣಮಯ ಜೀವನವನ್ನು ಮಾತಿನಲ್ಲಿ ಹೇಳುವುದು ಕಷ್ಟ. ಅದರಲ್ಲಿಯೂ ಅಧಿಕಾರ ಹೋದಮೇಲೆ, ವಿರೋಧಪಕ್ಷಗಳ ಐಕ್ಯತೆಗಾಗಿ ಕೊನೆ ಉಸಿರಿರುವವರೆಗೂ ಕಳಕಳಿಯ ಪ್ರಯತ್ನ ಮಾಡುತ್ತಲೇ ಬಂದರು. ಸಾಯುವುದಕ್ಕೆ ಮೂರು ಗಂಟೆ ಮೊದಲೇ ಈ ವಿಚಾರದ ಬಗ್ಗೆ ಚಿಂತನೆ ಮಾಡಿದ್ದರು. ಚರ್ಚೆ ಮಾಡಿದ್ದರು. ವಿರೋಧ ಪಕ್ಷಗಳು ಒಂದಾಗದೇ ಇದ್ದರೆ, ರಾಷ್ಟ್ರಕ್ಕೆ ಒಳ್ಳೆಯದಾಗುವುದಿಲ್ಲ ಎನ್ನುವ ಮಾತನ್ನು ಒತ್ತಿ ಒತ್ತಿ ಹೇಳಿದ್ದರು. ಮಾನ್ಯ ಮಿತ್ರರಾದಂತ ಪಟೇಲರು ಹೇಳಿದಂತೆ ವಿರೋಧ ಪಕ್ಷಗಳ ನಾಯಕರು ಈ ವಿಚಾರವನ್ನು ಅರಿತುಕೊಂಡು ರಾಷ್ಟ್ರದ ಸೇವೆಗಾಗಿ ಮುಂದೆ ಹೋಗಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ಹೇಳಿದಂತೆ ರಾಜ್ಯದಲ್ಲಿ ದಿವಂಗತ ಅರಸು ಅವರು ಬಡ ಜನತೆಗಾಗಿ ಹಾಕಿಕೊಟ್ಟಂತ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವುದರಿಂದ, ಅವರ ಆತ್ಮಕ್ಕೆ ನಿಜವಾದಂತ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುತ್ತದೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಟ್ಟು ಅವರ ಕುಟುಂಬ ವರ್ಗದವರು ದುಃಖವನ್ನು ಭರಿಸುವಂತ ಶಕ್ತಿಯನ್ನು ಕೊಡಲೆಂದು ಭಗವಂತನಲ್ಲಿ ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ತಾವು ಮತ್ತು ಮಾನ್ಯ ಮುಖ್ಯಮಂತ್ರಿಯವರು ಮಂಡಿಸಿರತಕ್ಕಂಥ ನಿರ್ಣಯಕ್ಕೆ ನಾನು ನಮ್ಮ ಪಕ್ಷದ ಪರವಾಗಿ ಬೆಂಬಲವನ್ನು ವ್ಯಕ್ತಪಡಿಸುತ್ತಾ, ದಿವಂಗತರಾದಂತ ದೇವರಾಜ್ ಅರಸು ಅವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನಗೆ ದೇವರಾಜ್ ಅರಸು ಅವರು ೧೯೫೨ನೇ ಇಸವಿಯಿಂದಲೂ ಪರಿಚಿತರಾಗಿದ್ದರು. ಅವರು ಕಾರ್ಮಿಕ ಮಂತ್ರಿಗಳಾಗಿದ್ದಂತ ಸಮಯದಲ್ಲಿ ನಮ್ಮ ನಾಯಕರಾದಂತ ನರಸಿಂಹನವರ ಜೊತೆಯಲ್ಲಿ ಸಾಮಾನ್ಯ ಕಾರ್ಯಕರ್ತನಾಗಿ ಬರುತ್ತಿದ್ದೆ. ಮಾನ್ಯ ದೇವರಾಜ್ ಅರಸ್ ಅವರು ಕಾರ್ಮಿಕರ ಅನೇಕ ವಿಷಯಗಳನ್ನು ಮನಸ್ಸಿಟ್ಟು ಕೇಳುತ್ತಿದ್ದರು. ಅನೇಕರೀತಿಯಲ್ಲಿ ತಿಳುವಳಿಕೆಗಳನ್ನು ಕೊಡುತ್ತಿದ್ದಲ್ಲದೆ, ಸಹಾಯವನ್ನು ಕೂಡ ಮಾಡುತ್ತಿದ್ದರೆಂದರೆ ತಪ್ಪಿಲ್ಲ. ಇವತ್ತು ನಾನು ಒಬ್ಬ ಕಾರ್ಮಿಕನಾಯಕನಾಗಿ ಬೆಳೆಯುವುದಕ್ಕೆ ದೇವರಾಜ್ ಅರಸು ಅವರು ಕಾರಣರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಕಾರ್ಮಿಕರ ಸಮಸ್ಯೆಗಳು ಬಂದಾಗ, ಅವರ ಪ್ರಶ್ನೆ ಬಂದಾಗ ಮಧ್ಯೆ ಪ್ರವೇಶಿಸಿ ಸಮಸ್ಯೆಗಳನ್ನು ಬಗೆಹರಿಸಿದ್ದುಂಟು. ಉದಾಹರಣೆಗೆ ಹರಿಹರ ಪಾಲಿ ಫೈಬರ್ ಕಾರ್ಖಾನೆಗೆ ಸಂಬಂಧಪಟ್ಟಂತೆ ಗೋಲಿಬಾರು ನಡೆಯಿತು, ಸಣ್ಣ ಸಮಸ್ಯೆಯನ್ನು ಆಡಳಿತ ವರ್ಗ ದೊಡ್ಡದು ಮಾಡಿದಂತ ಸಂದರ್ಭದಲ್ಲಿ ಮಾನ್ಯ ದೇವರಾಜ್ ಅರಸು ಅವರು ಮಧ್ಯಪ್ರವೇಶ ಮಾಡಿ ಸಮಸ್ಯೆಯನ್ನು ಬಗೆಹರಿಸಿದರು. ಕಾರ್ಖಾನೆಯಲ್ಲಿ ಶಾಂತಿ ನೆಲೆಸುವುದಕ್ಕೆ ಅವಕಾಶ ಮಾಡಿಕೊಟ್ಟರು. ನಾನು ನಗರಸಭೆಯ ಅಧ್ಯಕ್ಷನಾಗಿದ್ದಾಗ ದಾವಣಗೆರೆಗೆ ಕರೆಸಿ, ವೈಭವದಿಂದ ಮೆರವಣಿಗೆ ಮಾಡಬೇಕೆಂದು ಇದ್ದೆವು. ತಾವು ಬರಬೇಕೆಂದು ಕೇಳಿಕೊಂಡಾಗ ಬಹಳ ಸಂತೋಷದಿಂದ ಒಪ್ಪಿಕೊಂಡರು. ದಾವಣಗೆರೆ ನಗರಕ್ಕೆ ಬಂದು ವೈಭವವನ್ನು ಕಂಡು ವಿಶ್ವಾಸದಿಂದ ಒಂದು ಮಾತನ್ನು ಹೇಳಿದರು. ಬ್ಯಾಂಕಿನವರು ಸರಿಯಾದ ರೀತಿಯಲ್ಲಿ ರೈತರಿಗೆ ಮತ್ತು ರೈತ ಕಾರ್ಮಿಕರಿಗೆ ಹಾಗೂ ಇನ್ನಿತರ ವರ್ಗದವರಿಗೆ ಸರಿಯಾದ ಸಾಲದ ವ್ಯವಸ್ಥೆಯನ್ನು ಮಾಡದೇ ಹೋದರೆ, ಕಾರ್ಮಿಕ ಸಂಘಟನೆಯ ನಾಯಕರ ಜೊತೆಯಲ್ಲಿ ಹೋರಾಟ ಮಾಡಬೇಕಾಗುತ್ತದೆಂದು ಎಚ್ಚರಿಕೆಯ ಮಾತನ್ನು ಹೇಳಿದರು. ಬಡ ಜನತೆಯ ಕಷ್ಟಕಾರ್ಪಣ್ಯದ ಬಗ್ಗೆ ಬಹಳ ಕಳಕಳಿಯನ್ನಿಟ್ಟುಕೊಂಡಿದ್ದರು. ಹೂವಿನ ಜೊತೆಯಲ್ಲಿ ನಾರು ಸ್ವರ್ಗಸೇರಿದಂತೆ ಇವತ್ತು ನಾವುಗಳೆಲ್ಲಾ ಈ ಒಂದು ಸ್ಥಾನಕ್ಕೆ ಬರಬೇಕಾದರೆ, ಒಂದಲ್ಲ ಒಂದು ಕಾರಣದಿಂದ ದಿವಂಗತ ಅರಸು ಅವರೇ ಕಾರಣ ಕರ್ತರಾಗಿದ್ದಾರೆ. ಅವರನ್ನು ನಾವು ಸದಾ ಸ್ಮರಣೆ ಮಾಡಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಎಲ್ಲವರ್ಗದ ಅನುಕೂಲಕ್ಕಾಗಿ ಅವರ ಅಧಿಕಾರ ಅವಧಿಯಲ್ಲಿ ಕೈಗೊಂಡಂತ ಕಾರ್ಯಕ್ರಮಗಳನ್ನು ಚಾಚೂ ತಪ್ಪದೇ ಕಾರ್ಯಗತಗೊಳಿಸಿದಾಗ ಮಾತ್ರ ಅವರಿಗೆ ನಾವು ನಿಜವಾದ ಗೌರವ

ವನ್ನು ಸಲ್ಲಿಸಿದಂತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಯವರು ಈಗಾಗಲೇ ಅವರ ಜ್ಞಾಪಕಾರ್ಥಕ ವಾಗಿ ಒಂದು ಸಂಶೋಧನಾ ಕೇಂದ್ರವನ್ನು ಮಾಡುತ್ತೇವೆಂದು ಹೇಳಿದ್ದಾರೆ ವಿಧಾನಸೌಧದ ಮುಂದೆ ಅವರ ಪ್ರತಿಮೆ ಸ್ಥಾಪನೆ ಮಾಡಲಾಗುವುದೆಂದು ತಿಳಿಸಿದ್ದಾರೆ ಒಳ್ಳೆಯ ತೀರ್ಮಾನಗಳನ್ನು ಮಾನ್ಯ ಮುಖ್ಯ ಮಂತ್ರಿಯವರು ತೆಗೆದುಕೊಂಡಿದ್ದಾರೆ. ರಾಜ್ಯದಲ್ಲಿ ಅನೇಕ ಜನ ಮುಖ್ಯಮಂತ್ರಿಗಳಾಗಿ ಹೋಗಿದ್ದಾರೆ. ಸಾಮಾನ್ಯ ಜನ ಮುಖ್ಯಮಂತ್ರಿಯವರನ್ನು ಭೇಟಿ ಮಾಡುವಂತ ಅವಕಾಶ ಸಿಕ್ಕಿದ್ದು ದಿವಂಗತ ಅರಸು ಅವರ ಕಾಲದಲ್ಲಿ. ದಿವಂಗತರು ಮುಖ್ಯಮಂತ್ರಿ ಪದವಿ ಹೋದಮೇಲೂ ಕೂಡ ಜನತೆಯ ಸಮಸ್ಯೆಗಳ ಕಡೆಗೆ ಹೆಚ್ಚಿನ ಗಮನ ಕೊಟ್ಟು, ರಾಷ್ಟ್ರದ ಸಮಸ್ಯೆಗಳ ಕಡೆಗೂ ತಮ್ಮ ಗಮನವನ್ನು ಹರಿಸಿ ರಾಷ್ಟ್ರಮಟ್ಟದ ನಾಯಕರಾಗಿ ಕರ್ನಾಟಕಕ್ಕೆ ಕೀರ್ತಿ ತರತಕ್ಕಂಥ ಸಮಯದಲ್ಲಿ ವಿಧಿ ಅವರನ್ನು ಸೆಳೆದುಕೊಂಡಿದ್ದು. ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ಭಾರತಕ್ಕೆ ತುಂಬಲಾರದ ನಷ್ಟವಾಗಿದೆ ಅದರಲ್ಲಿಯೂ ವಿರೋಧ ಪಕ್ಷದವರಾದ ನಮಗೆ ಬಹಳಷ್ಟು ಹಾನಿಯಾಗಿದೆ. ಅಧಿಕಾರ ಇರಲಿ ಇಲ್ಲದೇ ಇರಲಿ ಜನತೆಯ ಸೇವೆಯನ್ನು ಸದಾ ಮಾಡಬಹುದೆಂಬುದನ್ನು ಮನದಟ್ಟು ಮಾಡಿಕೊಟ್ಟಂತ ಒಬ್ಬ ಮಹಾ ವ್ಯಕ್ತಿಯನ್ನು ಈ ದಿವಸ ಸ್ಮರಿಸಬೇಕಾಗಿದೆ. ದಿವಂಗತ ಅರಸು ಅವರು ತಮ್ಮ ಅಧಿಕಾರಾವಧಿಯಲ್ಲಿ ದೀನದಲಿತರಾಗಿ. ಹಿಂದುಳಿದ ವರ್ಗದವರಿಗಾಗಿ ಹಾಕಿದಂಥ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುವಂತ ಶಕ್ತಿಯನ್ನು ಭಗವಂತನೂ ಮಾನ್ಯ ಮುಖ್ಯ ಮಂತ್ರಿಯವರಿಗೆ ಕೊಡಲಿ ದಿವಂಗತರ ಪರಿವಾರದವರಿಗೂ ದುಃಖವನ್ನು ಭರಿಸುವಂತ ಶಕ್ತಿಯನ್ನು ನೀಡಲಿ.

ಅಧ್ಯಕ್ಷರೇ, ಮತ್ತೊಂದು ವಿಚಾರವನ್ನು ತಿಳಿಸಬೇಕೆಂದರೆ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡತಕ್ಕ ಶಕ್ತಿ ಅವರಲ್ಲಿ ಇದ್ದುದರಿಂದ, ಇದೇ ಸದನದಲ್ಲಿ ಈ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದರು ಅವರು ಈ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದರೂ ಇವೊತ್ತು ಅನೇಕ ವ್ಯವಹಾರಗಳು ಆಂಗ್ಲ ಭಾಷೆಯಲ್ಲಿಯೇ ನಡೆಯುತ್ತಿದೆ, ದೇವರಾಜ್ ಅರಸರು ಕರ್ನಾಟಕ ಎಂಬುದಾಗಿ ನಾಮಕರಣ ಮಾಡಿರತಕ್ಕದ್ದನ್ನು ಶಾಶ್ವತಗೊಳಿಸಬೇಕಾದರೆ. ಕರ್ನಾಟಕದಲ್ಲಿ ನಡೆಯುತಕ್ಕ ಆಡಳಿತ ವ್ಯವಸ್ಥೆ ರೀತಿ ನೀತಿ ಎಲ್ಲ ಜನರಿಗೆ ತಿಳಿಯಬೇಕಾದರೆ ಕನ್ನಡದಲ್ಲಿಯೇ ಎಲ್ಲಾ ವ್ಯವಹಾರಗಳನ್ನು ನಡೆಸಲಿಕ್ಕೆ ಪ್ರತಿಜ್ಞೆ ತೊಟ್ಟು ಆ ಕಾರ್ಯ ಮುಂದುವರಿಸಬೇಕಾದ್ದು ಸರ್ಕಾರದ ಕರ್ತವ್ಯವೆಂದು ಭಾವಿಸಿ ಇನ್ನು ಮುಂದೆ ಎಲ್ಲ ವ್ಯವಹಾರಗಳನ್ನು ಕನ್ನಡದಲ್ಲಿಯೇ ನಡೆಸುವುದಕ್ಕೆ ಅವಕಾಶ ಒದಗಿಸಿಕೊಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಂಡು ಈ ದಿವಸ ಮಾನ್ಯ ದೇವರಾಜ್ ಅರಸರ ಬಗ್ಗೆ ನನಗೆ ಒಂದೆರಡು ಮಾತುಗಳನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂಥ ಅಧ್ಯಕ್ಷರಿಗೆ ವಂದನೆಯನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಎಸ್. ಪಾಟೀಲ್. (ರಾಮ್‌ದುರ್ಗ).—ಸನ್ಮಾನ್ಯ ಅಧ್ಯಕ್ಷರೆ. ತಾವು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಅಗಲಿದ ನಾಯಕನ ಬಗ್ಗೆ ಏನು ಭಾವನೆಗಳನ್ನು ವ್ಯಕ್ತ ಮಾಡಿದಿರೋ ಆ ಭಾವನೆಗಳಿಗೆ ನಾನು ಪಾಲುದಾರನಾಗುತ್ತೇನೆ. ಅವರ ವ್ಯಕ್ತಿತ್ವದ ಬಗ್ಗೆ ಹಲವು ಮುಖಗಳನ್ನು ಈ ಹಿಂದೆ ಮಾತನಾಡಿದಂಥ ಸದಸ್ಯರು ದರ್ಶನ ಮಾಡಿಕೊಟ್ಟಿದ್ದಾರೆ, ನನ್ನ ಮತ್ತು ಅವರ ಸಂಬಂಧ 1962 ರಿಂದ ಪ್ರಾರಂಭವಾಯಿತು. ನಾನು ಮೊದಲ ಸಾರಿ ವಿಧಾನ ಸಭಾ ಸದಸ್ಯನಾದ ಮೇಲೆ ವಿಶೇಷವಾಗಿ ಅವರ ಜೊತೆ ಸಂಬಂಧ ಬೆಳೆದದ್ದು. ನಾನು ನಾಲ್ಕು ವರ್ಷಗಳ ಕಾಲ ಲೆಜಿಸ್ಲೇಚರ್ ಕಾಂಗ್ರೆಸ್ ಪಾರ್ಟಿ ಕಾರ್ಯದರ್ಶಿಯಾಗಿದ್ದಾಗ ಅನಂತರ ರಾಜ್ಯ ಸಚಿವ ಮತ್ತು ಸಚಿವನಾಗಿದ್ದಾಗ ಅವರ ಹೃದಯ ಮಂತಿಕೆಯನ್ನು ಅವರ ಹೃದಯ ಶ್ರೀಮಂತಿಕೆಯನ್ನು ಕಂಡವನಾಗಿದ್ದೆ. ಅದನ್ನು ಹೊಗಳಲು ನಮ್ಮ ಭಾಷೆಯಲ್ಲಿ ಶಬ್ದ ಸಂಪತ್ತು ಸಾಲುವುದಿಲ್ಲ ಎಂದು ನನ್ನ ಭಾವನೆ ಅವರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಅಂದಿನಿಂದ ಇಲ್ಲಿಯವರೆಗೆ ಈ ಸಭೆಯ ಸದಸ್ಯರಾಗಿ ನಮ್ಮ ಮಧ್ಯೆ ಇದ್ದರು. ಅವರು ಈ ಬಾಗಿಲಿನಿಂದ ಬರುವಾಗ ಮತ್ತು ಆ ಬಾಗಿಲಿನಿಂದ ಬರುವಾಗ ಅವರ ಠೀವಿಯನ್ನು ನೋಡಿದರೆ ಮೈಸೂರು ಜಂಬೂ ಸವಾರಿ ಬಂದ ಹಾಗೆ ಬರುತ್ತಿದ್ದರು. ಇವೊತ್ತು ಅವರು ಇಲ್ಲದೇ ಇರುವುದನ್ನು ನೆನೆಸಿಕೊಂಡರೆ ನಮಗೆ ಒಂದು ದೊಡ್ಡ ಆಘಾತವಾಗುತ್ತದೆ. ಅವರು ಈ ಮುನ್ನಾ ದಿನವನ್ನೇ ಏತಕ್ಕೆ ಆರಿಸಿಕೊಂಡರು, ಮೊದಲೇ ಆಗಿದ್ದರೆ ನಾವೆಲ್ಲರೂ ನಮ್ಮ ಕೊನೇ ನಮಸ್ಕಾರ ಹೇಳಲಿಕ್ಕೆ ಬರುವುದಕ್ಕೆ ಆಗುತ್ತಾ ಇರಲಿಲ್ಲ ಅವರು ಈ ಮುನ್ನಾ ದಿವಸವೇ ಕೊನೆಯ ಉಸಿರೆಳೆದಿದ್ದರಿಂದ ಕೊನೆಯ ದರ್ಶನ ಮಾಡಲಿಕ್ಕೆ ಅವಕಾಶವಾಯಿತು ದೇವರು ಕರುಣಾಮಯಿ, ದಯಾಮಯ ಎಂದು ಹೇಳುತ್ತೇವೆ. ಮಾನ್ಯ ಅರಸರ ವಿಷಯದಲ್ಲಿ ಏತಕ್ಕೆ ಅಷ್ಟು ಕ್ರೂರಿಯಾದನೋ ಅರ್ಥವಾಗುತ್ತಿಲ್ಲ, ಅವರಿಗೆ ಬಂದಿದ್ದ ಸರ್ಪ

ಸುತ್ತಿತ್ತು. ಆ ನೋವಿನ ಕಷ್ಟವನ್ನು ನಾವು ನೋಡಿದಾಗ, ಇದು ನಮ್ಮ ವೈರಿಗಳಿಗೂ ಕೊಡಬರಬಾರದು ಅಂತ ಅನಿಸುತ್ತಿತ್ತು. ಅನಂತರ ಅವರ ಮಗಳ ಸಾವು ೧೫–೨೦ ದಿವಸಗಳ ಮೊದಲೇ ಅವರ ತಮ್ಮನ ಸಾವು ಅವರು ವ್ಯಥೆಪಡುತ್ತಾ ಒಂದು ಮಾತನ್ನು ನನ್ನ ಗೆಳೆಯರೊಂದಿಗೆ ತಿಳಿಸಿದ್ದರು. ನನಗೆ ಗಂಡುಮಕ್ಕಳಿಲ್ಲ. ನನ್ನ ತಮ್ಮನಿಗೂ ಇಲ್ಲ. ನನ್ನ ತಮ್ಮ ನನ್ನ ಅಂತ್ಯ ಸಂಸ್ಕಾರ ಮಾಡಬೇಕಾಗಿತ್ತು. ನಾನು ಇವನನ್ನು ಮಾಡಬೇಕಾದ್ದು ಬಂತಲ್ಲಾ ಎಂದು ಹೇಳಿದ್ದರಂತೆ ಅದು ಆದ ಸ್ವಲ್ಪ ದಿವಸದಲ್ಲಿಯೇ ಅವರು ನಮ್ಮ ಮಧ್ಯೆ ಇಲ್ಲವಾಗಿದ್ದಾರೆ ಅವರ ಕುಟುಂಬಕ್ಕೆ ಆಗಿರತಕ್ಕ ಹಾನಿಯನ್ನು ಈ ದೇಶ ತುಂಬಿಕೊಡಲಿಕ್ಕೆ ಸಾಧ್ಯವಿಲ್ಲ. ನಮಗೆ ಇಷ್ಟೊಂದು ವ್ಯಥೆಯಾಗಿರುವಾಗ ಅವರು ಯಾವರೀತಿ ಸಹಿಸಿಕೊಳ್ಳುತ್ತಾರೊ ನಮಗೆ ತಿಳಿಯುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಗುರು ಕಾಣಿಕೆಯನ್ನು ಸಲ್ಲಿಸಿದರು. ಈ ಸಭೆಯ ಸದಸ್ಯರಾಗಿ ನಾವುಗಳು ಸಲ್ಲಿಸತಕ್ಕ ಗುರು ಕಾಣಿಕೆ ಏನು ನಾವು ಸಲ್ಲಿಸತಕ್ಕ ಗುರುಕಾಣಿಕೆ ಅವರ ಹೃದಯಕ್ಕೆ ಹತ್ತಿರವಾದ ಯೋಜನೆಗಳು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸಕ್ರಿಯವಾಗಿ ಸಹಾಯ ಮಾಡುವುದೇ ನಮ್ಮ ನಿಜವಾದಂಥ ಗುರು ಕಾಣಿಕೆ. ನನಗೆ ಹೆಚ್ಚು ಮಾತನಾಡಲಿಕ್ಕೆ ಶಕ್ತಿ ಇಲ್ಲ. ಏಕೆಂದರೆ ಮನುಷ್ಯ ದುಃಖದಲ್ಲಿರುವಾಗ ಮಾತು ಮೌನವಾಗುತ್ತದೆ. ಆದ್ದರಿಂದ ಅವರ ಆತ್ಮಕ್ಕೆ ಶಾಂತಿ ಸಿಕ್ಕಬೇಕಾದರೆ ಅವರ ಹೃದಯಕ್ಕೆ ಹತ್ತಿರವಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರೆ ಮಾತ್ರ ಅವರ ಆತ್ಮಕ್ಕೆ ಚಿರಶಾಂತಿ ಸಿಕ್ಕುತ್ತದೆ. ಗೊತ್ತುವಳಿ ಮಂಡಿಸುವುದರಿಂದ ಅವರಿಗೆ ಶಾಂತಿ ಸಿಕ್ಕುವುದಿಲ್ಲ. ಅವರಿಗೆ ಗುರು ಕಾಣಿಕೆಯನ್ನು ಸಲ್ಲಿಸುವುದರ ಸಲುವಾಗಿ ನಾವೆಲ್ಲರೂ ಪ್ರತಿಜ್ಞಾಬದ್ಧರಾಗಿರಬೇಕೆಂದು ಹೇಳಿ ಅವರ ಕುಟುಂಬದಲ್ಲಿ ಆದ ದುಃಖದಲ್ಲಿ ನಾವೆಲ್ಲರೂ ಭಾಗಿಯಾಗಿದ್ದೇವೆ. ಅವರ ಕುಟುಂಬ ವರ್ಗಕ್ಕೆ ಆಗಿರತಕ್ಕ ದುಃಖವನ್ನು ಸಹಿಸತಕ್ಕ ಶಕ್ತಿಯನ್ನು ಭಗವಂತನು ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಗಟ್ಟಿ ಚಂದ್ರಶೇಖರ್ (ಗುಬ್ಬಿ)—ಸನ್ಮಾನ್ಯ ಅಧ್ಯಕ್ಷರೆ ಈ ದಿವಸ ಈ ತುಂಬಿದ ಸಭೆಯಲ್ಲಿ ಶ್ರೀಮಾನ್ ದೇವರಾಜ್ ಅರಸರ ಸ್ಥಾನ ಬರಿದಾಗಿರತಕ್ಕದ್ದು ಈ ಸಭೆಯೇ ಬರಿದಾದಂತೆ ಭಾಸವಾಗುತ್ತದೆ. ಅವರು ಈ ಸಭೆಯಲ್ಲಿ ಯಾವ ಸ್ಥಳದಲ್ಲೇ ಕುಳಿತಿರಲಿ ಅವರ ವರ್ಚಸ್ಸು ಅವರ ಪ್ರತಿಭೆ ಈ ಸಭೆಯಲ್ಲಿ ಬೆಳಗುತ್ತಿತ್ತು. ಅವರು ಇಲ್ಲದೇ ಇರುವುದರಿಂದ ಇವೊತ್ತು ನಾವು ಕತ್ತಲಲ್ಲಿ ಇದ್ದೇವೆ ಎಂಬ ಮನವರಿಕೆಯಾಗುತ್ತಿದೆ. ಶರಣರ ಸಾವು ಮರಣದಲ್ಲಿ ನೋಡು, ಅಂದರೆ ಶಿವಶರಣರು ಶಿವಪೂಜೆಯಲ್ಲಿ ನಿರತರಾಗಿದ್ದಾಗ ಶಿವೈಕ್ಯರಾಗುವುದು ಮಹಾ ಪುಣ್ಯ ಎಂದು ಭಾವಿಸಿದ್ದೇವೆ. ಶ್ರೀಮಾನ್ ಅರಸ್ ಅವರಿಗೆ ರಾಜಕೀಯವೇ ಶಿವ ಪೂಜೆಯಾಗಿತ್ತು. ಅವರು ಬೆಳಿಗ್ಗೆಯಿಂದ ಸಂಜೆಯವರೆಗೆ ಆ ಶಿವ ಪೂಜೆಯಲ್ಲಿಯೇ ತಲ್ಲೀನರಾಗಿದ್ದು ಆ ಪೂಜಾ ಸಮಯದಲ್ಲಿಯೇ ಶಿವೈಕ್ಯರಾದರು. ಉತ್ತಮವಾದ ಸಾವನ್ನು ಜಗದೀಶ್ವರ ಕರುಣಿಸಿದ್ದಾನೆ. ಅವರ ರಾಜಕೀಯದ ವಿಚಾರದ ಬಗ್ಗೆ ಮಾತನಾಡತಕ್ಕಂಥ ಶಕ್ತಿ ನನಗೆ ಇಲ್ಲದೇ ಇದ್ದರೂ ಕೂಡ ಒಂದು ವೈಯಕ್ತಿಕವಾದ ವಿಚಾರ ಸ್ಮರಿಸಿಕೊಳ್ಳಬೇಕಾದ್ದು ಮುಖ್ಯ. ನಾ ಕಂಡ ದೇವರಾಜ ಅರಸರು ೧೯೬೯ರಲ್ಲಿ ಈ ದೇಶದಲ್ಲಿ ಕಾಂಗ್ರೆಸ್ ಇಬ್ಭಾಗವಾದಾಗ ಶ್ರೀಮತಿ ಇಂದಿರಾ ಗಾಂಧಿಯವರ ನಾಯಕತ್ವದ ಕಾಂಗ್ರೆಸ್‌ನ ಹೊಣೆಯನ್ನು ಹೊತ್ತು ಅವರು ದಿವಂಗತ ಕೆಂಗಲ್ ಹನುಮಂತಯ್ಯನವರು, ಸಿದ್ದವೀರಪ್ಪನವರು, ಈ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಕಟ್ಟುವ ಕೆಲಸದಲ್ಲಿ ಪ್ರವಾಸ ಮಾಡುವಾಗ ನಮ್ಮ ಊರಿಗೆ ಬಂದಿದ್ದರು. ಆ ಸಭೆಯಲ್ಲಿ ನಾನು ಸ್ವಾಗತ ಭಾಷಣ ಮಾಡಿದಾಗ ಶ್ರೀಮಾನ್ ದೇವರಾಜ್ ಅರಸ್ ಅವರು ಅಂದೇ ನನ್ನ ಭೇಟಿಯಾಗಿದ್ದು ವೇದಿಕೆಯ ಮೇಲೆ ತಬ್ಬಿಕೊಂಡು ಬಹಳ ಚೆನ್ನಾಗಿ ಮಾತನಾಡುತ್ತೀರಿ ಎಂದು ಹೇಳಿದ್ದರು. ಅದೇ ರೀತಿ ಅಭಿಮಾನ ಇಟ್ಟು ೧೯೭೨ ಮತ್ತು ೧೯೭೮ನೇ ಇಸವಿಯಲ್ಲಿ ಕೂಡ ನನಗೆ ಕಾಂಗ್ರೆಸ್ ಸಂಸ್ಥೆಯ ಟಿಕೆಟ್ ಕೊಟ್ಟು ರಾಜಕೀಯಕ್ಕೆ ತಂದರು; ಆದ್ದರಿಂದ ವೈಯಕ್ತಿಕವಾಗಿ ನಾನು ಅವರಿಗೆ ನನ್ನ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಅವರಿಗೆ ಯಾವ ವ್ಯಕ್ತಿಯಲ್ಲೇ ಆಗಲಿ, ಒಂದು ಪ್ರತಿಭೆ ಗುಣ ಇದೆ ಎನ್ನುವುದನ್ನು ಅರಿತು ಪ್ರೋತ್ಸಾಹ ಕೊಡುತ್ತಿದ್ದರು ಎನ್ನುವುದಕ್ಕೆ ನಿದರ್ಶನ ಈ ದಿವಸ ಶ್ರೀಮಾನ್ ಗುಂಡೂರಾವ್ ಅವರು ಮುಖ್ಯ ಮಂತ್ರಿಗಳಾಗಿರುವುದೇ ನಿದರ್ಶನ. ಮಾನ್ಯ ಮುಖ್ಯ ಮಂತ್ರಿಗಳು ಶ್ರದ್ಧಾಂಜಲಿ ನಿರ್ಣಯ ಅರ್ಪಿಸುತ್ತಾ ಅರಸರ ಬಗ್ಗೆ ಏನು ಹೇಳಿದರು ಅದು ನಿಜವಾಗಿಯೂ ಸುವರ್ಣಾಕ್ಷರದಲ್ಲಿ ಬರೆಯತಕ್ಕದ್ದು. ಅವರ ಬಗ್ಗೆ ಇವರಿಗೆ ಎಷ್ಟು ಭಕ್ತಿ ಗೌರವ ಇತ್ತು ಎನ್ನತಕ್ಕದ್ದು ವ್ಯಕ್ತವಾಗುತ್ತದೆ.

† Indicates that remarks or speeches have not been revised by the member concerned.

ಶ್ರೀಮಾನ್ ದೇವರಾಜ್ ಅರಸ್ ಅವರಿಗೂ ಕೂಡ ಶ್ರೀಮಾನ್ ಗುಂಡೂರಾಯರ ಬಗ್ಗೆ ಏನು ಅಭಿಮಾನ ಇತ್ತು ಎನ್ನುವುದನ್ನು ಪ್ರಜಾವಾಣಿ ಪತ್ರಿಕೆಯವರು ಕೊನೇ ಸಂದರ್ಶನ ಮಾಡಿದ ಸಂದರ್ಭದಲ್ಲಿ ಪತ್ರಿಕೆಯವರು ಶ್ರೀಮಾನ್ ಗುಂಡೂರಾಯರ ಆಡಳಿತದ ಬಗ್ಗೆ ನಿಮ್ಮ ಅಭಿಪ್ರಾಯವೇನು ಎಂದು ಕೇಳಿದಾಗ ಅವರು ಪ್ರಾರಂಭದಲ್ಲಿ ಬಹಳ ಹುರುಪಿನಿಂದ ಇದ್ದರು ಈಗ ಅರ್ಥ ಮಾಡಿಕೊಂಡು ಚೆನ್ನಾಗಿ ಆಡಳಿತ ನಡೆಸುತ್ತಿದ್ದಾರೆ ಎಂಬ ತಮ್ಮ ಕೊನೇ ಸಂದೇಶವನ್ನು ಹೇಳಿ ಶ್ರೀಮಾನ್ ಗುಂಡೂರಾಯರಿಗೆ ಆಶೀರ್ವಾದ ಮಾಡಿದ್ದಾರೆ.

೩-೦೦ ಪಿ.ಎಂ.

ಇಲ್ಲಿ ಒಂದು ಮಹತ್ವದ ವಿಷಯ ಎಂದರೆ ಮಾನ್ಯ ಮುಖ್ಯಮಂತ್ರಿಯವರಾದ ಗುಂಡೂರಾಯರು ಹೇಳಿದಂತೆ ದಿ॥ ದೇವರಾಜ ಅರಸರ ಪ್ರತಿಮೆಯನ್ನು ನಿಲ್ಲಿಸುವುದು ಬಹಳ ಒಳ್ಳೆಯ ಕೆಲಸ. ನಾಡಿನ ಜನರೆಲ್ಲರೂ ಕೂಡ ದೇವರಾಜ ಅರಸರನ್ನು ಆಚಂದ್ರಾರ್ಕವಾಗಿ ಸ್ಮರಿಸಿಕೊಳ್ಳುವಂಥ ಕೆಲಸವನ್ನು ಮಾಡುವುದರ ಮೂಲಕ ಮಾನ್ಯ ಗುಂಡೂರಾಯರು ತಮ್ಮ ಗುರುದಕ್ಷಿಣೆಯನ್ನು ಅವರಿಗೆ ಅರ್ಪಿಸಲಿದ್ದಾರೆ. ಇಷ್ಟೇ ಅಲ್ಲ, ಮಾನ್ಯ ಗುಂಡೂರಾಯರು ಇನ್ನೂ ಒಂದು ರೀತಿಯಲ್ಲಿ ಅಂದರೆ ಮಾನ್ಯ ದೇವರಾಜ ಅರಸರು ಐಕ್ಯವಾದಮೇಲೆ ಅವರ ಶರೀರ ಈ ಜಗತ್ತಿನಿಂದ ಕಣ್ಮರೆಯಾಗುವವರೆಗೂ ಆ ವೈಭವಪೂರ್ಣ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಎಷ್ಟು ಗೌರವವನ್ನು ಸಲ್ಲಿಸುವುದಕ್ಕೆ ಸಾಧ್ಯವೋ ಅಷ್ಟನ್ನೂ ಸಲ್ಲಿಸಿ ಸ್ಟೇಟ್ ಫ್ಯೂನರಲ್‌ನ್ನು ಮಾಡಿ, ಒಂದು ಬ್ಲ್ಯಾಕ್ ಗೆಜೆಟ್‌ನ್ನು ಹೊರಡಿಸುವುದರ ಮೂಲಕ ಅತ್ಯಂತ ಉನ್ನತ ಗೌರವವನ್ನು ತೋರಿಸಿ ತಮ್ಮ ಗುರುದಕ್ಷಿಣೆಯನ್ನು ಸಲ್ಲಿಸಿದ್ದಾರೆ ಅವರ ಅಂತ್ಯ ಸಂಸ್ಕಾರ ಕಾರ್ಯವನ್ನು ನೆರವೇರಿಸಿದ್ದಕ್ಕಾಗಿ ಮಾನ್ಯ ಗುಂಡೂರಾಯರಿಗೆ ಅತ್ಯಂತ ವಂದನೆಗಳನ್ನು ಸಲ್ಲಿಸಿ, ಮಾನ್ಯ ದೇವರಾಜ ಅರಸರ ಆತ್ಮಕ್ಕೆ ಆ ಪರಮಾತ್ಮನು ಚಿರ ಶಾಂತಿಯನ್ನು ಕರುಣಿಸುವುದರ ಜೊತೆಗೆ ಮೃತರ ನಿಧನದಿಂದ ಅವರ ಕುಟುಂಬ ವರ್ಗದವರಿಗೆ ಉಂಟಾಗಿರತಕ್ಕ ದುಃಖವನ್ನು ಭರಿಸುವ ಶಕ್ತಿಯನ್ನು ಆ ದಯಾಮಯನು ನೀಡಲೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ).—ಸನ್ಮಾನ್ಯ ಸಭಾಧ್ಯಕ್ಷರೆ. ಮಾನ್ಯ ದೇವರಾಜ ಅರಸರ ನಿಧನದಿಂದ ಉಂಟಾಗಿರತಕ್ಕ ದುಃಖದ ಬಗ್ಗೆ ಮಂಡಿಸಿರುವ ಸಂತಾಪ ಸೂಚಕ ನಿರ್ಣಯದಮೇಲೆ ನಾನು ಮಾತನಾಡಲು ಇಷ್ಟಪಡುತ್ತೇನೆ.

ಮಾನ್ಯ ದೇವರಾಜ ಅರಸರು ನಮ್ಮ ಜಿಲ್ಲೆಯವರೇ ಆಗಿದ್ದರು. ಅವರು ರಾಜಕೀಯ ಜೀವನದಲ್ಲಿ ನಾನೂ ಕೂಡ ಬಹಳ ವರ್ಷಗಳ ವರೆಗೆ ಅಂದರೆ ಪ್ರಜಾ ಪ್ರತಿನಿಧಿ ಸಭೆ ಇದ್ದಾಗಲೂ ಅವರ ಜೊತೆಯಲ್ಲೇ ಇದ್ದೆ. ಆನಂತರ ೧೯೫೫ ರಿಂದ ೫೭ರ ವರೆಗೂ ಅವರ ಜೊತೆಯಲ್ಲೇ ಇದ್ದೆ. ಅಷ್ಟೇ ಅಲ್ಲ, ನಿನ್ನೆ ಭಾನುವಾರ ಅವರು ನಿಧನರಾದಾಗ ಕೂಡ ಅವರ ಮನೆಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸುವಾಗಲೂ ಇದ್ದೆ. ದಿವಂಗತರು ಬಹಳ ಮೇಧಾವಿಗಳು, ದಕ್ಷ ಆಡಳಿತಗಾರರು ಮತ್ತು ತಮ್ಮನ್ನು ನಂಬಿದ ಯಾವ ಸ್ನೇಹಿತರನ್ನೇ ಆಗಲಿ ಯಾವುದೇ ಸಂದರ್ಭದಲ್ಲೂ ಕೈ ಬಿಡದೇ ಇರತಕ್ಕ ಒಳ್ಳೆಯತನ ಅವರಲ್ಲಿತ್ತು. ಒಳ್ಳೆಯ ಧೀಮಂತ ನಾಯಕರಾಗತಕ್ಕ ಎಲ್ಲ ಗುಣಗಳೂ ಅವರಲ್ಲಿ ತುಂಬಿದ್ದುವು. ಹಿಂದೆ ನಾನೂ ಕಾಂಗ್ರೆಸ್ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೆ. ಆ ಒಂದು ಆಧಾರದಮೇಲೆ ನಾನು ಚುನಾವಣೆಗೆ ನಿಲ್ಲಬೇಕಾಗಿದ್ದೆ ಆದ್ದರಿಂದ ನನಗೆ ಕಾಂಗ್ರೆಸ್‌ನಿಂದ ಟಿಕೆಟ್ ದೊರಕಿಸಿಕೊಡಬೇಕೆಂದು ಕೇಳಿದೆ. ಆಗ ಮಾನ್ಯ ನಿಜಲಿಂಗಪ್ಪನವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರೂ ಮತ್ತು ರಾಜ್ಯದ ಮುಖ್ಯಮಂತ್ರಿಗಳೂ ಆಗಿದ್ದರು. ನಾನು ಟಿಕೆಟ್ ಕೇಳಿದಾಗ ಅವರುನು ಹೇಳಿದರು ಎಂದರೆ, ನಾನು ನಿಮಗೆ ಟಿಕೆಟ್ ಕೊಡಿಸಲು ಶಿಫಾರಸು ಮಾಡಲು ಸಾಧ್ಯವಿಲ್ಲ. ಕಾರಣ ಹಿಂದುಳಿದ ವರ್ಗದವರ ಪೈಕಿ ಯಾರನ್ನಾದರೂ ಒಬ್ಬರನ್ನು ಆ ಸ್ಥಾನಕ್ಕೆ ಸೂಚಿಸಬೇಕೆಂದಿದ್ದೇನೆ. ಆದ್ದರಿಂದ ಖಂಡಿತವಾಗಿಯೂ ನಿಮಗೆ ಟಿಕೆಟ್ ಕೊಡಿಸಲು ಶಿಫಾರಸು ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ, ಖಡಾಖಂಡಿತವಾಗಿ ಹೇಳಿದರು. ನಂತರ ನನಗೆ ಹೈಕಮ್ಯಾಂಡ್‌ನಿಂದ ಟಿಕೆಟ್ ಸಿಕ್ಕಿತು. ಆಗ ನಾನು ಮಾನ್ಯ ದೇವರಾಜ ಅರಸರ ಬಳಿ ಹೋಗಿ, ಸ್ವಾಮಿ, ನನಗೆ ಟಿಕೆಟ್ ಸಿಕ್ಕಿದೆ, ಆದರೆ ನಿಮ್ಮ ಅಭ್ಯರ್ಥಿಯಾಗಿ ಸಿಕ್ಕಿಲ್ಲ. ಆದರೂ ನೀವು ನನ್ನ ಗೆಲುವಿಗೆ ಸಹಾಯ ಮಾಡಬೇಕೆಂದು ಕೇಳಿದೆ. ಆಗ ಅವರು ಹೇಳಿದರು, ಶಿವರುದ್ರಪ್ಪನವರೇ ಇದರಲ್ಲಿ ನನಗೆ ವೈಯುಕ್ತಿಕವಾಗಿ ಏನೂ ಇಲ್ಲ. ಆದರೂ ನಮ್ಮ ಸಂಸ್ಥೆಯಿಂದ ನಿಮಗೆ ಟಿಕೆಟ್ ಸಿಕ್ಕಿದೆ. ಇದರಲ್ಲಿ ನನ್ನ ಹೆಚ್ಚುಗಾರಿಕೆ

ಏನೂ ಇಲ್ಲ. ನಿಮ್ಮ ಇಷ್ಟದಂತೆಯೇ ನಿಮ್ಮ ಗೆಲುವಿಗೆ ನನ್ನ ಕೈಲಾದ ಸಹಾಯವನ್ನು ಮಾಡುತ್ತೇನೆಂದು ಭರವಸೆ ನೀಡಿದರು ಅಂದರೆ ಅಂಥ ಒಂದು ಶಿಸ್ತಿನ ಸಿಪಾಯಿಯಾಗಿದ್ದರು. ಅವರು ಮಂತ್ರಿಯಾಗಿ, ಮುಖ್ಯ ಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾಗಿನಿಂದಲೂ ಅವರನ್ನು ನಾನು ಚೆನ್ನಾಗಿ ಬಲ್ಲೆ. ೧೯೭೮ರ ಚುನಾವಣೆಯಲ್ಲಿ ನನ್ನನ್ನೂ, ಶ್ರೀಮಾನ್ ಡಿ. ಎಂ. ಸಿದ್ದಯ್ಯನವರನ್ನೂ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಲ್ಲಬೇಕೆಂದು ಹೇಳಿದರು. ಆದರೆ ನಮ್ಮ ಜನಾಂಗದವರು ಇದನ್ನು ಒಪ್ಪಲಿಲ್ಲವಾದ್ದರಿಂದ ನಾನು ಸ್ವತಂತ್ರ ಅಭ್ಯರ್ಥಿಯಾಗಿ ನಿಂತು ಗೆದ್ದು ಬಂದೆ. ಇದರಿಂದ ಅವರು ತಮ್ಮ ಮನಸ್ಸಿಗೆ ಏನೂ ಬೇಸರವನ್ನು ಮಾಡಿಕೊಳ್ಳಲಿಲ್ಲ. ಆನಂತರ ನಾನು ಅವರ ಬಳಿಗೇ ಹೋಗಿ ನಾನು ಕಾಂಗ್ರೆಸ್‌ಗೆ ಸೇರಿಕೊಳ್ಳುತ್ತೇನೆಂದು ಹೇಳಿದಾಗ ಅವರು ನನ್ನನ್ನು ಅತ್ಯಂತ ಸಂತೋಷದಿಂದ ಸ್ವಾಗತಿಸಿದರು. ಮೊನ್ನೆ ಭಾನುವಾರದ ದಿವಸ ಸುಮಾರು ಸಂಜೆ ೬.೩೦ ಗಂಟೆ ಸಮಯದಲ್ಲಿ ಶ್ರೀಮಾನ್ ದೇವರಾಜ ಅರಸರು ನಿಧನವಾದ ಸುದ್ದಿ ನನಗೆ ಬಂತು. ಕೂಡಲೇ ನಾನು ಅವರ ಮನೆಗೆ ಹೋದೆ. ಅವರ ಪಾರ್ಥಿವ ಶರೀರವನ್ನು ಕೊನೇ ಗಳಿಗೆಯಲ್ಲಿ ನೋಡುವ ಅವಕಾಶ ನನಗೆ ಸಿಕ್ಕಿತು. ಮೊದಲು ಮುಖ್ಯ ಮಂತ್ರಿಗಳು ಅಲ್ಲಿಗೆ ಬಂದರು, ಅನಂತರ ಇತರೇ ಮಂತ್ರಿಗಳೂ ಬಂದರು. ಮಾನ್ಯ ಮುಖ್ಯ ಮಂತ್ರಿಗಳಾದ ಗುಂಡೂರಾಯರು ತಮ್ಮ ಭಾಷಣದಲ್ಲಿ ಹೇಳಿದಂತೆ ಗುರುದಕ್ಷಿಣೆ ಎಂದರೆ ಕೊನೆಯ ಗಳಿಗೆಯವರೆಗೂ ಇವರು ಅರಸರ ಶವದ ಹತ್ತಿರದಲ್ಲೇ ಕೂತ ಕೊಂಡಿದ್ದರು ಅದರಂತೆಯೇ ಇತರೇ ಮಂತ್ರಿಗಳೂ ಕೂಡ ಅವರ ಜೊತೆಯಲ್ಲೇ ಇದ್ದರು. ಅಂಥ ದಕ್ಷ ಆಡಳಿತಗಾರರಿಗೆ ನಾವು ಎಷ್ಟೇ ಕಾಣಿಕೆಯನ್ನು ಸಲ್ಲಿಸಿದರೂ ಅದು ಅತ್ಯಲ್ಪವೇ ಆಗುತ್ತದೆ. ಆದರೆ ಹಿಂದಿನ ಯಾವ ಮುಖ್ಯ ಮಂತ್ರಿಯೇ ಆಗಲಿ ನಿಧನರಾದಾಗ ಇಷ್ಟು ದೊಡ್ಡದಾದ ಗೌರವ ಸಿಕ್ಕಿಲ್ಲ ಅಂದರೆ ಅವರು ರಾಜಕೀಯದಲ್ಲಿ ಎಷ್ಟು ಪೂಜಾರ್ಹರು ಎಂಬುದನ್ನು ತೋರಿಸುತ್ತದೆ. ಇಂಥ ಮಹನೀಯರು ಇಂದು ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ನಿಧನದಿಂದ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನೂ ಮತ್ತು ಮೃತರ ಆತ್ಮಕ್ಕೆ ಚಿರ ಶಾಂತಿಯನ್ನೂ ಆ ದಯಾಮಯನಾದ ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

SRI WILLIAM ST. JOHN SINCLAIR MARIEY (Nominated).—Mr. Speaker, Sir, while expressing my deepest sympathy and profound sorrow on the sudden and untimely demise of Sri. Devaraj Urs and also identifying myself with the sentiments expressed by the previous speakers, I feel that we should be thankful to God, for the life of the late Sri Devaraj Urs. Because all that he has meant to us, Kanadigas, may, I would say even to the Nation as a whole. I feel that he has now been called to HIGHER service and we should be grateatful to GOD and that we can say, ' Well done, Good Faithful servant ENTER thou into the joy of the Lord and at the same time. I think we should pray to God to give the members of the bereaved family, strength, and courage to bear their great loss with fortitude. Thank you.

† ಶ್ರೀ ಮೈಕೇಲ್ ಬಿ. ಫರ್ನಾಂಡಿಸ್ (ಶಾಂತಿನಗರ).—ಸನ್ಮಾನ್ಯ ಸಭಾಧ್ಯಕ್ಷರೆ. ದಿವಂಗತ ದೇವರಾಜ ಅರಸರ ಪರಿಚಯ ಈಗ್ಗೆ ಸುಮಾರು ೧೮ ವರ್ಷಗಳ ಹಿಂದೆ ಅಂದರೆ ೧೯೬೨ನೇ ಇಸವಿಯಲ್ಲಿ ಆಯಿತು. ಆ ಸಂದರ್ಭ ಯಾವುದು ಎಂದರೆ ಐ.ಟಿ.ಐ.ನಲ್ಲಿ ಒಂದು ದೊಡ್ಡ ಮುಷ್ಕರ ನಡೆಯುತ್ತಿದ್ದಾಗ, ಆ ಸಂದರ್ಭದಲ್ಲಿ ದೇವರಾಜ ಅರಸರು ಕಾರ್ಮಿಕ ಮಂತ್ರಿಗಳಾಗಿದ್ದರು. ಕಾರ್ಮಿಕರ ಬಗ್ಗೆ ವಿಶೇಷವಾದ ಅನುಕಂಪ ಹಾಗೂ ಕಳಕಳಿಯನ್ನು ಹೊಂದಿದ್ದರು. ಅವರ ಕೈಯಲ್ಲಿ ಹೆಚ್ಚಿನ ಅಧಿಕಾರ ಬಂದಾಗ ರಾಜ್ಯದಲ್ಲಿ ಅತೀ ಹಿಂದುಳಿದವರ, ಅಲ್ಪಸಂಖ್ಯಾತರ ಜೀವನ ಮಟ್ಟವನ್ನು ಉತ್ತಮ ಪಡಿಸಲು ಪ್ರಯತ್ನ ಮಾಡಿದ್ದನ್ನು ನಾವು ಕಂಡೆವು ಅವರು ಈಗ ಒಂದು ಮಂತ್ರಿ ಪದವಿಯನ್ನು ಕಳೆದುಕೊಂಡ ನಂತರ ಅದೇ ಧಾಟಿಯಲ್ಲಿ ಕೆಲಸ ಮಾಡಲಿಕ್ಕೆ ಹೋಗುತ್ತಿರುವಾಗ ಅವರ ನಿಧನ ಹೊಂದಿದನಂತರ ಬಡ ಜನರು ಅವರಮೇಲೆ ತೋರಿಸಿದ ಅಭಿಮಾನ, ಅವರಿಗೆ ಸಲ್ಲಿಸಿದಂತ ಗೌರವ ಅವರಿಗೆ ರಾಜ್ಯಕ್ಕೆ

ಮಾತ್ರವಲ್ಲ ಇಡಿ ರಾಷ್ಟ್ರಕ್ಕೆ ಕೊಟ್ಟಂಥ ಉಡುಗೊರೆ ಎಂದು ಹೇಳುತ್ತೇನೆ. ನಾನು ನಿನ್ನೆ ಕಲ್ಲಹಳ್ಳಿಗೆ ಹೋಗಿದ್ದೆ. ಈ ಹೊತ್ತು ಬೆಳಿಗ್ಗೆ ವಾಪಸ್ ಬಂದೆ. ಬಹುಶಃ ಯಾವ ಮುಖ್ಯಮಂತ್ರಿಗೂ ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಂಡ ನಂತರ ಈ ಸಮಾನೆಯಾದಂಥ ಗೌರವವನ್ನು ನಿಧನ ಹೊಂದಿದಮೇಲೆ ಈ ರಾಜ್ಯದಲ್ಲಿ ಪಡೆದಿರಲಿಲ್ಲವೆಂದು ನಾನು ತಿಳಿದುಕೊಂಡಿರುತ್ತೇನೆ. ಹೀಗಿರುವಾಗ ನಾನು ವೈಯಕ್ತಿಕವಾಗಿ ಒಂದು ವಿಚಾರವನ್ನು ಹೇಳಬೇಕಾಗಿದೆ. ನಾನು ಕಲ್ಲಹಳ್ಳಿಗೆ ಹೋಗಬೇಕೆಂದಿರುವಾಗ ನನ್ನ ತಾಯಿಯವರು ಅವರಿಗೆ ೬೧ ವರ್ಷ ವಯಸ್ಸಾಗಿದೆ. ಶ್ರೀಮಾನ್ ದೇವರಾಜ ಅರಸ್‌ರವರನ್ನು ನಾನು ಒಂದು ದಿವಸ ಊಟಕ್ಕೆ ನಮ್ಮ ಮನೆಗೆ ಕರೆಯ ಬೇಕೆಂದು ಇದ್ದೆ. ಕರೆಯಲು ಸಾಧ್ಯವಾಗಲಿಲ್ಲವಲ್ಲ. ಅಷ್ಟರಲ್ಲೇ ಅವರು ನಿಧನಹೊಂದಿದರಲ್ಲ. ಹೋಗಲಿ ಅವರ ಪಾರ್ಥೀವ ಶರೀರವನ್ನಾದರೂ ನೋಡಬೇಕೆಂದ ವ್ಯಥೆ ಪಟ್ಟದ್ದರಿಂದ ನಾನು ಕೂಡ ಅವರನ್ನು ಜೊತೆಯಲ್ಲಿಯೇ ಕಲ್ಲಹಳ್ಳಿಗೆ ಕರೆದುಕೊಂಡು ಹೋದೆ. ನಿಜವಾಗಿಯೂ ಹೇಳುತ್ತೇನೆ ಅಲ್ಲಿಗೆ ಅವರಿಗೆ ಗೌರವವನ್ನು ಸಲ್ಲಿಸಲು ಎಷ್ಟೊಂದು ಬಡಜನರು ಬಂದಿದ್ದರೆಂದರೆ ಹೇಳಲು ಅಸಾಧ್ಯ ಅಷ್ಟೊಂದು ಜನರು ಬಂದಿದ್ದರು. ಬಹಳ ದುಃಖದಿಂದ ಹೇಳುತ್ತೇನೆ ಮೊನ್ನೆ ರಾತ್ರಿ ನನ್ನ ಸಹೋದರರಾದ ಜಾರ್ಜ್‌ಫರ್ನಾಂಡೀಸ್, ಮತ್ತು ಲಾರೆನ್ಸ್ ಫರ್ನಾಂಡೀಸ್ ಕೂಡ ಮಧ್ಯರಾತ್ರಿಯವರೆಗೂ ಇದ್ದರು ಜಾರ್ಜ್‌ಫರ್ನಾಂಡೀಸ್ ಕೂಡ ಮಧ್ಯರಾತ್ರಿಯವರೆಗೂ ರಾಜಕೀಯ ವಿಚಾರವಾಗಿ ಮಾತನಾಡಿ ಮುಂದಿನ ಒಂದು ಆಲೋಚನೆಗೆ ಬಂದಿದ್ದರು. ನನ್ನ ಕುಟುಂಬದವರು ಮೂರು ಜನರು ಸೇರಿದಂಥ ವೇಳೆಯಲ್ಲಿ ಕೆಲವರ್ಷಗಳ ಹಿಂದೆ ನಾವು ಬೇರೆ ರೀತಿಯಲ್ಲಿ ಸಂಕಟಕ್ಕೆ ಒಳಪಟ್ಟಿದ್ದೆವು. ಶ್ರೀ ದೇವರಾಜ ಅರಸ್‌ರವರೇ ನಮ್ಮನ್ನು ಆ ಸಂಕಟಕ್ಕೆ ಒಳಪಡಿಸಿದ್ದರು ಎಂದು ನಾವು ತಿಳಿದುಕೊಂಡಿದ್ದೆವು. ಅವರು ಒಂದುವೇಳೆ ಆ ರೀತಿ ಮಾಡಿದ್ದರು, ಅಷ್ಟರಮಟ್ಟಿಗೆ ಮಾಡಲು ಅನಿವಾರ್ಯದಿಂದಾಗಿ ಎಂದು ನಮ್ಮ ಮನಸ್ಸಿಗೆ ಬಂದಿತು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅವರು ಯಾವಾಗಲೂ ಜನರಮೇಲೆ ದ್ವೇಷ ಅಭಿಪ್ರಾಯವನ್ನು ಇಟ್ಟುಕೊಂಡವರಲ್ಲ. ಜನರಿಗೆ ಕಾಟ ಕೊಡಬೇಕೆಂಬ ಸ್ವಭಾವ ಅವರಲ್ಲಿರಲಿಲ್ಲವೆಂದು ಅವರ ನಡತೆಯಿಂದ ಕಂಡುಕೊಂಡಿದ್ದೆವು. ಹೀಗಾಗಿ ನಮ್ಮ ಕುಟುಂಬದವರು ಅವರಮೇಲೆ ಅಪಾರವಾದ ಗೌರವವನ್ನು ಇಟ್ಟುಕೊಂಡಿದ್ದೆವು. ಕಳೆದು ೨-೩ ವರ್ಷಗಳಿಂದ ಅಷ್ಟೇ ಒಳ್ಳೆಯವರಾಗಿದ್ದರೂ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಉತ್ತರಭಾರತದಲ್ಲಿ ಮುಖ್ಯಮಂತ್ರಿಗಳು ಬರೆ ಘೋಷಣೆಗಳನ್ನು ಮಾತ್ರ ಮಾಡುತ್ತಾರೆಂದು ವಿರೋಧಪಕ್ಷದವರು ತಿಳಿದುಕೊಂಡಿರುವಂತೆ ಇವರು ಘೋಷಣೆ ಇಲ್ಲದೆ ತತ್ವಗಳನ್ನು ಕಾರ್ಯರೂಪಕ್ಕೆ ತಂದ ಒಬ್ಬ ಮಹಾನ್‌ವ್ಯಕ್ತಿ. ಸಮಾಜದ ಒಂದು ಹೊಸ ಪ್ರಗತಿಗೆ ಸೋಷಿಯಲ್ ಫಿಲಾಸಫಿಯನ್ನು ಕೈಗೊಂಡು ಕಾರ್ಯರೂಪಕ್ಕೆ ತಂದವರು ಎಂದರೆ ತಪ್ಪಾಗಲಾರದು. ಅವರು ನಿಧನ ಹೊಂದಿದಮೇಲೆ ಅವರ ಒಂದು ಸಿದ್ಧಾಂತವನ್ನು ಪಾಲಿಸಲು ನಾವು ಎಲ್ಲರೂ ಪ್ರಯತ್ನ ಪಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಅವರು ಈ ರಾಜ್ಯಕ್ಕೆ ಕೆಲವು ಮಾದರಿ ರೀತಿಯಲ್ಲಿ ಕೆಲಸಗಳನ್ನು ಮಾಡಿಬಿಟ್ಟು ಹೋಗಿದ್ದಾರೆ. ಅವರು ಹಿರಿಯ ಸದನದ ಸದಸ್ಯರಾಗಿದ್ದರು. ಅವರು ಪ್ರಥಮಬಾರಿಗೆ ವಿರೋಧಪಕ್ಷದ ನಾಯಕರಾಗಿದ್ದುಕೊಂಡು ಮುಖ್ಯಮಂತ್ರಿಯಾದರು. ಅವರು ಇಷ್ಟರವರೆಗೆ ಏಕೈಕ ಮುಖ್ಯಮಂತ್ರಿಯಾಗಿ, ವಿರೋಧಪಕ್ಷದ ನಾಯಕರೂ ಕೂಡ ಆಗಿದ್ದರು. ಕರ್ನಾಟಕ ರಾಜ್ಯದ ಚರಿತ್ರೆಯಲ್ಲಿ ಯಾರು ಇಂಥ ಒಂದು ದಾಖಲೆ ಇಟ್ಟಿಲ್ಲ. ನಾವು ತಿಳಿದುಕೊಂಡಹಾಗೆ ಪ್ರಜಾಪ್ರಭುತ್ವಕ್ಕೆ ಒಂದು ವಿಶೇಷವಾದ ಕಾಣಿಕೆಯಂತೆ ಇದ್ದರು. ಏತಕ್ಕೆಂದರೆ ಅಧಿಕಾರದಲ್ಲಿರುವಾಗ ಪ್ರಜಾಪ್ರಭುತ್ವದ ಪ್ರಗತಿಯ ತಳಹದಿ ವಿರೋಧಪಕ್ಷಗಳಲ್ಲಿ ಇರಬೇಕೆಂದು ಏನು ಒಂದು ಆಶೆಯನ್ನು ಇಟ್ಟುಕೊಂಡಿದ್ದರೂ, ಅಧಿಕಾರ ಬಿಟ್ಟು ಹೋದ ವೇಳೆಯೂ ಅದೇ ಆಶೆಯನ್ನು ಇಟ್ಟುಕೊಂಡಿದ್ದರು. ಈವತ್ತು ಆಡಳಿತ ಪಕ್ಷದಲ್ಲಿ ಇರಬಹುದು, ನಾಳೆ ಇನ್ನೊಂದು ಪಕ್ಷದಲ್ಲಿ ಇರಬಹುದು. ಆದರೆ ಈ ಒಂದು ಅಧಿಕಾರ ದಾಹ ಏನು ಇದೆ ಅದು ಯಾವಾಗಲೂ ಅಧಿಕಾರವಲ್ಲಿಯೇ ಓಡಬೇಕೆಂಬ ವಿಚಾರ ಪ್ರಜಾಪ್ರಭುತ್ವಕ್ಕೆ ಸಲ್ಲದು ಎನ್ನುವ ವಿಶೇಷ ದಾಖಲೆ ನಮ್ಮ ಮುಂದಿಟ್ಟಿದ್ದಾರೆ. ಅವರ ಒಂದು ಕೌಶಲ್ಯತೆಯನ್ನು ಅವರ ಒಂದು ಸರಳತೆಯನ್ನು. ಬಹುಶಃ ನಾವು ಎಲ್ಲರೂ ಕಲಿತುಕೊಳ್ಳಬೇಕಾದ್ದು ಬಹಳ ಮುಖ್ಯವೆಂದು ನಾನು ನಂಬಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರು ಅವರಿಗೆ ಸ್ಮಾರಕವಾಗಿ ಒಂದು ರೀಸರ್ಚ್ ಸೆಂಟರ್‌ನ್ನು ಮಾಡಬೇಕೆಂದು ಏನು ಅಭಿಪ್ರಾಯಪಟ್ಟಿದ್ದಾರೆ ಅದನ್ನು ನಾನು ಸಮರ್ಥಿಸುತ್ತೇನೆ. ಅದರ ಜೊತೆಗೆ ಕಾರ್ಯರೂಪಕ್ಕೆ ತರುವ ವಿಚಾರದಲ್ಲೂ ಒಂದು ಸಲಹೆಯನ್ನು ಮಾಡುತ್ತೇನೆ. ಶ್ರೀಮಾನ್ ದೇವರಾಜ ಅರಸ್‌ರವರು ಎಲ್ಲ ಪಕ್ಷಗಳಿಗೂ ಸೇರಿದವರಾಗಿದ್ದುದರಿಂದ ದೀನದಲಿತರು, ಹಿಂದುಳಿದವರು ಅವರನ್ನು ಮುಂದೆ ತರಲು ಯಾವ ಸಿದ್ಧಾಂತವನ್ನು ಅಳವಡಿಸಿ ಕೆಲಸವನ್ನು ಮಾಡುತ್ತಿದ್ದರು, ಅದೇರೀತಿ ಕೆಲಸಮಾಡಲು ಎಲ್ಲ ಪಕ್ಷದವರು ಅವರಲ್ಲಿ ಪ್ರತಿನಿಧಿಸುವಂತೆ

ಅನುಕಂಪವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀಮಾನ್ ಗಂಗಾಧರನ್‌ರವರು ಇನ್ನೂ ಕೆಲವು ಮುಖ್ಯವಾದ ಸಲಹೆಗಳನ್ನು ಇಟ್ಟಿದ್ದಾರೆ. ಅವುಗಳನ್ನೂ ಕೂಡ ಸಮರ್ಥಿಸಿ ಶ್ರೀಮಾನ್ ದೇವರಾಜ ಅರಸ್‌ರವರು ಈ ಒಂದು ರಾಜ್ಯದಲ್ಲಿಯೇ ಅಲ್ಲ ನಮ್ಮ ದೇಶದ, ನಮ್ಮ ಭಾರತದ ಚರಿತ್ರೆಯಲ್ಲಿ ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದ ಗಣ್ಯವ್ಯಕ್ತಿಗಳ ಪಂಕ್ತಿಯಲ್ಲಿ ಬರತಕ್ಕಂಥವರಾಗಿದ್ದಾರೆ. ದಿವಂಗತ ಮಾನ್ಯ ಕಾಮರಾಜನಾಡರ್ ಇದ್ದಹಾಗೆ ದೇವರಾಜ ಅರಸ್‌ರವರೂ ಕೂಡ ನ್ಯಾಷನಲ್ ಲೀಡರ್ ಆಗಿ ಬಂದರು. ಸ್ವಾತಂತ್ರ್ಯ ಸಿಕ್ಕಿದಮೇಲೆ ಈರೀತಿ ದಕ್ಷಿಣ ಭಾರತದಲ್ಲಿ ಇಡಿ ರಾಷ್ಟ್ರಮಟ್ಟದಲ್ಲಿ ಬೆಳೆದಂಥ ಕಾಮರಾಜರಂತೆ ನಾಯಕಮಟ್ಟಕ್ಕೆ ಬಂದವರು. ಮಾನ್ಯ ದೇವರಾಜ ಅರಸ್‌ರವರು ಪ್ರಧಾನ ಮಂತ್ರಿಯವರ ರಾಜಕೀಯ ಜೀವನದಲ್ಲಿಯೂ ಕೂಡ ವಿಶೇಷವಾಗಿ ಅವರವರ ಸಮಯಕ್ಕೆ ಅನುಗುಣವಾಗಿ ಪಾತ್ರವನ್ನು ವಹಿಸಿದಂಥವರು. ಅವರಿಗೆ ಇಲ್ಲಿ ಮಾತ್ರವಲ್ಲ ಅಲ್ಲಿಯೂ ಅಂದರೆ ರಾಷ್ಟ್ರಮುಖಂಡರಿಗೆ ಯಾವರೀತಿ ಗೌರವವನ್ನು ಸಲ್ಲಿಸಲು ಪೋಸ್ಟಲ್ ಸ್ಟಾಂಪ್‌ನ್ನು ಬಿಡುಗಡೆ ಮಾಡುತ್ತಾರೋ ಅದೇರೀತಿಯಲ್ಲಿ ತರಲು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರಬೇಕೆಂದು ಕೇಳಿಕೊಂಡು ಶ್ರೀಮಾನ್ ದೇವರಾಜ ಅರಸ್‌ರವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಕುಟುಂಬದವರಿಗೆ ಒದಗಿರತಕ್ಕಂಥ ಕಷ್ಟಗಳನ್ನು ನಿವಾರಿಸಿಕೊಳ್ಳಲು ಧೈರ್ಯಸಿಗಲೆಂದು ಹಾರೈಸಿ ಇಷ್ಟು ಮಾತನಾಡಲು ಸಮಯ ಕೊಟ್ಟಿದ್ದಕ್ಕೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲ ಚೆಲುವರಾಜ್ (ಹೆಗ್ಗಡದೇವನಕೋಟೆ) —ಮಾನ್ಯ ಅಧ್ಯಕ್ಷರೇ ಶ್ರೀಯುತ ದೇವರಾಜ ಅರಸ್‌ರವರ ನಿಧನದ ಬಗ್ಗೆ ತಂದಿರುವ ಸಂತಾಪ ಸೂಚನೆ ನಿರ್ಣಯಕ್ಕೆ ಬೆಂಬಲಿಸುತ್ತ ಒಂದೆರಡು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಶ್ರೀಮಾನ್ ದೇವರಾಜ ಅರಸ್‌ರವರ ವ್ಯಕ್ತಿತ್ವ ಇಡಿ ಕರ್ನಾಟಕಕ್ಕೆ ಮಾತ್ರವಲ್ಲ ಇಡಿ ದೇಶಕ್ಕೆ ಅವಶ್ಯತವಾಗಿತ್ತು. ಅವರು ಇತಿಹಾಸದಲ್ಲಿ ಬರತಕ್ಕಂಥ ಒಬ್ಬ ವ್ಯಕ್ತಿಗಳಾಗಿದ್ದರು. ನೆನ್ನೆ ದಿವಸ ಅವರ ನಿಧನದ ಸುದ್ದಿಯನ್ನು ತಿಳಿದು ಶ್ರದ್ಧಾಂಜಲಿಯನ್ನು ಅರ್ಪಿಸಲು ಬಂದಿದ್ದಂತ ಗಣ್ಯರನ್ನು ನೋಡಿದಾಗ ಅವರ ಅಪಾರವಾದ ಜನಪ್ರಿಯತೆ ಎಷ್ಟುಮಟ್ಟಿಗೆ ಇದ್ದಿತು ಎಂಬುದು ತಿಳಿಯುತ್ತದೆ. ದೇವರಾಜ ಅರಸ್‌ರವರು ಜನತೆಯ ಕಲ್ಯಾಣಕಾರ್ಯಕ್ಕಾಗಿ ಹಾಕಿಕೊಂಡಂತ ಕಾರ್ಯಕ್ರಮಗಳು ನಮ್ಮ ಜಿಲ್ಲೆಯಲ್ಲಿ ಸರ್ವಾಂಗವಾಗಿ ಪ್ರಗತಿಯನ್ನು ಹೊಂದಿತು. ಅವರ ಒಂದು ರಾಜಕೀಯ ವ್ಯಕ್ತಿತ್ವ ಮತ್ತು ರಾಜಕೀಯ ಚತುರತೆ ಹೇಗೆ ಇತ್ತೆಂದರೆ ನಮ್ಮ ಕಾಂಗ್ರೆಸ್ ಪಕ್ಷ ಸಂಪೂರ್ಣವಾಗಿ ನಾಶವಾಗಿ ಜನತಾ ಪಕ್ಷ ಪ್ರಜಾಪ್ರಭುತ್ವದಲ್ಲಿ ಜಯಗಳಿಸಿ ಅವರು ಆಡಳಿತವನ್ನು ನಡೆಸುತ್ತಿದ್ದಂಥ ಕಾಲದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ರಾಮಬಾಣವಾಗಿ ನಿಂತು ೧೯೭೮ನೇ ಇಸವಿ ಹಾಗೂ ಪುನಃ ೧೯೮೦ನೇ ಇಸವಿ ಪಾರ್ಲಿಮೆಂಟರಿ ಎಲೆಕ್ಷನ್ ಆದಾಗ ಮತ್ತೆ ಜಯಗಳಿಸಿ ಇಂದಿರಾಗಾಂಧಿಯವರ ನಾಯಕತ್ವ ಬರುವಂತೆ ಮಾಡಿದ ಮಹಾನ್‌ವ್ಯಕ್ತಿ. ಅವರು ಬಹಳ ಹಿಂದುಳಿದ ವರ್ಗಗಳಿಗೆ ಮಾಡಿದಂಥ ಉಪಕಾರ ಯಾರೂ ಮಾಡಿರಲಿಕ್ಕೆ ಇಲ್ಲ. ರಾಜಕೀಯದಲ್ಲಿ ಹಿಂದುಳಿದ ವರ್ಗಗಳನ್ನು ಮುಂದೆ ತರಲು ಯಾರು ಪ್ರಯತ್ನ ಮಾಡಿರಲಿಲ್ಲ. ಹಿಂದುಳಿದ ವರ್ಗದವರನ್ನು ಸಮರ್ಥ ರೀತಿಯಿಂದ ವಿಧಾನಸೌಧದ ಮೆಟ್ಟಿಲನ್ನು ಹತ್ತುವಂತೆ ಮಾಡಿದಂಥ ಮಹಾನ್ ವ್ಯಕ್ತಿ ಶ್ರೀ ದೇವರಾಜ ಅರಸ್‌ರವರು. ಅವರು ಬಹಳ ಸಮಾಜವಾದಿಗಳು. ಅವರ ಹುಟ್ಟೂರು ಕಲ್ಲಹಳ್ಳಿಯಲ್ಲಿರುವಾಗ ಮುಖ್ಯಮಂತ್ರಿಯಾಗಿದ್ದರೂ ಆರೀತಿ ವರ್ತಿಸುತ್ತಿರಲಿಲ್ಲ. ಒಬ್ಬ ಸಾಮಾನ್ಯ ವ್ಯಕ್ತಿಯಂತೆ ಎಲ್ಲರಲ್ಲೂ ಮಾತನಾಡುತ್ತಿದ್ದರು. ಹಾಗೆಯೇ ಲಿಂಗಾಯಿತರಲ್ಲೂ ಜಗಳ ಬಂದರೆ ಅವರೇ ಇತ್ಯರ್ಥ ಮಾಡುವ ಸರಳ ವ್ಯಕ್ತಿಗಳಾಗಿದ್ದರು. ಮಾನ್ಯ ಸದಸ್ಯರಾದ ಗಂಗಾಧರನ್‌ರವರು ವರುಣಾನಾಲೆಗೆ ಶ್ರೀಮಾನ್ ಡಿ. ದೇವರಾಜ ಅರಸ್ ನಾಲೆ ಎಂದು ಹೆಸರಿಡಬೇಕೆಂದು ಹೇಳಿದ್ದಾರೆ. ಜೀವನದಿ ಕಾವೇರಿ ವರುಣಾನಾಲೆಯನ್ನು ಮಾಡುವಾಗ ಎಂತಹ ಪ್ರಚಂಡ ಶಕ್ತಿ ಮುಂದ್ಯಾಗಿದ್ದ ಏನು ಬಂದರೂ ಶಕ್ತಿಯಿಂದ ನಿಂತು ಧೈರ್ಯದಿಂದ ವರುಣಾನಾಲೆಯನ್ನು ಮಾಡಿದ ಒಂದು ಕೀರ್ತಿ ಮಾನ್ಯ ಅರಸ್‌ರವರಿಗೆ ಸೇರಿದೆ. ಆದ್ದರಿಂದ ವರುಣಾನಾಲೆಗೆ 'ದೇವರಾಜ ಅರಸ್ ಕಾಲುವೆ' ಎಂದು ಹೆಸರಿಡಬೇಕೆಂದು ನಾನು ಕೂಡ ಇಚ್ಛೆಪಡುತ್ತೇನೆ. ಹಿಂದೆ ಮಾನ್ಯ ದೇವರಾಜ ಅರಸ್‌ರವರು ಏನು ಮಾಡಿದ್ದಾರೆ ಇನ್ನು ಮುಂದೆ ಈ ಸರ್ಕಾರ ಕೂಡ ಅದನ್ನೇ ಮುಂದುವರಿಸಿಕೊಂಡು ಹೋಗುತ್ತೇನೆಂದು ಮಾನ್ಯ ಗುಂಡೂರಾಯರು ಹೇಳಿದರು. ಅರಸ್‌ರವರು ನಮಗೆಲ್ಲಾ ಗುರು ಇದ್ದ ಹಾಗೆ ಇದ್ದರು. ಗುರು ಕಾಣಿಕೆ ನೆನಪಿಗಾಗಿ ಅವರು ಏನು ಮಾಡಬೇಕೆಂದು ದಿಟ್ಟಹೆಜ್ಜೆ ಇಟ್ಟಿದ್ದರು ಆ ಕಾರ್ಯಕ್ರಮಗಳನ್ನು ಚಾಚೂತಪ್ಪದೆ ನಾವೂ ಸಹ ಅವರ ಇಚ್ಛೆಯನ್ನು ನಡೆಸಿಕೊಂಡು ಹೋಗುತ್ತೇನೆಂದು ಈ ಸದನದ ಮುಂದೆ ಹೇಳಿದ್ದಾರೆ. ಮುಖ್ಯವಾಗಿ ನಾನು ಹೇಳುವುದೇನೆಂದರೆ ಮಾನ್ಯ ಅರಸ್

ರವರು ದೀನದಲಿತರಿಗೆ, ಹಿಂದುಳಿದವರ್ಗದವರಿಗೆ ಬಹುವಾಗಿ ಶ್ರಮಿಸಿರುವಾಗ ಅವರ ಹುಟ್ಟುದಿನವನ್ನು "ದೀನದಲಿತರ ದಿನಾಚರಣೆ"ಯನ್ನಾಗಿ ಘೋಷಣೆ ಮಾಡಬೇಕೆಂದು ಹೇಳುತ್ತೇನೆ. ದೇವರಾಜ ಅರಸ್‌ರವರ ಸಾವು ರಕ್ತಸಂಬಂಧಿಗಳಿಗೆ ಆಗುವ ನೋವಿಗಿಂತ ಹೆಚ್ಚಾಗಿ ದೀನದಲಿತರಿಗೆ ಮತ್ತು ಹಿಂದುಳಿದ ವರ್ಗಗಳಿಗೆ, ಎಲ್ಲಾ ಪಕ್ಷದವರಿಗೆ, ಕಲಾಪಿಥರಿಗೆ ಆಗಿದೆ, ಅವರನ್ನು ಸ್ಮರಿಸುವ ಜನ ಯಾರು ಇಲ್ಲ. ಎಷ್ಟೋ ಜನ ಅಧಿಕಾರಕ್ಕೆ ಬಂದು ಹೋಗಿದ್ದಾರೆ. ದೇವರಾಜ ಅರಸ್‌ರವರು ಭಾಷಣ ಮಾಡುತ್ತಾರೆ ಅಂದರೆ ಜನಗಳು ಎಷ್ಟೋ ಗಂಟೆಗಳ ಕಾಲ ಕಾಯುತ್ತಿದ್ದರು ಅವರ ಭಾಷಣ ಕೇಳಲು ಜನಗಳು ಸಂಯಮದಿಂದ ಕೇಳುತ್ತಾಕೊಳ್ಳುತ್ತಿದ್ದರು ಆ ಒಂದು ಶಕ್ತಿ ಅವರಲ್ಲಿತ್ತು. ಅವರ ವ್ಯಕ್ತಿತ್ವವು ಕೂಡ ಹಾಗೆಯೇ ಇತ್ತು. ಅವರನ್ನು ನಾವು ಕಳೆದುಕೊಂಡಿರುವುದು ಇವತ್ತಿನ ದಿವಸ ಏನೋ ಒಂದು ದೊಡ್ಡ ನಿಧಿಯನ್ನು ಕಳೆದುಕೊಂಡಿದ್ದೇವೆ ಎನ್ನುವ ಭಾವನೆ ಉಂಟಾಗಿದೆ. ದೇವರಾಜ ಅರಸ್‌ರವರ ಮಾದರಿ ಜೀವನ. ಅವರ ಶ್ರಮಜೀವನ, ಸಾಮಾಜಿಕ ಕ್ರಾಂತಿ ಮೆಚ್ಚತಕ್ಕದ್ದಾಗಿದೆ. ನಮ್ಮ ಭಾರತ ದೇಶದಲ್ಲಿ ಸಾವಿರಾರು ಜಾತಿಗಳಿವೆ. ಇಂತಹ ಒಂದು ಸಂಪ್ರದಾಯವನ್ನು ಇಟ್ಟುಕೊಂಡಿರುವ ಕಾಲದಲ್ಲಿ ಸಾಮಾಜಿಕ ನ್ಯಾಯವನ್ನು ರಾಜಕೀಯ ಪ್ರಜ್ಞೆಯನ್ನು ಎಲ್ಲಾ ವರ್ಗದವರಿಗೂ ಕಲ್ಪಿಸಿಕೊಟ್ಟ ಆದರ್ಶವ್ಯಕ್ತಿಯಾಗಿದ್ದರು. ಅವರ ಒಂದು ಸಾವಿನಿಂದ ಎಲ್ಲರಿಗೂ ನಷ್ಟವಾಗಿದೆ ಈ ಒಂದು ನಷ್ಟವನ್ನು ಯಾವರೀತಿ ಭರಿಸಬೇಕೆಂದು ಗೊತ್ತಾಗುತ್ತಿಲ್ಲ. ಅವರ ಏನೊಂದು ಧ್ಯೇಯ ಗುರಿ ಇತ್ತು ಅದನ್ನು ನಾವು ಮುಂದುವರಿಸಿಕೊಂಡರೆ ಒಳ್ಳೆಯದು. ಅವರ ಸಾವಿನಿಂದ ಉಂಟಾಗಿರುವ ದುಃಖವನ್ನು ಭರಿಸಲು ಅವರ ಕುಟುಂಬ ವರ್ಗದವರಿಗೆ ಭಗವಂತನು ಶಕ್ತಿಯನ್ನು ಕೊಡಲಿ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ (ಬಾಲ್ಕಿ).—ಮಾನ್ಯ ಅಧ್ಯಕ್ಷರೇ ಪ್ರಪಂಚದಲ್ಲಿ ಯಾವ ಮಾತು ನಿಶ್ಚಿತವಿಲ್ಲ, ಆದರೆ ಒಂದು ಮಾತು ನಿಶ್ಚಿತ, ಹುಟ್ಟಿದ ಮನುಷ್ಯ ಮೃತ್ಯುವಂತ. ಶ್ರೀಮಾನ್ ದೇವರಾಜ ಅರಸ್‌ರವರು ಇಂದು ನಮ್ಮನ್ನು ಅಗಲಿದ್ದಾರೆ. ಅವರು ಹೋದರು ಅವರು ಗಳಿಸಿರುವ ವ್ಯಕ್ತಿತ್ವ ಹೋಗುವುದಿಲ್ಲ ಯಾರೇ ವ್ಯಕ್ತಿತ್ವವನ್ನು ಸಂಪಾದನೆ ಮಾಡಬೇಕಾದರೆ ಅವರು ಮಾಡುವಂತಹ ಕಾರ್ಯದ ಮೇಲೆ ಬರುತ್ತದೆ. ಎಷ್ಟೋ ಜನ ಅಧಿಕಾರಕ್ಕೆ ಬಂದು ಹೋಗಿದ್ದಾರೆ ೩೦ ವರ್ಷಗಳಿಂದ ಯಾರು ಅಷ್ಟಾಗಿ ಕಾಣುತ್ತಿಲ್ಲ. ಎಷ್ಟೋ ವ್ಯಕ್ತಿಗಳು ಅಧಿಕಾರವನ್ನು ಹೊಂದಿದ್ದರು ಅಧಿಕಾರ ಹೋದವೆ ಕೆಲವರ ಹೆಸರು ಅಜರಾಮರವಾಗಿ ಇದೆ. ಅದೇರೀತಿ ಶ್ರೀಮಾನ್ ದೇವರಾಜ ಅರಸ್‌ರವರು ಅಧಿಕಾರ ಪಡೆದಿದ್ದರು ಜೊತೆಗೆ ವ್ಯಕ್ತಿತ್ವವನ್ನು ಪಡೆದಿದ್ದರು ಎನ್ನುವ ಮಾತು ನಮಗೆ ನೆನಪಿಗೆ ಬರುತ್ತದೆ. ಅವರ ವ್ಯಕ್ತಿತ್ವ ಕಾರ್ಯ, ಧ್ಯೇಯ, ಅವರ ಕಾರ್ಯನಿಷ್ಠೆ ಅವರು ಮಾಡಿರುವಂತಹ ಕೆಲಸಗಳಿಂದ ಬರುತ್ತದೆ. ಶ್ರೀ ಕೃಷ್ಣನು ಒಂದು ಮಾತು ಹೇಳಿದ್ದಾನೆ, "ಯಾವ ಮನುಷ್ಯ ಯುದ್ಧದಲ್ಲಿ ಸಾಯುತ್ತಾನೆ ಅವನಿಗೆ ಸ್ವರ್ಗ ಇದೆ ಎಂದು" ಹಾಗೆ ಶ್ರೀಮಾನ್ ಅರಸ್‌ರವರು ಕೊನೆಯವರೆಗೂ ವಿರೋಧಪಕ್ಷಗಳನ್ನು ಒಟ್ಟುಗೂಡಿಸುವುದರಲ್ಲಿ ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಹೋಗುವ ಉದ್ದೇಶದಿಂದ ಪ್ರಯತ್ನ ಮಾಡುತ್ತಿದ್ದರು. ಆ ಪ್ರಯತ್ನ ಮಾಡುತ್ತಿರುವಾಗ ಅವರಿಗೆ ಸಾವು ಬಂದಿರುವುದರಿಂದ ಅವರಿಗೆ ಸ್ವರ್ಗದ ಸೀಟನ್ನು ಕಾದಿರಿಸಲಾಗಿದೆ, ಎಂದು ನಾನು ಭಾವಿಸಿಕೊಂಡಿದ್ದೇನೆ. ನಾನು ಅವರಬಗ್ಗೆ ಅವರ ಆಡಳಿತದ ಬಗ್ಗೆ ಕಟು ಟೀಕೆ ಮಾಡಿದ್ದೇನೆ. ಅದು ಒಂದು ಕಡೆ. ಎರಡನೆಯದಾಗಿ ವಾಸ್ತವಿಕವಾಗಿ ಶ್ರೀಮಾನ್ ಅರಸ್‌ರವರ ಜೀವನ ನನಗೆ ತಿಳಿದಂತೆ ಕರ್ಮಯೋಗಿ ಇದ್ದಹಾಗೆ. ಅವರು ಸತತ ಸ್ವಾತಂತ್ರ್ಯಯೋಧರಾಗಿ ಆಗಿನಿಂದ ಇಂದಿನವರೆಗೆ ಒಂದು ವರ್ಗ ಸಂಘರ್ಷ ನಿರ್ಮಾಣ ಮಾಡಬೇಕು, ಆ ದಿಶೆಯಲ್ಲಿ ಸಮಾಜವಾದವನ್ನು ತರಬೇಕು, ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಟ್ಟು ಕೆಲಸ ಮಾಡುತ್ತಿದ್ದರು. ಇವತ್ತಿನದಿವಸ ಅವರ ಕಾರ್ಯವನ್ನು ನೋಡಿದರೆ ನನಗನಿಸುತ್ತದೆ ವಾಸ್ತವಿಕವಾಗಿ ಅವರು ಧೀರರು, ಶೂರರು ಸಮಾಜವಾದದ ವಿಚಾರವುಳ್ಳವರು. ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳವರು ಎಂದು ಸ್ಪಷ್ಟವಾಗಿ ಹೇಳುತ್ತಿದ್ದೇನೆ. 'ರಾಜ ಪುರುರವ ರಾಣಾಪ್ರತಾಪಸಿಂಗ್ ಬಂದಿತನಾದಾಗ, ರಾಣಾಪ್ರತಾಪನು ಪುರುರವನನ್ನು ಈಗ ನಿನ್ನನ್ನು ಯಾವರೀತಿ ಯಾವಪ್ರಕಾರ ಕಾಣಬೇಕೆಂದು ಕೇಳಿದಾಗ, ಪುರುರವ ನನ್ನನ್ನು ರಾಜನಂತೆ ಕಾಣು' ಎಂದು ಹೇಳಿದಹಾಗೆ ಮಾನ್ಯ ದೇವರಾಜ ಅರಸ್‌ರವರು ಸಾಮಾನ್ಯ ಸದಸ್ಯರಾಗಿ ಈ ಸಭೆಗೆ ಬಂದಾಗಲೂ, ಈ ಕಡೆ ಮುಖ್ಯಮಂತ್ರಿಯಾಗಿ ಬರುತ್ತಿದ್ದಾಗಲೂ ಆ ಕಡೆಯಿಂದ ೧೦ ಜನಗಳ ಜೊತೆ ಬರುತ್ತಿದ್ದಾಗಲೂ ಮಾತನಾಡುವ ದಾಟಿಯಲ್ಲಿ ನಮಗೆ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ. ಇವರನ್ನು ನೋಡಿದಾಗ ಪುರುರವನ ವ್ಯಕ್ತಿತ್ವ ನಮಗೆ ಗೊತ್ತಾ

ಗೊತ್ತಿತ್ತು. ಅದೇ ಪ್ರಕಾರ ಅಕ್ಬರ್ ಕಾಲಕ್ಕೆ ಚಿತ್ತೋಡನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ರಾಣಾ ಪ್ರತಾಪನಿಂದ ಸಾಧ್ಯವಾಗಲಿಲ್ಲ. ಆದರೂ ಅಕ್ಬರ್ ಎಷ್ಟೋ ಸಾರಿ ಹೇಳಿ ಕಳುಹಿಸಿದ. ಚಿತ್ತೋಡನ್ನು ಬಿಟ್ಟು ಕೊಟ್ಟರೆ–ಮೇವಾಡ, ಉದಯಪುರ, ಪೂನಾ ರಾಜಸ್ಥಾನ ಎಲ್ಲವನ್ನು ಕೊಡುತ್ತೇನೆಂದು ನೀನು ಮಾಂಡಲಿಕನಾಗಿ ಬಾ ಎಂದು ಹೇಳಿದ. ಅದಕ್ಕೆ ಪ್ರತಾಪಸಿಂಗ್‌ನು ನಾನು ಹಾಗೆ ಸತ್ತರೂ ಕೊಡ ಕೊಡುವುದಿಲ್ಲ—ಬರುವುದಿಲ್ಲವೆಂದು ಕಬೂಲ್ ಮಾಡಿ ಅಂದರೆ ಮಾಡಲಿಲ್ಲ. ಅತಿರಥ ಮಹಾರಥರು ರಾಜಪದವಿಗೋಸ್ಕರ ಶೂರರು, ವೀರರು, ಧೀರರು ಗೆದ್ದ ನಂತರ ಬಿದ್ದ ನಂತರ ಏನೇನೋ ಬದಲಾವಣೆಗಳನ್ನು ಮಾಡಿ ಅಧಿಕಾರಕ್ಕೆ ಬಂದರು. ಆದರೆ ಶ್ರೀಮಾನ್ ಅರಸ್‌ರವರು ಆ ರೀತಿ ವಿಚಾರ ಮಾಡಲಿಲ್ಲ. ಅವರು ಒಂದು ಧ್ಯೇಯವನ್ನಿಟ್ಟುಕೊಂಡು ಕಾರ್ಯವನ್ನು ಮಾಡಲು ಪ್ರಯತ್ನ ಮಾಡುತ್ತಿದ್ದರು. ಅವರಿಗೆ ರಾಷ್ಟ್ರ ಪ್ರಮುಖರ ಸ್ಥಾನ ಲಭಿಸಿತ್ತು. ಅವರ ಪ್ರಜಾಪ್ರಭುತ್ವದ ಬಗ್ಗೆ ಹೇಳಬೇಕಾದರೆ ಮಾನ್ಯ ಸಭಾಧ್ಯಕ್ಷರಿಗೆ ಗೊತ್ತು. ಮಾನ್ಯ ರಂಗನಾಥ್‌ರವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಎಲೆಕ್ಷನ್ ಕಮಿಟಿ ಆಯಿತು. ಆಗ ನಾನು ರಂಗನಾಥ್‌ರವರ ಕಡೆಗೆ ಅಭ್ಯರ್ಥಿಯಾಗಿದ್ದೆ, ಅದಕ್ಕೆ ವಿರೋಧವಾಗಿ ಅರ್ಥ ಸಚಿವರಾಗಿದ್ದ ಎಂ.ವೈ. ಘೋರ್ಪಡೆಯವರು ನಿಂತರು ಆಗ ಎಷ್ಟೋ ಗಲಾಟೆಗಳು ಆದವು. ಅರ್ಧ ಗಂಟೆಯ ನಂತರ ಖಂಡ್ರೆಯವರನ್ನು ಕರೆಯಿರಿ ಎಂದು ಅರಸ್‌ರವರು ನನ್ನನ್ನು ಕರೆಸಿಕೊಂಡರು, ನಾನು ಆಗ ಒಬ ಸಾಧಾರಣ ಕಾರ್ಯಕರ್ತ. ನನಗೆ ಹೇಳಿದರು ನೀವು ನಿಮ್ಮ ಅರ್ಜಿಯನ್ನು ವಾಪಸ್ಸು ತೆಗೆದು ಕೊಳ್ಳಿರಿ ಎಂದು ಹೇಳಿದರು, ನೀವು ವಾಪಸ್ಸು ತೆಗೆದುಕೊಂಡರೆ ಅಡ್ಮಿನಿಸ್ಟ್ರೇಷನ್ ದೃಷ್ಟಿಯಿಂದ ಒಳ್ಳೆಯದಾಗುತ್ತದೆಂದು ಹೇಳಿದರು. ನನಗೇನು ನಿಂತುಕೊಳ್ಳಬೇಕೆಂದು ಆಶೆ ಇಲ್ಲ ನಾನು ರಂಗನಾಥ್‌ರವರ ಪರವಾಗಿ ನಿಂತಿದ್ದೇನೆ, ನಾನು ವಾಪಸ್ಸು ತೆಗೆದುಕೊಳ್ಳುತ್ತೇನೆ ಆದರೆ ರಂಗನಾಥ್‌ರವರಿಗೆ ಒಂದು ಮಾತು ಹೇಳಿ ಎಂದಾಗ ಅವರು it is impossible ಎಂದು ಹೇಳಿದರು. ನಾನು ಸಾಧಾರಣ ಕಾರ್ಯಕರ್ತನಾಗಿ ನೀವು ಈ ರೀತಿ ಹೇಳಿದರೆ ಸರಿಯಾಗುವುದಿಲ್ಲ. ಒಂದೇ ಪಕ್ಷದ ಮುಖ್ಯಮಂತ್ರಿಯಾಗಿ ನೀವು ಕಾಂಗ್ರೆಸ್ ಅಧ್ಯಕ್ಷರನ್ನು ವಿರೋಧ ಮಾಡಿಕೊಂಡು ನೀವು ರಾಜ್ಯವಾಳುವುದಕ್ಕೆ ಸಾಧ್ಯವಿಲ್ಲ ಸ್ವಲ್ಪ ವಿಚಾರ ಮಾಡಿರಿ ಎಂದಾಗ ೨ ನಿಮಿಷ ಇದ್ದು Alright, Thank you ಎಂದು ಹೇಳಿದ್ದು ತಮಗೆ ಗೊತ್ತಿದೆ. ಅದೇಪ್ರಕಾರ ಸ್ವಲ್ಪ ದಿವಸಗಳ ನಂತರ ಮಾನ್ಯ ವೀರಪ್ಪ ಮೊಯಿಲಿಯವರಿಗೆ ಗೊತ್ತಿದೆ, ಆಗ ಅವರು ಡೆಪ್ಯುಟಿ ಮಿನಿಸ್ಟರ್ ಆಗಿದ್ದರು. ನಮಗೂ ಅರಸ್‌ರವರಿಗೂ ಅರ್ಧಗಂಟೆ ಕಾಲ ಸಮಾಜವಾದದ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವು ಸಮಾಜವಾದಿಗಳು ನೀವು ಸಮಾಜವಾದಿಗಳು ನೀವು ಏತಕ್ಕೆ ನಮಗೆ ಸಹಕಾರ ನೀಡುವುದಿಲ್ಲವೆಂದು ಕೇಳಿದರು, ಮಾತು ಬಂದಾಗ ಅವರು ನಮಗೆ ಕನ್ವಿನ್ಸ್ ಮಾಡಲಿಕ್ಕೆ ಆಗಲಿಲ್ಲ, ನಾನು ಅವರಿಗೆ ಕನ್ವಿನ್ಸ್ ಮಾಡಲಿಕ್ಕೆ ಆಗಲಿಲ್ಲ. ಆ ಪ್ರಕಾರ ನಾನು ಹೇಳಿದೆ ನಮ್ಮದು ರಯಲ್ಟಿ ಪ್ರಶ್ನೆ ಇದೆ ಇದರಿಂದ ತಮ್ಮ ಮತಗಳು ದೂರವಾಗುವುದಕ್ಕೆ ಸಾಧ್ಯವಿಲ್ಲ ಮತಗಳು ವ್ಯಕ್ತಿಗಳ ಮೇಲೆ ಹೋಗುತ್ತವೆ ಎಂದು ಹೇಳಿ ಹೊರಟುಬಂದೆ. ನಾನು ಈ ರೀತಿ ಮಾತನಾಡಿ ಬಂದಮೇಲೆ ಅರಸ್ ರವರಿಗೆ ವಿರೋಧವಾಗಿದ್ದಾರೆ ಇವರ ಮೇಲೆ ದೂರು ಕೊಟ್ಟರೆ ಸರಿಯಾಗುತ್ತದೆಂದು ತಿಳಿದು ನನ್ನ ಮೇಲೆ ಕೆಲವರು ದೊಡ್ಡ ಕಂಪ್ಲೈಂಟ್ ಬರೆದು ಕೊಟ್ಟಿದ್ದರು, ನಾನು ಸ್ವತಹ ನೋಡಿದ್ದೇನೆ ಅದರಲ್ಲಿ impartial enquiry be made ಎಂಬುದನ್ನು ನಾನು ಕಣ್ಣಿನಿಂದ ನೋಡಿದ್ದೇನೆ. ಅರಸ್‌ಗೆ ವಿರೋಧವಾಗಿದ್ದಾರೆಂದು ಅವರ ಕಂಪ್ಲೈಂಟ್ ಕೊಟ್ಟರೆ ಈ ರೀತಿ ಬರೆದಿದ್ದರು ಇದೇನು ಸಾಧಾರಣ ಮಾತಲ್ಲ. ಶ್ರೀಮಾನ್ ಸಂಜಯಗಾಂಧಿಯವರು ಭಾಲ್ಕಿಗೆ ಬಂದಿದ್ದಾಗ ಎಲ್ಲಾ ಸಮಾರಂಭಗಳು ಶ್ರೀಮಾನ್ ಗುಂಡೂರಾಯರ ಅಧ್ಯಕ್ಷತೆಯಲ್ಲಿ ನಡೆದಿತ್ತು. ನಾನು ಸುಗರ್‌ಫ್ಯಾಕ್ಟರಿಯ ಅಧ್ಯಕ್ಷನಾಗಿದ್ದಾಗ ಅರಸ್‌ರವರನ್ನು ನಾನು ಒಳಗಡೆ ಕರೆದುಕೊಂಡು ಹೋದೆ, ಬೇರೆಯಾರನ್ನು ಅಲ್ಲಿ ಒಳಗಡೆಗೆ ಬಿಡುತ್ತಿರಲಿಲ್ಲ ಅಲ್ಲಿ ಮಾಡಿರತಕ್ಕ ಕೆಲಸಕಾರ್ಯಗಳನ್ನು ನೋಡಿ ಅರಸ್‌ರವರು ಖಂಡ್ರೆಯವರೇ ನೀವು ಮಾಡಿರುವ ಕೆಲಸಗಳನ್ನು ಮೆಚ್ಚುತ್ತೇನೆಂದು ಹೇಳಿದರು' ನನಗೆ ಬಹಳ ಸಂತೋಷವಾಯಿತು. ನಾನು ಮಾಡಿರುವ ಕೆಲಸಕಾರ್ಯಗಳನ್ನು ನೋಡಿ ನಾನು ವಿರೋಧವಾಗಿದ್ದರು ನನಗೆ ಶಹಭಾಷಗಿರಿಯನ್ನು ಕೊಟ್ಟರು ಆ ಒಂದು ದಿಟ್ಟತನಕ್ಕೆ ನನಗೆ ಸಂತೋಷವಾಯಿತು. ಆ ಪ್ರಕಾರ ಶ್ರೀಮಾನ್ ಅರಸ್‌ರವರು ತನ್ನ ಕಾಲದಲ್ಲಿ ಪ್ರಜಾಪ್ರಭುತ್ವದಲ್ಲಿ ಎಷ್ಟೊಂದು ನಂಬಿಕೆ ಇಟ್ಟಿದ್ದರು ಎಂಬುದು ನೆನಪಿಗೆ ಬರುತ್ತದೆ. ರಾತ್ರಿ ೨ ಗಂಟೆಯ ನಂತರ ಅಂತಿಮ ಸಂಸ್ಕಾರವಾದ ಮೇಲೆ ನಾನು ಅವರ ಮನೆಗೆ ಹೋಗಿ ನೋಡಿದಾಗ, ಮಾನ್ಯ ಸದಸ್ಯರೊಬ್ಬರಾದ ಸುಶೀಲ ಚೆಲುವರಾಜ್‌ರವರು ಹೇಳಿದಹಾಗೆ ಹಿಂದಿನ ಕಾಲದಲ್ಲಿ ಇದ್ದಹಾಗೆ ೨ ಕುರ್ಚಿ, ೨ ಮೇಜುಗಳು ಇದ್ದವು ಏನು ಬದಲಾವಣೆಗಳು ಆಗಿರಲಿಲ್ಲ.

೩-೩೦ ಪಿ.ಎಂ.

ಇವರು ದೆಹಲಿಗೆ ಭೇಟಿ ಕೊಟ್ಟಾಗಲೂ ಸಹ ಒಂದು ಸಾಮಾನ್ಯ ಹಾಸಿಗೆ ಮೇಲೆ ಮಲಗುತ್ತಿದ್ದರು. ಇವರು ನಿಜವಾದಂಥ ಸಮಾಜವಾದಿಯಾಗಿದ್ದರು. ವರ್ಗಸಂಘರ್ಷವಾಗಬೇಕೆಂದು ಯಾನಾಗಲೂ ಇವರು ಹೇಳುತ್ತಿದ್ದರು ಈ ವಿಚಾರದಲ್ಲಿ ಮಾತ್ರ ಅವರಿಗೂ ನಮಗೂ ಮಾತಭೇದವಿತ್ತು. ಏಕೆಂದರೆ, ಒಂದುವೇಳೆ ವರ್ಗಸಂಘರ್ಷವಾದರೆ ಜಾತಿ ಸಂಘರ್ಷವಾಗುತ್ತದೆ. ಆ ರೀತಿಯಾದರೆ ಈ ದೇಶ ಉಳಿಯುವುದಿಲ್ಲ ಎಂದು ನಾವು ಅವರಿಗೆ ಹೇಳಿದರೂ ಸಹ ಅವರು ಮಾತ್ರ ಈ ದೇಶವನ್ನು ರಷ್ಯಾ ಮಾದರಿಯಲ್ಲಿ ಕಟ್ಟಬೇಕೆಂದು ಹೇಳುತ್ತಿದ್ದರು. ಮುಖ್ಯವಾಗಿ ಅವರ ಒಂದು ಧ್ಯೇಯ ಮತ್ತು ಧೋರಣೆಯಲ್ಲಿ ನಮಗೆ ಮತಭೇದವಿದ್ದ ಕಾರಣದಿಂದ ಅವರೂ ನಾವು ಜೊತೆಯಲ್ಲಿ ಕೂಡಲು ಸಾಧ್ಯವಾಗಲಿಲ್ಲ. ಇದನ್ನು ಬಿಟ್ಟರೆ ಬೇರೆ ಇನ್ನುಳಿದ ವಿಚಾರಗಳಲ್ಲಿ ಅವರ ಬಗ್ಗೆ ನನಗೆ ಸಂಪೂರ್ಣವಾದ ಗೌರವವಿದೆ. ಅವರು ಇಂದು ನಮ್ಮನ್ನು ಅಗಲಿ ಹೋದರೂ ಸಹ ಅವರ ಒಂದು ಆಚಾರವಿಚಾರಗಳು ಈ ಸದನದ ಮುಂದಿವೆ. ಆದಕಾರಣ ಅದನ್ನೆಲ್ಲಾ ಜಾರಿಗೆ ತರಲು ನಾವೆಲ್ಲರೂ ಪ್ರಯತ್ನ ಮಾಡೋಣ. ಮುಖ್ಯಮಂತ್ರಿಗಳು ಮಾತನಾಡುವಾಗ ಇವರು ನನಗೆ ಗುರುವಿನ ರೀತಿಯಲ್ಲಿದ್ದರು ಎಂದು ಹೇಳಿದರು. ಇವರ ಸ್ಟಾಚ್ಯೂ ಬಗ್ಗೆ ಕೂಡ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದರು, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇವರು ಯಾವಾಗಲೂ ಸಮಾಜವಾದದ ಬಗ್ಗೆ ಮತ್ತು ಬಡತನದಲ್ಲಿರುವವರನ್ನು ಮೇಲೆ ತರುವ ಬಗ್ಗೆ ಮಾತನಾಡುತ್ತಿದ್ದರು. ನಮ್ಮ ದೇಶದಲ್ಲಿ ಇವೊತ್ತು ಒಬ್ಬ ಮನುಷ್ಯನ ದಿನಗೂಲಿ ೩ ರೂಪಾಯಿಗಳಿದ್ದರೆ ಮತ್ತೊಬ್ಬನ ದಿನದ ಆದಾಯ ೩ ಕೋಟಿ ರೂ.ಗಳವರೆಗೂ ಇದೆ. ಇದು ಹೋಗಬೇಕೆಂಬುದೇ ಅವರ ಧ್ಯೇಯವಾಗಿತ್ತು. ಇದನ್ನು ಜಾರಿಗೆ ತರಲು ಮಾನ್ಯ ಗುಂಡೂರಾವ್ ಅವರು ಪ್ರಯತ್ನ ಮಾಡುತ್ತಾರೆಂದು ನಂಬಿ ನಾನು ಬೀದರ್ ಜಿಲ್ಲೆಯ ಜನರ ಪರವಾಗಿ ಹಾಗೂ ಈ ರಾಜ್ಯದ ಜನತೆಯ ಪರವಾಗಿ ದಿವಂಗತ ಶ್ರೀ ದೇವರಾಜ ಅರಸ್ ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಾನು ಅನೇಕ ಸಂದರ್ಭಗಳಲ್ಲಿ ಮಾತನಾಡಿದ್ದೇನೆ ಆದರೆ ಹಿಂದೆಂದೂ ನನ್ನ ಮನಸ್ಸು ಇಂದಿನಷ್ಟು ಜರ್ಜರಿತ ಪರಿಸ್ಥಿತಿಯಲ್ಲಿರಲಿಲ್ಲ. ನನಗೆ ಮಾನ್ಯ ದೇವರಾಜ ಅರಸ್ ಅವರ ಬಗ್ಗೆ ಮಾತನಾಡುವುದಕ್ಕೆ ಅಧಿಕಾರವಿದೆ ಎಂದು ಭಾವಿಸಿ ಮಾತನಾಡುತ್ತಿಲ್ಲ. ಆದರೆ ನನಗೆ ಅವರ ಜೊತೆಯಲ್ಲಿ ಇದ್ದಂಥ ಬಾಂಧವ್ಯದ ಹಿನ್ನೆಲೆಯಲ್ಲಿ, ಇಂತಹ ಒಂದು ಸಂದರ್ಭದಲ್ಲಿ ನಾನು ಜೀವಂತವಾಗಿದ್ದೂ ಸಹ ಅವರ ಬಗ್ಗೆ ನಾಲ್ಕು ಮಾತುಗಳನ್ನು ಹೇಳದೇ ಹೋದರೆ ಅದೊಂದು ಅಪಚಾರವಾದಿತೆಂಬ ಭಾವನೆಯಿಂದ ನಾಲ್ಕು ಮಾತಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ನನ್ನ ಗೆಳೆಯರಾದಂಥ ಶ್ರೀಮಾನ್ ಜೆ. ಎಚ್. ಪಟೇಲ್ ಅವರು ಹೇಳಿದಂತೆ ಇದು ಮಾತಿಗೆ ಮೀರಿದಂಥ ಒಂದು ಸಂದರ್ಭ ಏಕೆಂದರೆ, ನಾವು ಎಷ್ಟೇ ಪ್ರಯತ್ನಪಟ್ಟರೂ ಕೂಡ ಮಾತಿನ ಚೌಕಟ್ಟಿನಲ್ಲಿ ಶ್ರೀ ದೇವರಾಜ ಅರಸ್ ಅವರ ಧೀಮಂತ ವ್ಯಕ್ತಿತ್ವವನ್ನು ಚಿತ್ರಿಸುವುದಕ್ಕೆ ಸಾಧ್ಯವಿಲ್ಲ ನಾವು ಎಷ್ಟೇ ಪ್ರಯತ್ನ ಮಾಡಿದರೂ ನಮ್ಮ ಮನಸ್ಸಿನ ಭಾವನೆಗಳನ್ನು ಭಾಷೆಯ ಹಿಡಿತಕ್ಕೆ ಒಳಪಡಿಸಿ ಅದನ್ನು ತೋರ್ಪಡಿಸುವುದಕ್ಕೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಇದು ಮಾತಿಗೆ ಮೀರಿದ ಸಂದರ್ಭವಾದರೂ ಸಹ ನಮಗಿರುವಂತಹ ಮಾಧ್ಯಮ ಇದೊಂದೇ ಆದ ಕಾರಣ ಇದನ್ನೇ ಆಶ್ರಯಿಸಿ ಇವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕಾಗಿದೆ. ಈ ಸದನದಲ್ಲಿ ಅನೇಕ ಜನರ ಸ್ಥಾನಗಳು ಪಲ್ಲಟಗೊಂಡಿರಬಹುದು. ಆದರೆ ಈ ಸದನದ ಯಾವ ಸದಸ್ಯರ ಮನಸ್ಸಿನಲ್ಲಿಯೂ ಕೂಡ ಶ್ರೀ ದೇವರಾಜ ಅರಸ್ ಅವರ ವ್ಯಕ್ತಿತ್ವದ ಸ್ಥಾನ ಮಾತ್ರ ಪಲ್ಲಟವಾಗಿಲ್ಲ. ಯಾವ ಕಾಲದಲ್ಲಿಯೂ ಅದು ಚಿರಸ್ಥಾಯಿ. ಇಲ್ಲಿ ಯಾರು ಯಾವ ಪಕ್ಷಕ್ಕೇ ಸೇರಿರಲಿ, ಆದರೆ ಇವರ ಒಂದು ವ್ಯಕ್ತಿತ್ವ ಮಾತ್ರ ಎಲ್ಲರ ಮನಸ್ಸಿನಲ್ಲಿಯೂ ಅಚ್ಚಳಿಯದೆ ಉಳಿದಿದೆ ಎಂದರೆ ಅತಿಶಯೋಕ್ತಿಯಲ್ಲ. ಇದನ್ನು ಕೆಲವರಿಗೆ ಹೇಳುವುದಕ್ಕೆ ಬಂದಿರಬಹುದು, ಮತ್ತೆ ಕೆಲವರಿಗೆ ಹೇಳುವುದಕ್ಕೆ ಬಾರದಿರಬಹುದು. ಅದು ಬೇರೆ ವಿಚಾರ. ಆದರೆ ಇದೊಂದು ದೊಡ್ಡ ಸತ್ಯ. ಶ್ರೀಮಾನ್ ದೇವರಾಜ ಅರಸ್ ಅವರ ಬಹುಮುಖ ವ್ಯಕ್ತಿತ್ವ ಯಾವ ರೀತಿ ಇತ್ತು ಎಂಬುದು ನನಗೆ ಅವರ ಜೊತೆಯಲ್ಲಿ ಕೆಲಸ ಮಾಡಿದ ಒಂದು ಅನುಭವದಿಂದ ಗೊತ್ತಿದೆ. ೧೯೬೭ ರಿಂದ ೧೯೭೦ರ ವರೆಗೆ ನಾನು ಈ ಸದನದ ಸದಸ್ಯನಾಗಿದ್ದೆ. ಆ ಸಂದರ್ಭದ ನಂತರ ರಾಜಕೀಯದ ಒಂದು ವ್ಯತ್ಯಸ್ತದ ಪರಿಸ್ಥಿತಿಯಿಂದಾಗಿ ನಾನು ರಾಜಕೀಯದಿಂದ ದೂರವಿದ್ದಾಗ ತುಂಬಾ ಅನಿರೀಕ್ಷಿತವಾಗಿ ಇವರು ತಮ್ಮ ಒಬ್ಬ ಸ್ನೇಹಿತರ ಮೂಲಕ ನನ್ನನ್ನು ಕರೆಸಿಕೊಂಡು ತಮ್ಮ

ಜೊತೆಯಲ್ಲಿರುವುದಕ್ಕೆ ತಯಾರಿದ್ದೀಯಾ ಎಂದು ಕೇಳಿದರು. ಆಗ ನಾನು ಅವರಿಗೆ ಹೇಳಿದ್ದೇನೆಂದರೆ, ತಮಗೆ ನನ್ನ ಅಗತ್ಯವಿದ್ದರೆ ತಮ್ಮ ಜೊತೆಯಲ್ಲಿರುವುದಕ್ಕೆ ತಯಾರಿದ್ದೇನೆ ಎಂದು ; ಅನಂತರ ಅವರು ನನ್ನನ್ನು ಅವರ ರಾಜಕೀಯ ವ್ಯವಹಾರಗಳ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿದರು. ಆದರಿಂದ ಅವರಿಗೆ ಎಷ್ಟು ಸಹಾಯವಾಯಿತೋ ನನಗೆ ಗೊತ್ತಿಲ್ಲ. ಆದರೆ ವೈಯಕ್ತಿಕವಾಗಿ ನಾನು ಅವರ ಜೊತೆಯಲ್ಲಿದ್ದು ಕೆಲಸ ಮಾಡುವಂತಹ ಒಂದು ಭಾಗ್ಯ ನನಗೆ ಪ್ರಾಪ್ತವಾಯಿತು. ಈ ಹುದ್ದೆಯನ್ನು ನಾನು ಬಯಸಿದ್ದಲ್ಲ. ತನ್ನಷ್ಟಕ್ಕೆ ತಾನು ಪ್ರಾಪ್ತವಾಯಿತು. ಈ ಸಂದರ್ಭದಲ್ಲಿ ನನಗೆ ಜಟಿಲವಾದಂಥ ರಾಜಕೀಯದ ಅನೇಕ ಅನುಭವಗಳನ್ನು ತಿಳಿದುಕೊಳ್ಳುವಂತಹ ಅವಕಾಶ ಸಿಕ್ಕಿತು. ನಾನು ವಿಶ್ವವಿದ್ಯಾನಿಲಯದಲ್ಲಿ ರಾಜಕೀಯದ ಶಾಸ್ತ್ರವನ್ನು ಓದಿದ್ದರೂ ಕೂಡ ಅದು ನನಗೆ ಯಾವ ಕೆಲಸಕ್ಕೂ ಬಾರದ ವಿದ್ಯೆಯಾಗಿತ್ತು. ಆದರೆ ಶ್ರೀ ದೇವರಾಜ ಅರಸ್ ಅವರ ಹತ್ತಿರ ಇದ್ದುಕೊಂಡು ಅವರು ಕೆಲಸ ಮಾಡುವಂತಹ ರೀತಿಯನ್ನು ನೋಡಿದಾಗ ಅದೊಂದು ದೊಡ್ಡ ವಿದ್ಯಾರ್ಜನೆಯ ಕೆಲಸವಾಗಿ ಕಂಡಿತು. ಪ್ರತಿ ಹಂತದಲ್ಲಿಯೂ ಅವರು ಮತ್ತೊಬ್ಬರು ತಿಳಿದುಕೊಳ್ಳುವಂತಹ ಮತ್ತು ಮತ್ತೊಬ್ಬರಿಗೆ ಮಾರ್ಗದರ್ಶನ ನೀಡುವಂತಹ ರೀತಿಯಲ್ಲಿ ಕೆಲಸವನ್ನು ನಿರ್ವಹಿಸುತ್ತಿದ್ದರು. ಅವರು ಈ ರಾಜ್ಯಕ್ಕೆ ಒಂದು ಹೊಸ ದಿಕ್ಕನ್ನು ತೋರಿಸಿಕೊಟ್ಟರು. ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ದುರ್ಬಲವಾಗಿದ್ದ ಜನರನ್ನು ಮೇಲೆತ್ತುವುದಕ್ಕೆ ಸ್ಪಷ್ಟವಾದಂಥ ಅನೇಕ ಸೂತ್ರಗಳನ್ನು ರೂಪಿಸಿದರು. ಇದು ಎಂದೆಂದಿಗೂ ಚಿರಂತರ. ನಮ್ಮ ದೇಶದಲ್ಲಿ ಶೇಕಡಾ 50ರಷ್ಟು ಜನರು ಬಡತನದ ರೇಖೆಯಂತ ಕೆಳಮಟ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ಇಂತಹ ಜನರ ಜೀವನ ಮಟ್ಟವನ್ನು ಮೇಲಕ್ಕೆ ಎತ್ತಬೇಕೆಂಬ ಕಳಕಳಿ ಇವರಲ್ಲಿತ್ತು. ಈ ದಿಕ್ಕಿನಲ್ಲಿ ಶ್ರೀ ದೇವರಾಜ ಅರಸ್ ಅವರ ಒಂದು ಆಡಳಿತ ಇಡೀ ದೇಶಕ್ಕೇ ಮಾದರಿಯಾಗಿತ್ತು. ಶ್ರೀ ದೇವರಾಜ ಅರಸ್ ಅವರ ರೀತಿಯಲ್ಲಿಯೇ ಯೋಚನೆ ಮಾಡಿದಂಥ ಬಹಳ ಜನರು ತಾತ್ವಿಕವಾಗಿ ಇದ್ದಾರೆ. ರಾಜಕೀಯ ಮಟ್ಟದಲ್ಲಿ ಶ್ರೀ ದೇವರಾಜ ಅರಸ್ ಅವರಿಗಿಂತ ಹೆಚ್ಚಿನ ಯಶಸ್ಸನ್ನು ಸಂಪಾದಿಸಿದಂಥ ಜನರೂ ಸಹ ಇದ್ದಾರೆ. ಆದರೆ ತಾತ್ವಿಕವಾಗಿ ನಿಷ್ಠೆಯನ್ನಿಟ್ಟುಕೊಂಡು ಆಡಳಿತವನ್ನು ಯಶಸ್ವಿಯಾಗಿ ನಡೆಸಿದಂಥ ಭಾರತದ ಅಗ್ರಗಣ್ಯ ವ್ಯಕ್ತಿಗಳ ಪೈಕಿ ಶ್ರೀ ದೇವರಾಜ ಅರಸ್ ಅವರೂ ಒಬ್ಬರೆಂದರೆ ಅತಿಶಯೋಕ್ತಿಯಾಗಲಾರದು. ಇವರದ್ದು ನಿಜವಾದಂಥ ಸಾಧನೆಯಾಗಿತ್ತು. ಇವರದ್ದು ಬಹುಮುಖ ವ್ಯಕ್ತಿತ್ವವಾಗಿತ್ತು. ಅವರನ್ನು ಹತ್ತಿರದಿಂದ ನೋಡಿದವರಿಗೆ ಇದು ಗೊತ್ತು. ಇವರಲ್ಲಿ ಅನೇಕ ಒಳ್ಳೆಯ ಗುಣಗಳಿದ್ದವು. ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ಗುಣ ಇವರಲ್ಲಿತ್ತು. ಯಾವುದೇ ಒಂದು ಜಾಗಕ್ಕೆ ಹೋದಾಗ ಅಲ್ಲಿಯ ಜನರು ಯಾವ ಜಾತಿಯವರು, ಅವರು ಯಾವ ರೀತಿ ಅಡುಗೆ ಮಾಡುತ್ತಾರೆ, ಅವರಲ್ಲಿರುವ ಸದ್ಗುಣಗಳು ಯಾವುವು ಎಂಬುದನ್ನೆಲ್ಲಾ ಕೇಳಿ ತಿಳಿದುಕೊಳ್ಳುತ್ತಿದ್ದ ಜೊತೆಗೆ ಅವರು ಮಾಡಿಕೊಟ್ಟ ರಾಗಿಮುದ್ದೆ ಊಟದಲ್ಲೇ ತೃಪ್ತಿಪಟ್ಟುಕೊಳ್ಳುತ್ತಿದ್ದರು. ವಿಶೇಷವಾದಂಥ ಅಡುಗೆ ಬಗ್ಗೆ ಒಳ್ಳೆಯ ಜ್ಞಾನವಿದ್ದರೂ ಸಹ ಹೋದ ಕಡೆಗಳಲ್ಲಿ ಜನರು ಕೊಟ್ಟಿದ್ದನ್ನೇ ಊಟ ಮಾಡಿ ತೃಪ್ತಿಪಟ್ಟುಕೊಳ್ಳುವಂತಹ ವಿಚಿತ್ರವಾದಂಥ ಗುಣಗಳು ಇವರಲ್ಲಿತ್ತು. ಇವರನ್ನು ಒಂದು ಕೋನದಿಂದ ನೋಡಿದಾಗ ತಪ್ಪು ಕಾಣುತ್ತಿದ್ದರೂ ಸಹ ಎರಡು–ಮೂರು ಕೋನಗಳಿಂದ ನೋಡಿದಾಗ ಇವರ ಒಂದು ಸಮಗ್ರ ವ್ಯಕ್ತಿತ್ವ ಸ್ಪಷ್ಟವಾಗಿ ಕಾಣುತ್ತಿತ್ತು. ಇಂತಹ ಒಂದು ಧೀಮಂತ ವ್ಯಕ್ತಿತ್ವ ಇವರಲ್ಲಿತ್ತು. ಎಲ್ಲಕ್ಕಿಂತಲೂ ಅವರಲ್ಲಿ ಕಂಡ ದೊಡ್ಡ ಗುಣ, ನಿನ್ನೆ ಏನೇ ನಡೆದಿರಲಿ, ನಿನ್ನೆ ಒಬ್ಬ ವ್ಯಕ್ತಿ ಏನೇ ತಪ್ಪನ್ನು ಮಾಡಿರಲಿ, ನಿನ್ನೆಯ ಸಂದರ್ಭ ಏನೇ ಆಗಿರಲಿ, ಸಂದರ್ಭದಲ್ಲಿ ಏನು ಬೇಕಾದರೂ ಆಗಿರಲಿ, ಆದರೆ ಇವತ್ತು ಬೆಳಿಗ್ಗೆ ಎದ್ದಾಗ, ಅದೇ ವ್ಯಕ್ತಿ ಎದುರಿಗೆ ಬರಲಿ ಅಥವಾ ಅದೇ ಸನ್ನಿವೇಶ ಎದುರಿಗೆ ಬರಲಿ ಅದನ್ನು ಸಂಪೂರ್ಣವಾಗಿ ಪೂರ್ವಾಗ್ರಹ ರಹಿತವಾಗಿ ಹೊಸದಾಗಿ ನೋಡತಕ್ಕ ಒಂದು ಶಕ್ತಿ ಅವರ ವ್ಯಕ್ತಿತ್ವದ ಒಂದು ಅವಿಭಾಜ್ಯ ಅಂಗವಾಗಿತ್ತು. ಈ ಪ್ರತಿ ದಿವಸ ಅವರು ಮೈಗೆ ಮಾತ್ರ ಸ್ನಾನ ಮಾಡಿ ಶುಭ್ರವಾಗಿ ಹೊರಗೆ ಬರುತ್ತಿರಲಿಲ್ಲ ; ಅವರ ಮನಸ್ಸನ್ನೂ ಕೂಡಾ ಚೊಕ್ಕ ಮಾಡಿಕೊಂಡು, ನಿನ್ನೆ ದಿವಸ ಅವರಿಗೆ ಸಂಪೂರ್ಣವಾಗಿ ತಪ್ಪು ಕಲ್ಪನೆಯನ್ನು ಕೊಟ್ಟ ವ್ಯಕ್ತಿ ಎದುರಿಗೆ ಬಂದರೂ ಕೂಡಾ ಅವನನ್ನು ಹೊಸ ದೃಷ್ಟಿಯಿಂದಲೇ ಮತ್ತೆ ಅವನು ಹೇಳುತ್ತಿರುವುದು ಸತ್ಯವಿರಬಹುದೆಂದು ಕೇಳುತ್ತಿದ್ದರು. ಯಾರು ಏನೇ ಹೇಳಿದರೂ ಕೂಡಾ ಆತ ಸತ್ಯವನ್ನೇ ಹೇಳುತ್ತಿದ್ದಾನೆಂದು ನಂಬಿದ್ದು ಅವರ ವ್ಯಕ್ತಿತ್ವದ ಆಳದಲ್ಲಿ ಅಳವಡಿಸಿ ಹೋಗಿದ್ದಂತಹ ಒಂದು ಜಾಯಮಾನ ಅವರಲ್ಲಿ ಇತ್ತು. ಶೇಕ್ಸ್‌ಪಿಯರ್ ನಾಟಕದಲ್ಲಿನ ದುರಂತದಂತೆ ಇವರ ಪ್ರತಿಯೊಂದು ಹಂತದಲ್ಲೂ ಯಾರು ಏನೇ ಹೇಳಿದರೂ ಕೂಡ ನಂಬತಕ್ಕ ಗುಣವೇ ಎಷ್ಟೋ ಸಾರಿ ಅವರನ್ನು ನಾನಾ ರೀತಿಯ ಸಂಕಷ್ಟಗಳಿಗೆ ಅನಿರೀಕ್ಷಿತವಾದ ಆಘಾತಗಳಿಗೆ ಕಾರಣವಾಯಿತೆಂದು ನಾನು ಆತ್ಮೀಯವಾಗಿ ಬಲ್ಲೆ. ನನ್ನ ಅವರ

ಸಂಬಂಧವನ್ನು ನಾನು ವಿಶೇಷವಾಗಿ ಪ್ರಸ್ತಾಪ ಮಾಡುವುದು ಸಾಧ್ಯವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಅವರ ಕೆಲವು ನಿರ್ಧಾರಗಳಿಂದ, ನಾನು ಅದನ್ನು ಒಪ್ಪಿದೆ. ಅವರ ಜೊತೆಯಲ್ಲಿ ನಾನು ಕಟುವಾದ ರೀತಿಯಲ್ಲಿ ವಿಚಾರಗಳನು ಚರ್ಚೆ ಮಾಡಬೇಕಾಯಿತು. ಹಿಂದೂ ಕೂಡಾ ಅನೇಕ ಸಂದರ್ಭಗಳಲ್ಲಿ ನನಗಾಗಿ ಅಲ್ಲದಿದ್ದರೂ ಕೂಡಾ ನಮ್ಮ ಪಕ್ಷದಲ್ಲಿ ಇದ್ದಂತಹ ಇನ್ನಿತರೇ ಸ್ನೇಹಿತರ ಪರವಾಗಿ ಅವರ ಜೊತೆಯಲ್ಲಿ ಜಗಳವಾಡತಕ್ಕ ಒಂದು ಪಾತ್ರ ಯಾವಾಗಲೂ ನನಗೆ ಪ್ರಾಪ್ತವಾಗುತ್ತಿತ್ತು. ಆದರೆ ಕೆಲವು ಸಂದರ್ಭದಲ್ಲಿ ಎಷ್ಟೇ ಕಟುವಾಗಿ ವಿಚಾರಗಳನ್ನು ಅವರ ಹತ್ತಿರ ಪ್ರಸ್ತಾಪ ಮಾಡಿದರೂ, ಅವರು ನಾವು ಹೇಳಿದ ಒಂದು ಅಕ್ಷರವನ್ನೂ ಒಪ್ಪಿಕೊಳ್ಳದೇ ಇದ್ದರೂ ಕೂಡಾ ಎಂದೂ ಆತ್ಮೀಯತೆಗೆ ಮಾತ್ರ ಧಕ್ಕೆ ತರುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ಒಂದು ರೀತಿಯಲ್ಲಿ ಸರಿ–ತಪ್ಪುಗಳು, ತಪ್ಪು–ಒಪ್ಪುಗಳು, ಗುಣದೋಷಗಳು ಇವೆಲ್ಲವನ್ನೂ ಮೀರಿದಂತಹ ವ್ಯಕ್ತಿಯಾಗಿ ಅವರು ರಾರಾಜಿಸಿದ್ದರು. ಅವರು ಎಷ್ಟೇ ತಪ್ಪು ಮಾಡಿದರೂ ಕೂಡಾ, ಅಥವಾ ಅವರು ಮಾಡಿದ್ದು ಶುದ್ಧಾಂಗ ತಪ್ಪು ಎಂದು ನಮಗನ್ನಿಸಿದ್ದರೂ ಕೂಡಾ ಅವರ ಬಗ್ಗೆ ಮಮತೆಯನ್ನು ಕಳೆದುಕೊಳ್ಳುವುದಕ್ಕೆ ಆಗದೇ ಇದ್ದಂತಹ ವ್ಯಕ್ತಿತ್ವವನ್ನು ಅವರು ಸಂಪಾದನೆ ಮಾಡಿದ್ದರು. ನಾನು ಅವರಿಂದ ರಾಜಕೀಯವಾಗಿ ದೂರವಾಗಬೇಕೆಂದು ನಾನೆಂದೂ ಯೋಚನೆ ಮಾಡಿರಲಿಲ್ಲ. ಅಧ್ಯಕ್ಷರೆ, ಏನಾದರೂ ನಾನು ಅವರ ಜೊತೆಯಲ್ಲಿಯೇ ಇರಬೇಕೆನ್ನುವ ಛಲದಲ್ಲಿ ನಾನು ಇದ್ದೆ. ಆದರೆ ಈ ಒಂದು ಸಂದರ್ಭದಲ್ಲಿ, ಇತ್ತೀಚಿನ ರಾಜಕಾರಣದ ಒಂದು ಸಂದರ್ಭದಲ್ಲಿ ನಾನು ಸಾಕಷ್ಟು ರಾತ್ರಿ ಬೆಳಿಗ್ಗೆ ಅವರ ಜೊತೆಯಲ್ಲಿ ವಾದ ಮಾಡಿ ಕೊನೆಗೆ ಇಂತಹದ್ದೇ ನಿರ್ಧಾರ ತೆಗೆದುಕೊಳ್ಳುವುದಾದರೆ ನಾನು ನಿಮ್ಮ ಜೊತೆಯಲ್ಲಿ ಇರುವುದು ಸಾಧ್ಯವಿಲ್ಲವೆಂಬ ಮಾತನ್ನ ಪ್ರಪ್ರಥಮ ಬಾರಿಗೆ ಅವರ ಜೊತೆ ಆಡಿದೆ. ಹೀಗೆ ಆಡಬೇಕಾದರೆ ನನ್ನ ಮನಸ್ಸಿನ ಮೂಲೆಯಲ್ಲಿ ಒಂದು ಆಸೆ ಇತ್ತು. ಹಾಗಾದರೆ ಬೇರೆ ಯೋಚನೆ ಮಾಡೋಣ ಸ್ವಲ್ಪ ಇರಪ್ಪ ಎಂದು ಅವರು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಅವರ ಮನಸ್ಸಿನ ಛಲ, ಅವರ ಮನಸ್ಸಿನ ನಿಶ್ಚಲ ಹೇಗಿತ್ತೆಂದರೆ, ಇಲ್ಲಪ್ಪ ನಾನೇನೂ ನಿನ್ನ ಬಲಾತ್ಕಾರ ಮಾಡುವುದಿಲ್ಲ, ನೀನು ಪ್ರಾಮಾಣಿಕವಾಗಿ ಬೇರೆ ಅಭಿಪ್ರಾಯಪಟ್ಟರೆ ನಿನ್ನ ತೀರ್ಮಾನವನ್ನು ನೀನು ಮಾಡಬಹುದು ಎಂದು ಹೇಳಿದರು. ನಾನೆಂದೂ ಈ ಮಾತನ್ನು ಅವರಿಂದ ನಿರೀಕ್ಷೆ ಮಾಡಿರಲಿಲ್ಲ. ಅವರ ಛಲ ಮತ್ತು ನಿಶ್ಚಲದಿಂದ ಯಾರೂ ಕೂಡಾ ಅವರನ್ನು ಬೇರ್ಪಡಿಸಲು ಸಾಧ್ಯವಿರಲಿಲ್ಲ. ಮತ್ತು ಅವರು ಇಟ್ಟುಕೊಂಡಿದ್ದ ಗೊತ್ತುಗುರಿಗಳತ್ತ, ಅವರು ಕಲ್ಪನೆ ಇಟ್ಟುಕೊಂಡ ಕಡೆಗೆ ಅವರು ಹೋಗುವುದನ್ನು ಯಾರೂ ತಡೆಯುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ಅಂದು ಮನವರಿಕೆಯಾಯಿತು.

ಅಧ್ಯಕ್ಷರೆ ಅವರು ಸೇವೆ ಸಲ್ಲಿಸಿದ ಹಿನ್ನೆಲೆಯನ್ನು ನೋಡಿದರೆ, ಭಾರತ ದೇಶದ ರಾಜಕಾರಣವನ್ನು ನಾವು ಗಮನಿಸಿದರೆ, ನಿಜವಾಗಿಯೂ ಈ ದೇಶದಲ್ಲಿ ಇನ್ನೂ ಅವರ ಅವಶ್ಯಕತೆ ಬಹಳ ದೊಡ್ಡ ರೀತಿಯಲ್ಲಿ ಇತ್ತು. ಅವರ ನಿಧನ ನಿಜವಾದ ಅರ್ಥದಲ್ಲಿ ತುಂಬಲಾರದ ಒಂದು ಹಾನಿಯಾಗಿದೆ. ಏಕೆಂದರೆ ಏನ್ನೊಬ್ಬರು ತುಂಬಲಾರದಂತಹ ಕೆಲಸ ಕಾರ್ಯಗಳನ್ನೇ ಹುಡುಕಿಕೊಂಡು ಹೋಗಿ ಮಾಡುವಂತಹ ಛಲವನ್ನು ಮನಸ್ಸಿನಲ್ಲಿ ಸ್ಥಾಪನೆ ಮಾಡಿಕೊಂಡಿದ್ದವರು ಇವರು, ಈ ದೃಷ್ಟಿಯಿಂದ ತುಂಬಲಾರದ ಹಾನಿಯಾಗಿದೆ. ಈ ದೇಶದ ಯಾವುದೇ ಹಿರಿಯ ಸ್ಥಾನವನ್ನು ಕಲ್ಪನೆ ಮಾಡಿದರೂ ಕೂಡಾ, ಆ ಸ್ಥಾನವನ್ನು ಅವರು ಅಲಂಕರಿಸಿದ್ದರೆ ಆ ಸ್ಥಾನಕ್ಕೆ ಗೌರವ ಬರುತ್ತಿತ್ತೇ ಹೊರತು ಶ್ರೀಮಾನ್ ದೇವರಾಜ ಅರಸ್ ಅವರು ಆ ಸ್ಥಾನವನ್ನು ಅಲಂಕರಿಸಿ ದೊಡ್ಡವರಾಗಬೇಕಾದ್ದು ಏನೂ ಇರಲಿಲ್ಲ. ಇದಕ್ಕೆ ಸಾಕ್ಷಿ, ನಿನ್ನೆ ಮೊನ್ನೆಯ ದಿವಸ ಜನ ಪ್ರವಾಹ ಈ ರಾಜ್ಯದಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು, ಬಹುಶಃ ಸಾರ್ವಜನಿಕ ಜೀವನದಲ್ಲಿ ಇರುವಂತಹ ಯಾವುದೇ ವ್ಯಕ್ತಿ ಅವರು ಎಷ್ಟೇ ಸ್ಥಾನಮಾನಗಳನ್ನು ಪಡೆದುಕೊಂಡಿರಲಿ, ನಿನ್ನೆ ಮೊನ್ನೆ ಶ್ರೀಮಾನ್ ದೇವರಾಜ್ ಅವರಿಗೆ ಸಿಕ್ಕಿದ್ದಂತ ಪ್ರೇಮ ಯಾರಿಗೂ ಜೀವನದಲ್ಲಿ ಸಿಕ್ಕುವುದು ಸಾಧ್ಯವಿಲ್ಲ. ಆ ದೃಷ್ಟಿಯಿಂದ ಅವರ ಜೀವನ ಒಂದು ಪರಿಣಾಮಕಾರಿ ಜೀವನ ಆಗಿತ್ತು. ಅದು ಒಂದು ದೊಡ್ಡ ಯಶಸ್ಸು. ಅದು ಚಿರಂತನವಾಗಿ ನಮ್ಮೆಲ್ಲರಿಗೂ ಕೂಡಾ ದಾರಿದೀಪವಾಗಿ ಸ್ಫೂರ್ತಿ ರೂಪಕವಾಗಿ ಇರುವಂತೆ ಒಂದು ಚೇತನವಾಗಿತ್ತು ಎಂದು ಹೇಳಿದರೆ ಬಹುಶಃ ತಮ್ಮೆಲ್ಲರ ಭಾವನೆಯಲ್ಲಿ ನಾನು ಧ್ವನಿಗೂಡಿಸಿದಂತಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು, ಅವರ ಹೆಸರನ್ನು ಚಿರಸ್ಥಾಯಿಗೊಳಿಸುವುದಕ್ಕೆ, ನಮ್ಮ ಜೀವನದಲ್ಲಿ ಅವರಿಂದ ಸ್ಫೂರ್ತಿ ಪಡೆದು ಮುನ್ನಡೆಯಲ್ಲಿ ನೆನಪು ಇಟ್ಟುಕೊಳ್ಳುವುದಕ್ಕೆ ಏನು ಕಾರ್ಯಕ್ರಮಗಳನ್ನು ಪ್ರಕಟಿಸಿದ್ದಾರೆ, ಅದನ್ನೂ ಕೂಡಾ ಸ್ವಾಗತಿಸಿ, ಮತ್ತೊಮ್ಮೆ ಶ್ರೀಮಾನ್ ದೇವರಾಜ ಅರಸ್‌ರವರಿಗೆ ಭಗವಂತನು ಚಿರ ಶಾಂತಿಕೊಡಲಿ ಎಂದು

ಪ್ರಾರ್ಥಿಸಿ, ಅನೇಕ ಅಘಾತಗಳಿಂದ ನೊಂದಿರತಕ್ಕ ಅವರ ಕುಟುಂಬದವರಿಗೆ ಸಂಕಷ್ಟ ಭರಿಸಲು ಶಕ್ತಿ ಕೊಡಲಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಅಧ್ಯಕ್ಷರೇ, ದಿವಂಗತ ದೇವರಾಜ ಅರಸ್‌ರವರು ಸಂತಾಪ ಸೂಚಕ ನಿರ್ಣಯವನ್ನು ಈ ಸಭೆಯ ಮುಂದು ತಾವು ಮತ್ತು ಸಭಾ ನಾಯಕರು ಏನು ಮಂಡನೆ ಮಾಡಿದ್ದೀರಿ, ಈ ಒಂದು ಸನ್ನಿವೇಶದಲ್ಲಿ ನಾನೂ ಕೂಡಾ ಒಂದೆರಡು ಮಾತುಗಳನ್ನು ಆಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತೇನೆ. ಈ ಸದನ ಇವತ್ತು ಕಳಾಹೀನವಾಗಿದೆ ಎಂದರೆ ತಪ್ಪಾಗಲಾರದು. ನಾಲ್ಕು ದಶಕಗಳಿಂದ ಈ ಸದನದಲ್ಲಿ ಸೇವೆ ಸಲ್ಲಿಸಿದಂತಹ ಒಬ್ಬ ಹಿರಿಯ ವ್ಯಕ್ತಿ ಇವತ್ತು ನಮ್ಮನ್ನು ಬಿಟ್ಟು ಅಗಲಿದ್ದಾರೆ. ಅತ್ಯಂತ ಸರಳನಾದ ಒಂದು ಕುಟುಂಬದಲ್ಲಿ ಹುಟ್ಟಿದ ವ್ಯಕ್ತಿ, ರೈತಾಪಿ ಕುಟುಂಬದಲ್ಲಿ ಹುಟ್ಟಿದ ಒಬ್ಬ ವ್ಯಕ್ತಿ. ರಾಷ್ಟ್ರದ ರಾಜಕಾರಣದಲ್ಲಿ ತನ್ನದೇ ಆದ ಒಂದು ಸ್ಥಾನವನ್ನು ಬಿಟ್ಟು ಹೋಗಿದ್ದಾರೆ. ಅವರು ನಾನಾ ಮುಖವಾದ ಸೇವೆಯನ್ನು ಸಲ್ಲಿಸಿದ್ದಾರೆ. ಹೆಚ್ಚು ಕರ್ನಾಟಕದಲ್ಲಿ ಅವರ ಸೇವೆ ಸೀಮಿತವಾಗಿತ್ತು. ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಿದರೆ ಉತ್ಪ್ರೇಕ್ಷೆಯಾಗಲಾರದು. ಒಬ್ಬ ನಾಯಕರಿಗೆ ಇರಬೇಕಾದ ಎಲ್ಲಾ ಗುಣಗಳು ಇದ್ದವು ಎಂದರೆ ತಪ್ಪಾಗಲಾರದು. ಅವರು ಮುಖ್ಯ ಮಂತ್ರಿಯಾಗಿ ಕೆಲಸ ನಿರ್ವಹಣೆ ಮಾಡತಕ್ಕ ಕಾಲದಲ್ಲಿ ಕೆಲವು ಸನ್ನಿವೇಶಗಳು ಆಕಸ್ಮಿಕವಾಗಿ ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಾನು ವಿರೋಧ ಪಕ್ಷದಲ್ಲಿ ನನ್ನ ಪಾತ್ರ ನಿರ್ವಹಣೆ ಮಾಡುವ ಕಾಲ ಒಂದು ಇತ್ತು. ಅಂದು ನಡೆದ ಘಟನೆಗಳನ್ನು ಸ್ಮರಿಸಿಕೊಳ್ಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಯಾವುದೇ ವಿಷಯದ ಬಗ್ಗೆ ಅಧ್ಯಯನ ಮಾಡಿಕೊಂಡು ಬರುವ ಪರಿಪಾಠ ಅವರಲ್ಲಿತ್ತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕದ ರಾಜಕಾರಣದಲ್ಲಿ ರಾಜಕೀಯ ಗುತ್ತಿಗೆಯನ್ನು ಹಿಡಿದಂತಹ ಕೆಲವು ಶಕ್ತಿಗಳನ್ನು ಬಂಧಿಸತಕ್ಕಂತಹದ್ದರಲ್ಲಿ ಹೇಳುವುದಾದರೆ, ೧೯೬೯ರ ಕಾಂಗ್ರೆಸ್ ವಿಭಜನೆ ಅವರಿಗೆ ಒಂದು ಚೈತನ್ಯ ತಂದುಕೊಟ್ಟಿದೆಯೆಂದು ಹೇಳಿದರೆ ತಪ್ಪಾಗಲಾರದು. ಅದನ್ನು ಯೋಗ್ಯ ರೀತಿಯಲ್ಲಿ ಉಪಯೋಗ ಮಾಡಿಕೊಂಡರು ಎಂದು ಹೇಳಿದರೆ, ಅವರ ರಾಜಕೀಯ ಚಾಣಾಕ್ಷತನವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಒಬ್ಬ ತುಂಬ ಚಿಂತನೆಯನ್ನು ಮಾಡುತ್ತಿದ್ದಂತಹ ವ್ಯಕ್ತಿ. ಅವರೂ ನಾನೂ ರಾಜಕೀಯವಾಗಿ ಸ್ನೇಹಿತರೇ ಹೊರತಾಗಿ ವ್ಯಕ್ತಿಸಹ ಸ್ನೇಹಿತರಲ್ಲ. ಒಂದು ಮಾತನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ರಾಷ್ಟ್ರದಲ್ಲಿ ಸಾಮಾಜಿಕ ನ್ಯಾಯವನ್ನು ದೊರಕಿಸಬೇಕಾದರೆ ರಾಜಕೀಯವಾಗಿ ಶೋಷಣೆಗೆ ಒಳಪಟ್ಟ ವರ್ಗಕ್ಕೆ ಹೋಗಬೇಕು ಎನ್ನುವ ದೃಷ್ಟಿ ಅವರಲ್ಲಿ ಇತ್ತು ಎಂಬುದನ್ನು ತಿಳಿದುಕೊಳ್ಳಬೇಕು. ಆ ದಿಕ್ಕಿನಲ್ಲಿ ಅವರು ಕೆಲಸ ಮಾಡಿದರು. ಸಾಮಾಜಿಕ ನ್ಯಾಯವನ್ನು ದೊರಕಿಸಬೇಕಾದರೆ ರಾಜಕೀಯವಾಗಿ ಶಕ್ತಿ ಬೇಕು. ಅದನ್ನು ಹಂಚಿ ವಿತರಣೆ ಮಾಡಬೇಕು ಎನ್ನತಕ್ಕ ಪ್ರಾಮಾಣಿಕ ಚಿಂತನೆಯನ್ನು ಅವರು ಸದಾ ಇಟ್ಟು ಆ ರೀತಿ ಕೆಲಸ ಮಾಡಿದರು. ಅದರಿಂದ ಮಾನ್ಯ ಕಕ್ಕಿಲಾಯ ಅವರು ಹೇಳಿದ ಹಾಗೆ ಈ ಸದನದ ಸ್ವರೂಪವೇ ಬದಲಾಯಿತು. ಇದನ್ನು ಒಪ್ಪಿಕೊಳ್ಳುತ್ತೇನೆ. ನಾನು ಎಲ್ಲಾ ವಿಷಯದಲ್ಲೂ ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆಂದು ಹೇಳುವುದಕ್ಕೆ ಸಿದ್ಧನಿಲ್ಲ. ನನಗೂ ಅವರಿಗೂ ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಸಾಕಷ್ಟು ಇತ್ತು. ಆದರೆ ಕರ್ನಾಟಕದಲ್ಲಿ ರಾಜಕೀಯವಾಗಿ ಒಂದು ಹೊಸ ತಿರುವನ್ನು ಕೊಡುವುದರಲ್ಲಿ ಅವರು ೧೯೬೯ರ ಕಾಂಗ್ರೆಸ್ ವಿಭಜನೆ ಆದಮೇಲೆ ಯಶಸ್ವಿಯಾದರು. ಇವತ್ತು ಈ ರಾಜ್ಯದಲ್ಲಿ ಹಿಂದುಳಿದ ವರ್ಗಗಳವರ ಬಗ್ಗೆ ಹಾಗೂ ದುರ್ಬಲ ವರ್ಗಗಳವರ ಬಗ್ಗೆ ಅವರಿಗೆ ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡತಕ್ಕಂಥದಕ್ಕೆ ಹಲವಾರು ಕಾರ್ಯಕ್ರಮಗಳು ಏನು ನಡೆದಿವೆ ಅದಕ್ಕೆ ಪೂರ್ವಭಾವಿಯಾಗಿ ಆ ಒಂದು ಪರಿಸರವನ್ನು ನಿರ್ಮಾಣ ಮಾಡುವುದಕ್ಕೆ ೧೯೭೦ರಲ್ಲಿ ಅವರು ಪ್ರಯತ್ನ ಮಾಡಿದರು ಹಾಗೂ ಅವರು ಅದರಲ್ಲಿ ಯಶಸ್ವಿಯಾದರು. ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಈಗಲೇ ಮಾತನಾಡುತ್ತಿದ್ದಂತಹ ಮಾನ್ಯ ಗೆಳೆಯರಾದ ಶ್ರೀ ಜೆ. ಹೆಚ್. ಪಟೇಲ್‌ರವರು ಬಿಹಾರದಲ್ಲಿ ಮಾನ್ಯ ಕರ್ಪೂರಿ ಠಾಕೂರ್‌ರವರು ಈ ಬಗ್ಗೆ ಕೆಲವು ಬದಲಾವಣೆಗಳನ್ನು ತರುವುದಕ್ಕೆ ಪ್ರಯತ್ನ ಮಾಡಿ ವಿಫಲರಾದರು ಎಂದು ಹೇಳಿದರು. ನಾನೂ ಹೇಳುತ್ತೇನೆ, ಈ ರಾಜ್ಯದಲ್ಲಿ ಮಾನ್ಯ ದೇವರಾಜ ಅರಸ್‌ರವರು ಈ ವಿಚಾರದಲ್ಲಿ ವಿಫಲರಾಗಲಿಲ್ಲ. ಈ ಕರ್ನಾಟಕ ರಾಜ್ಯದಲ್ಲಿ ಅವರು ಈ ವಿಚಾರದಲ್ಲಿ ವಿಫಲರಾಗುವುದಕ್ಕೆ ಏತಕ್ಕೆ ಅವಕಾಶವಾಗಲಿಲ್ಲ ಎಂದರೆ ೧೯೭೦ರಲ್ಲಿ ಆ ಒಂದು ಪರಿಸರವನ್ನು ನಿರ್ಮಾಣ ಮಾಡತಕ್ಕಂಥದರಲ್ಲಿ ದೂರದೃಷ್ಟಿಯ ರಾಜಕಾರಣವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸಮಾಡಿದರು. ನಾನು ಈ ವಿಚಾರವನ್ನು ಹೆಚ್ಚು ಅವಲಂಭಿಸಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ತಮ್ಮ

ಜೀವನದಲ್ಲಿ ರಾಜಕೀಯವಾಗಿ ಹಲವಾರು ಪ್ರಯೋಗಗಳನ್ನು ಮಾಡಿದರು. ಅವರು ಕೆಲವು ಪ್ರಯೋಗಗಳಲ್ಲಿ ಯಶಸ್ವಿಯಾಗಿದ್ದಾರೆ, ಇನ್ನು ಕೆಲವು ಪ್ರಯೋಗಗಳಲ್ಲಿ ಅವರು ಸಫಲತೆಯನ್ನು ಕಾಣಲಿಲ್ಲ. ಅವರ ೧೯೭೭ರ ರಾಜಕೀಯ ಪ್ರಯೋಗದಲ್ಲಿ ಅವರು ಒಂದು ಘಟನೆಯಲ್ಲಿ ರಾಜಕೀಯ ದುರಂತಕ್ಕೆ ಸಿಕ್ಕಿದರು. ಅಲ್ಲಿಂದ ಅವರು ರಾಷ್ಟ್ರ ಮಟ್ಟದ ರಾಜಕಾರಣಕ್ಕೆ ಕೈಹಾಕಿದರು. ಈ ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ಇದ್ದಂತಹ ಗೊಂದಲಮಯ ವಾತಾವರಣವನ್ನು ಅವರು ಅರಿತುಕೊಂಡಿದ್ದರೂ ಕೂಡ 'ಆ ಕತ್ತಲೆಯಲ್ಲೂ ನಾನೂ ಬೆಳಕನ್ನು ಕಾಣುತ್ತೇವೆ' ಎಂದು ಅವರು ಆ ದಿಶೆಯಲ್ಲಿ ಪ್ರಯತ್ನ ಮಾಡಿದರು. ಆದರೆ ಅವರು ಅದರಲ್ಲಿ ಯಶಸ್ಸನ್ನು ಕಾಣಲಿಲ್ಲ. ಅವರ ಜೀವನದ ನಾನಾ ಮುಖಗಳಲ್ಲಿ ಇದೂ ಒಂದು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅದೇನೇ ಇರಲಿ, ಇಷ್ಟೊಂದು ಸುದೀರ್ಘವಾದ ಸೇವೆಯನ್ನು ಈ ರಾಜ್ಯಕ್ಕೆ ಸಲ್ಲಿಸತಕ್ಕಂಥ ಪುಣ್ಯ ಅವರ ಪಾಲಿಗೆ ಇತ್ತು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಬಹುಶಃ ಈ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಂತಹ ಮಹಾನಾಯಕರು ಈ ರಾಜ್ಯದಲ್ಲಿ ಹಾಗೂ ರಾಷ್ಟ್ರದಲ್ಲಿ ಇದ್ದಾರೆ. ಆದರೆ ಈ ಸದನದಲ್ಲಿ ೪ ದಶಕಗಳ ಕಾಲ ಸೇವೆ ಸಲ್ಲಿಸತಕ್ಕಂಥ ಪುಣ್ಯ ಅದು ಅವರ ಪಾಲಿಗೆ ಸೇರಿದ್ದೇ ಹೊರತು ನಾವ್ಯಾರೂ ಅದನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾವು ಯೋಚನೆ ಮಾಡುವುದಕ್ಕೂ ಸಾಧ್ಯವಿಲ್ಲ. ಕೊನೆಯದಾಗಿ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ, ಈ ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಎಣಿಸುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ಸಮಸ್ಯೆಗಳ ಒಂದು ಚಿತ್ರ ನಮ್ಮ ಕಣ್ಣ ಮುಂದೆ ಇದೆ. ಈ ಬಗ್ಗೆ ನಾವೆಲ್ಲಾ ರಾಜಕೀಯವಾಗಿ ಯೋಚನೆ ಮಾಡತಕ್ಕಂಥ ಕಾಲ ಇದಾಗಿದೆ. ಈ ಸಮಾಜದಲ್ಲಿರತಕ್ಕಂಥ ಹಲವಾರು ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ದಿಶೆಯಲ್ಲಿ ಅವರು ಹಾಕಿಕೊಟ್ಟಿರತಕ್ಕಂಥ ಕಾರ್ಯಕ್ರಮಗಳು ಏನಿವೆ ಆದ್ದರಿಂದಲೇ ನಾವು ತೃಪ್ತರಾಗಬೇಕು ಎಂದು ಹೇಳತಕ್ಕಂಥ ಅಭಿಪ್ರಾಯ ನನ್ನದಲ್ಲ. ಆ ದಿಶೆಯಲ್ಲಿ ನಮ್ಮ ಕಾರ್ಯಗಳು ಯಾವ ಒಂದು ಅಡೆತಡೆಯಿಲ್ಲದೇ ಸಾಗಬೇಕಾಗುತ್ತದೆ, ಇಷ್ಟು ಮಾತ್ರ ನಾನು ಇಲ್ಲಿ ಸೂಚ್ಯವಾಗಿ ಹೇಳುತ್ತೇನೆ. ಅವರು ರಾಜಕೀಯವಾಗಿ ತುಂಬು ಜೀವನವನ್ನು ನಡೆಸಿದಂತಹವರು, ಈ ರಾಷ್ಟ್ರದ ಅಥವಾ ಈ ರಾಜ್ಯದ ಇತಿಹಾಸವನ್ನು ಬರೆಯತಕ್ಕಂಥ ಜನ ಅವರ ಈ ಒಂದು ಸ್ಥಾನವನ್ನು ಇತಿಹಾಸದ ಪುಟಗಳಲ್ಲಿ ಬರೆಯತಕ್ಕಂಥಾದರಲ್ಲಿ ಯಾರೂ ಹಿಂದೆ ಬೀಳಲಾರರು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರ ಈ ಒಂದು ಅನಿರೀಕ್ಷಿತ ಮರಣವನ್ನು ನಾವ್ಯಾರೂ ಎಣಿಸಿದ್ದಿಲ್ಲ. ಈ ಅಧಿವೇಶನದಲ್ಲಿ ೫ನೇ ಶಾಸನ ಸಭೆಯಲ್ಲಿ ನಾವು ಅವರ ಸಂತಾಪಸೂಚಕ ನಿರ್ಣಯವನ್ನು ಮಾಡುತ್ತೇವೆ, ಅಂತಹ ಒಂದು ಕೆಟ್ಟ ಸನ್ನಿವೇಶ ನಮ್ಮ ಮುಂದೆ ಬರುತ್ತದೆ ಎಂದು ನಾನಂತೂ ತಿಳಿದುಕೊಂಡಿರಲಿಲ್ಲ. ರಾಜಕೀಯವಾಗಿ ನನಗೂ ಅವರಿಗೂ ಸಾಕಷ್ಟು ಭಿನ್ನಾಭಿಪ್ರಾಯಗಳು ಇದ್ದವು. ನಾನು ಪ್ರಾಮಾಣಿಕವಾಗಿ ಅಂತರಾಳದಿಂದ ಈ ಮಾತನ್ನು ಹೇಳುತ್ತಿದ್ದೇನೆ; ಇಂತಹ ಒಂದು ಕೆಟ್ಟ ಸನ್ನಿವೇಶವನ್ನು ನಾನು ಈ ಸದನದಲ್ಲಿ ನೋಡುತ್ತೇನೆ. ಎಂದು ಭಾವಿಸಿರಲಿಲ್ಲ. ವಿಧಿಯ ಆಟಕ್ಕೆ ನಾವ್ಯಾರೂ ಎದುರು ನಿಲ್ಲುವುದಕ್ಕೆ ಸಾಧ್ಯವಿಲ್ಲ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ, ದುಃಖತಪ್ತರಾಗಿರತಕ್ಕಂಥ ಅವರ ಕುಟುಂಬ ವರ್ಗದವರಿಗೆ ಅವರನ್ನು ಅಗಲಿರತಕ್ಕಂಥ ಈ ಸನ್ನಿವೇಶದಲ್ಲಿ ಆ ದುಃಖವನ್ನು ಸಹಿಸುವುದಕ್ಕೆ ಶಕ್ತಿಯನ್ನು ಕೊಡಲಿ ಎಂದು ಭಗವಂತನಲ್ಲಿ ನಾನು ಪ್ರಾರ್ಥಿಸಿಕೊಂಡು ನನ್ನ ಈ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ.ಬಿ. ಭಾವಿ (ಮುಂದರ್ಗಿ).—ಸನ್ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕದ ಮಹಾಶಿಲ್ಪಿ ದಿವಂಗತ ಶ್ರೀ ದೇವರಾಜ ಅರಸ್‌ರವರ ಆತ್ಮೀಯ ಶಿಷ್ಯರಾಗಿ, ಅವರ ನಿಕಟವರ್ತಿಗಳಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ಇವತ್ತಿನ ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಈ ಒಂದು ಸಂತಾಪಸೂಚಕ ನಿರ್ಣಯಕ್ಕೆ ನಾನು ಮೊಟ್ಟಮೊದಲನೆಯದಾಗಿ ಸ್ವಾಗತವನ್ನು ಕೋರುತ್ತೇನೆ. ೬ನೇ ತಾರೀಖಿನ ದಿವಸ ಸಾಯಂಕಾಲ ಈ ಕರ್ನಾಟಕ ರಾಜ್ಯದ ದುರ್ಬಲ ವರ್ಗದವರ ಮತ್ತು ಹಿಂದುಳಿದ ಜನಾಂಗದ ಸೂರ್ಯ ಅಸ್ತಂಗತನಾದ, ಇನ್ನು ಮುಂದೆ ಆ ಸೂರ್ಯ ಉದಯಿಸುವುದಿಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿಯ ಮಾತಲ್ಲ ಎಂದು ನಾನು ಈ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಈಗಾಗಲೇ ಈ ಮನೆಯ ಹಿರಿಯ ಸದಸ್ಯರಾದ ಶ್ರೀಮಾನ್ ಆರ್ಮುಗಂರವರು, ಶ್ರೀಮಾನ್ ದೇವೇಗೌಡರು, ಶ್ರೀಮಾನ್ ಜೆ. ಹೆಚ್. ಪಟೇಲ್‌ರವರು ಹೇಳಿದ ಹಾಗೆ ಮಾನ್ಯ ಮುಖ್ಯ ಮಂತ್ರಿಗಳಾಗಿ ದೇವರಾಜ ಅರಸ್‌ರವರು ತೆಗೆದುಕೊಂಡಂತಹ ಕೆಲವೊಂದು ಭೂ ಸುಧಾರಣೆಯ ಕಾರ್ಯಗಳು ಮತ್ತು ಹಿಂದುಳಿದ ಜನಾಂಗದವರಿಗೆ ಮೀಸಲಾತಿಯ ಅವಕಾಶಗಳನ್ನು ದೊರಕಿಸಿಕೊಟ್ಟದ್ದು ಇವೆಲ್ಲಾ ಅವರ ಕಾರ್ಯದಕ್ಷತೆಗೆ ಉತ್ತಮವಾದ

ನಿದರ್ಶನಗಳು, ಇಡೀ ಭರತಖಂಡದಲ್ಲಿ ಯಾವ ರಾಜ್ಯದವರು ಏನೂ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೊ ಅದನ್ನು ಕರ್ನಾಟಕ ರಾಜ್ಯದಲ್ಲಿ ಅವರು ಮಾಡಿ ತೋರಿಸಿದ್ದಾರೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಅವರ ಆತ್ಮೀಯ ಶಿಷ್ಯರಾಗಿ ಅದನ್ನೆಲ್ಲಾ ಮುಂದುವರಿಸಿಕೊಂಡು ಬರುತ್ತೇನೆ ಎಂದು ಈ ಸಭೆಯಲ್ಲಿ ಹೇಳಿದ್ದಾರೆ. ಅದಕ್ಕಾಗಿ ನಾನು ಇಲ್ಲಿ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಕೊನೆಯದಾಗಿ ನಾನು ಇಲ್ಲಿ ಒಂದೇ ಒಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವರಾಜ ಅರಸ್‌ರವರಲ್ಲಿ ಇದ್ದಂತಹ ಒಂದು ವಿಶೇಷವಾದ ಅಸ್ತಿ ಎಂದರೆ ಅದು ಅವರು ಯುವಕರಲ್ಲಿ ಇಟ್ಟಿದ್ದಂತಹ ಒಂದು ವಿಶೇಷವಾದ ಮಮತೆ ಅವರಲ್ಲಿ ಇಲ್ಲದೇ ಹೋಗಿದ್ದರೆ, ೧೯೭೮ರನೇ ಇಸವಿಯ ಚುನಾವಣೆಯಲ್ಲಿ ನಾವು ಯುವಕರು ಪಾತ್ರ ವಹಿಸಿ ಗೆದ್ದು ಈ ಶಾಸನ ಸಭೆಗೆ ಯುವಕ ಶಾಸಕರಾಗಿ ಬರುವುದಕ್ಕೆ ಆಗುತ್ತಾ ಇರಲಿಲ್ಲ. ಅದಕ್ಕಾಗಿ ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ನಾನು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಶ್ರೀ ವಿ. ವಿ. ಪತ್ತಾರ್ (ಜಮಖಂಡಿ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ನಾವು ಈ ರಾಜ್ಯದ ಒಬ್ಬ ಬಹು ಮುಖ ಪ್ರತಿಭೆಯ ಮಹಾವ್ಯಕ್ತಿಯನ್ನು ಆಗಲಿದ್ದೇವೆ. ಈ ಬಗ್ಗೆ ತಾವು ಹಾಗೂ ಮಾನ್ಯ ಮುಖ್ಯ ಮಂತ್ರಿಯವರು ಈ ಸಭೆಯಲ್ಲಿ ತಂದಿರತಕ್ಕಂಥ ಈ ಒಂದು ನಿರ್ಣಯ ಬಹಳ ಸೂಕ್ತವಾದ ನಿರ್ಣಯವಾಗಿದೆ. ಪ್ರತಿಯೊಬ್ಬರೂ ಕೂಡ ಈ ಸದನದಲ್ಲಿ ಅದನ್ನು ಅನುಮೋದಿಸತಕ್ಕಂಥ ಅಸ್ಥೆಯನ್ನು ತೋರಿಸಿದ್ದಾರೆ. ಪ್ರಮುಖವಾಗಿ ಬಿಜಾಪುರ ಜಿಲ್ಲೆಯ ಜನತೆಯ ವತಿಯಿಂದ ನಾನು ಅವರಿಗೆ ಹೃದಯ ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ. ಸನ್ಮಾನ್ಯ ದೇವರಾಜ ಅರಸ್‌ರವರು ೧೯೭೪ರಲ್ಲಿ ನಮ್ಮ ಬಿಜಾಪುರ ಜಿಲ್ಲೆಗೆ ಭೇಟಿ ಇತ್ತಿದ್ದರು. ಆ ಸಂದರ್ಭದಲ್ಲಿ ಬಿಜಾಪುರದ ಬರಗಾಲದಿಂದ ಕಂಗಾಲಾಗಿದ್ದ ಜನತೆ ಈ ಕೃಷ್ಣಾ ಮೇಲ್ದಂಡೆ ಯೋಜನೆಯ ಫಲವಾಗಿ ಅದನ್ನು ತೀವ್ರವಾಗಿ ಕಾರ್ಯಗತ ಮಾಡಿರಿ ಎಂದು ಅವರಲ್ಲಿ ಕೇಳಿಕೊಂಡಿದ್ದರು. ಆಗ ಅವರು ಹೇಳಿದಂತಹ ಒಂದು ಮಾತು ಈ ದಿವಸ ನನಗೆ ನೆನಪಾಗುತ್ತಿದೆ. ಅವರು ಎಷ್ಟೊಂದು ತೀಕ್ಷ್ಣವಾಗಿ ಉತ್ತರಿಸಿದರು ಎಂದರೆ, 'I will beg. barrow or steal and see that the project is completed during a short period of time.' ಎನ್ನುವ ಮಾತನ್ನು ಅವರು ಹೇಳಿದರು. ಇದರಿಂದ ಏನು ವ್ಯಕ್ತವಾಗುತ್ತಾ ಇದೆ ಎಂದರೆ, ನಮ್ಮ ರಾಜ್ಯದ ಜನತೆಯ ಬಗ್ಗೆ ಹಾಗೂ ನಮ್ಮ ರಾಜ್ಯದ ದುರ್ಭಿಕ್ಷ ಜಿಲ್ಲೆಯಾದಂತಹ ಬಿಜಾಪುರದ ಜಿಲ್ಲೆಯ ಬಗ್ಗೆ ಅವರಿಗೆ ಎಷ್ಟೊಂದು ಅನುಕಂಪ ಇತ್ತು ಎನ್ನುವುದು ವ್ಯಕ್ತವಾಗುತ್ತಾ ಇದೆ. ಈ ದಿವಸ ನಾನು ಈ ನಮ್ಮ ಸರ್ಕಾರವನ್ನು, ಅದರ ಚುಕ್ಕಾಣಿಯನ್ನು ಹಿಡಿದಿರುವ ಮಾನ್ಯ ಗುಂಡೂರಾಯರನ್ನು ಅಭಿನಂದಿಸುತ್ತಾ ಇದ್ದೇನೆ. ಕಾರಣ ಮಾನ್ಯ ದೇವರಾಜ ಅರಸರವರ ಮಾತನ್ನು ನನಸಾಗಿ ಮಾಡುವಂತಹ ಶಕ್ತಿ ಮಾನ್ಯ ಗುಂಡೂರಾಯರಲ್ಲಿದೆ, ಇನ್ನು ಕೆಲವೇ ದಿವಸಗಳಲ್ಲಿ ಆಲಮಟ್ಟಿಯಲ್ಲಿ ಮತ್ತು ನಾರಾಯಣಪುರದಲ್ಲಿ ಯಥೇಚ್ಛವಾಗಿ ನೀರು ನಿಂತು ನಮ್ಮ ಬಿಜಾಪುರದ ಜನರಿಗೆ ಸೌಭಾಗ್ಯ ತರುವಂತಹ ಕಾಲ ಈಗ ಸನ್ನಿಹಿತವಾಗಿದೆ.

೪-೧೦ ಪಿ.ಎಂ.

ಶ್ರೀಮಾನ್ ದೇವರಾಜ್ ಅರಸ್‌ರವರ ಅನುಕಂಪ ಒಂದು ರೀತಿಯಲ್ಲಿ ಸಹಕಾರ ಸಂಸ್ಥೆ ಇದ್ದಂತೆ ಇತ್ತು. ತಮಗೆಲ್ಲರಿಗೂ ಗೊತ್ತಿದ್ದಂತೆ ರಾಜ್ಯ ವಿಧಾನ ಸಭಾ ಸದಸ್ಯರಾಗಿದ್ದಂತಹ ಶ್ರೀಮಾನ್ ಕಲ್ಲಣ್ಣನವರು ಬೆಂಗಳೂರು ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಖಾಯಿಲೆಯಿಂದ ಚಿಕಿತ್ಸೆ ಪಡೆಯುತ್ತಿದ್ದಾಗ ಅವರ ಬಗ್ಗೆ ಶ್ರೀಮಾನ್ ದೇವರಾಜ್ ಅರಸ್‌ರವರು ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು. ಇದರಿಂದ ಅವರ ಮನಸ್ಸು ನೊಂದು ಶ್ರೀಮಾನ್ ಕಲ್ಲಣ್ಣನವರಿಗೆ ಎರಡು ಸಾವಿರ ರೂಪಾಯಿಗಳನ್ನು ಕೊಟ್ಟರು. ಇದಕ್ಕಾಗಿ ನಾನು ಶ್ರೀಮಾನ್ ದೇವರಾಜ ಅರಸ್‌ರವರನ್ನು ಸಹಕಾರ ಸಂಸ್ಥೆಯ ದೇವರು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ದಿವಸ ಈ ಸದನದಲ್ಲಿ ಶ್ರೀಮಾನ್ ದೇವರಾಜ್ ಅರಸ್‌ರವರಿಗೆ ನಾವೆಲ್ಲ ಶ್ರದ್ಧಾಂಜಲಿಯನ್ನು ಅರ್ಪಿಸುವುದು ಮೃತರ ಆತ್ಮಕ್ಕೆ ಆ ಭಗವಂತನು ಶಾಂತಿಯನ್ನು ಕೊಡಲಿ ಹಾಗೂ ಅವರ ನಿಧನದಿಂದ ದುಃಖ ಭರಿತರಾದ ಅವರ ಕುಟುಂಬದವರಿಗೆ ಆ ದುಃಖವನ್ನು ಭರಿಸಲು ಆ ಭಗವಂತನು ಶಕ್ತಿಯನ್ನು ಕೊಡಲಿ ಎಂದು ಹಾರೈಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಟಿ. ರಾಮು (ಚನ್ನಪಟ್ಟಣ).—ಮಾನ್ಯ ಅಧ್ಯಕ್ಷರೇ, ನೆನ್ನೆಯ ದಿವಸ ನಾನು ಶ್ರೀಮಾನ್ ದೇವರಾಜ್ ಅರಸರ ಹುಟ್ಟೂರಾದ ಕಲ್ಲಹಳ್ಳಿಗೆ ಹೋಗಿ ದಿವಂಗತ ದೇವರಾಜ್ ಅರಸರ ಅಂತ್ಯಕ್ರಿಯೆ

ಯಲ್ಲಿ ಭಾಗವಹಿಸಿ ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿ ಬಂದಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಸುಮಾರು ೮ ವರ್ಷಗಳ ಕಾಲ ರಾಜ್ಯದ ಮುಖ್ಯ ಮಂತ್ರಿಯಾಗಿ ಪದವಿಗೆ ಬಂದ ಶ್ರೀಮಾನ್ ದೇವರಾಜ್ ಅರಸ್‌ರವರು ಒಂದು ಸಣ್ಣ ಮನೆ. ಹಾಗೂ ಆಚಾರ ಮಾತ್ರ ಇತ್ತು. ಇಂತಹ ಒಂದು ಸಣ್ಣ ಮನೆತನದಿಂದ ಇಷ್ಟು ದೊಡ್ಡ ಪದವಿಗೆ ಬಂದು ಮುಖ್ಯ ಮಂತ್ರಿಯಾಗಿ ನೆಲೆಸಿದಂತಹ ವ್ಯಕ್ತಿ ತಮ್ಮ ಸ್ವಂತ ಹಳ್ಳಿಯಲ್ಲಿ ಒಂದು ದೊಡ್ಡ ಬಂಗಲೆಯನ್ನು ಇಟ್ಟುಕೊಂಡಿರುತ್ತಾರೆ ಎಂಬ ಒಂದು ಕಲ್ಪನೆ ನನ್ನ ಮನಸ್ಸಿನಲ್ಲಿ ಮೂಡಿತ್ತು. ಆದರೆ ಆ ರೀತಿ ಇರಲಿಲ್ಲ. ಸುಮಾರು ೪೦ ವರ್ಷಗಳ ರಾಜಕೀಯ ಜೀವನದಲ್ಲಿ ಅವರು ಬಡವರ ಹಾಗೂ ಹಿಂದುಳಿದ ವರ್ಗಗಳ ಬಗ್ಗೆ ಅವರಿಗಿದ್ದ ಅನುಕಂಪದ ಫಲಿತಾಂಶದಿಂದಾಗಿ ಅವರು ಅಷ್ಟೊಂದು ದೊಡ್ಡ ಪದವಿಗೆ ಬಂದರು ಎಂದು ನಾನು ಭಾವಿಸಿದ್ದೇನೆ. ಆದರೆ ಇವತ್ತಿನ ದಿವಸ ಶ್ರೀಮಾನ್ ದೇವರಾಜ್ ಅರಸ್ ರವರು ನಮ್ಮನ್ನೆಲ್ಲ ಬಿಟ್ಟು ಹೋಗಿದ್ದಾರೆ. ಮತ್ತು ಈ ಸದನದಲ್ಲಿ ನಾವು ಶಕ್ತಿಯನ್ನು ಕಳೆದು ಕೊಂಡಂತಾಗಿದೆ. ಅವರ ರಾಜಕೀಯದ ದೂರದೃಷ್ಟಿ ನಾಣ್ಯತೆ ಹಾಗೂ ಕ್ರಾಂತಿಕಾರಕ ಕೆಲಸಗಳು ನಮ್ಮ ನೆನಪಿಗೆ ಬರುತ್ತಿವೆ. ಶ್ರೀಮಾನ್ ದೇವರಾಜ್ ಅರಸ್ ರವರು ಇತರರ ಬಗ್ಗೆ ಅನುಕಂಪವನ್ನು ಹೊಂದಿದ್ದರು. ಸಾಮಾನ್ಯವಾಗಿ ದೇಶದಲ್ಲಿದ್ದ ಬಡವರನ್ನು ಸೂರ್ಯ ಪ್ರಕಾಶಮಾನವಾಗಿ ಯಾವ ರೀತಿ ಹೊಳೆಯುತ್ತಾನೆಯೋ ಆ ರೀತಿ ಹೊಳೆಯುವಂತೆ ಮಾಡಲು ಪ್ರಯತ್ನ ಪಟ್ಟರು. ಈ ಹೋರಾಟದ ಸಂಘರ್ಷಣೆಯಲ್ಲಿ ಕೆಲವರು ಜಾತಿ ವಿರೋಧಿಗಳೆಂದು ಕರೆದರೂ ಆದರೆ ಅವರು ಜಾತಿ ವಿರೋಧಿಗಳಲ್ಲ. ಅವರು ಎಲ್ಲಾ ಹಿಂದುಳಿದ ಪಂಗಡದವರ ಅಭಿವೃದ್ಧಿಗಾಗಿ ಶ್ರಮ ಪಟ್ಟವರು. ಶ್ರೀಮಾನ್ ದೇವರಾಜ್ ಅರಸ್ ರವರು ಭೂಸುಧಾರಣೆಯ ವಿಷಯದಲ್ಲಿ ಒಳ್ಳೆಯ ಸಂಪ್ರದಾಯವನ್ನು ನಮಗೆ ಹಾಕಿಕೊಟ್ಟಿದ್ದಾರೆಂದು ನನಗನಿಸುತ್ತದೆ. ಅವರ ಮಾರ್ಗದರ್ಶನದಲ್ಲಿ ಮುಖ್ಯ ಮಂತ್ರಿಗಳಾಗಿರತಕ್ಕ ಶ್ರೀಮಾನ್ ಗುಂಡೂರಾಯರು ಸಹ ಸುಮಾರು ಎರಡೂವರೆ ವರ್ಷಗಳಿಂದ ಬಡವರ ಹಾಗೂ ಹಿಂದುಳಿದವರ್ಗಗಳ ಅಭಿವೃದ್ಧಿಗಾಗಿ ಹೆಚ್ಚಿನ ಶ್ರಮವಹಿಸುತ್ತಿದ್ದಾರೆ. ಶ್ರೀಮಾನ್ ಗುಂಡೂರಾಯರು ಶ್ರೀಮಾನ್ ದೇವರಾಜ್ ಅರಸ್‌ರ ಶಿಷ್ಯರಾದ್ದರಿಂದ ಪ್ರಶ್ನೆಗೆ ತಕ್ಕ ಉತ್ತರವನ್ನು ಕೊಡುತ್ತಾರೆಂದು ನನಗೆ ಈಗ ಅನಿಸುತ್ತದೆ. ಇದು ಗುರು ಶಿಷ್ಯರ ಸಂಬಂಧವನ್ನು ಸೂಚಿಸುವ ಭಾವನೆ ನನ್ನಲ್ಲಿ ಮೂಡಿ ಬರುತ್ತಿದೆ. ಇಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡು ಅವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇವೆ. ಬಡವರು ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಶ್ರೀಮಾನ್ ದೇವರಾಜ್ ಅರಸ್ ರವರ ಹೆಸರಿನಲ್ಲಿ ಕೇಂದ್ರ ಮಟ್ಟದ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡುತ್ತಿರುವುದು ನಿಜವಾಗಿಯೂ ಮೆಚ್ಚತಕ್ಕಂತಹ ವಿಷಯವಾಗಿದೆ. ದಿವಂಗತ ಶ್ರೀಮಾನ್ ದೇವರಾಜ್ ಅರಸ್‌ರು ನಿಧನರಾದ್ದರಿಂದ ಇಡೀ ನಮ್ಮ ಕರ್ನಾಟಕ ರಾಜ್ಯಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಹಾಗೂ ಶ್ರೀಮಾನ್ ದೇವರಾಜ್ ಅರಸ್ ರವರ ನಿಧನದಿಂದ ಅವರ ಕುಟುಂಬದವರು ದುಃಖವನ್ನು ಭರಿಸಲು ಆ ಭಗವಂತನು ಶಕ್ತಿಯನ್ನು ಕೊಡಲಿ ಹಾಗೂ ಶ್ರೀಮಾನ್ ದೇವರಾಜ್ ಅರಸ್‌ರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಆ ಭಗವಂತನಲ್ಲಿ ನಾನು ಪ್ರಾರ್ಥನೆ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ (ಬಳ್ಳಾರಿ) — ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ದೇವರಾಜ್ ಅರಸ್‌ರು ನಮ್ಮನ್ನು ಇಂದು ಅಗಲಿದ್ದಾರೆ. ಆ ಒಂದು ವಿಷಯವಾಗಿ ನಮ್ಮ ಮಾನ್ಯ ಸದಸ್ಯರಾದ ಶ್ರೀಮಾನ್ ಜೆ. ಹೆಚ್. ಪಟೇಲ್ ಹಾಗೂ ಶ್ರೀಮಾನ್ ದೇವೇಗೌಡರು ಹೆಚ್ಚಿನ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹಾಗೂ ಅವರು ಮಾಡಿದಂತಹ ಪರಿಣಾಮಕಾರಿ ಕೆಲಸಕಾರ್ಯಗಳ ಬಗ್ಗೆಯೂ ಸಹ ಮಾತನಾಡಿದ್ದಾರೆ. ಆದರೆ ನಾನೂ ಕೂಡ ಈ ಸಂದರ್ಭದಲ್ಲಿ ಕರ್ನಾಟಕ ದಲಿತರ ಪರವಾಗಿ ಕೆಲವಾರು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀಮಾನ್ ಆರ್. ಗುಂಡೂರಾಯರು ದಿವಂಗತ ಶ್ರೀಮಾನ್ ದೇವರಾಜ್ ಅರಸ್‌ರ ಶಿಷ್ಯರಾಗಿ ಗುರು ಕಾಣಿಕೆಯನ್ನು ಅರ್ಪಿಸಲು ಅವರ ಜ್ಞಾಪಕಾರ್ಥವಾಗಿ ಒಂದು ಸಂಶೋಧನಾ ಕೇಂದ್ರವನ್ನು ತೆರೆಯಲಾಗುವುದೆಂದು ಹೇಳಿದ್ದಾರೆ. ಇದನ್ನು ನಾವೆಲ್ಲರೂ ಮೆಚ್ಚತಕ್ಕಂತಹ ವಿಷಯವೇ ಸರಿ. ಶ್ರೀಮಾನ್ ದೇವರಾಜ್ ಅರಸ್‌ರು ಸುಮಾರು ೮ ವರ್ಷಗಳ ಕಾಲ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ದೀನ ದಲಿತರಿಗೆ ಹಾಗೂ ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಹೆಚ್ಚು ಶ್ರಮ ಪಟ್ಟಿದ್ದಾರೆ. ಅವರು ಕರ್ನಾಟಕ ರಾಜ್ಯದಲ್ಲಿ ಸಾಧಿಸಿದಂತಹ ಹಿರಿಮೆಯ ಕೆಲಸ ಕಾರ್ಯಗಳನ್ನು ನಾವು ಎಂದೆಂದಿಗೂ ಮರೆಯುವಂತಿಲ್ಲ. ಆದ್ದರಿಂದ ಶ್ರೀಮಾನ್ ದೇವರಾಜ್ ಅರಸ್‌ರ ಜ್ಞಾಪಕಾರ್ಥವಾಗಿ ವಿಧಾನ ಸೌಧದ ಮುಂದೆ ಅವರ ಕಂಚಿನ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವ ಯೋಚನೆಯನ್ನು ಕೈಗೊಂಡಿರುವುದು

ತುಂಬಾ ಸಂತೋಷಕರವಾದ ಸಂಗತಿಯಾಗಿದೆ. ಇದರಿಂದ ಕರ್ನಾಟಕದ ೪ ಕೋಟಿ ಜನರು ಕೂಡ ಶ್ರೀಮಾನ್ ಗುಂಡೂರಾಯರನ್ನು ಮೆಚ್ಚಬೇಕಾಗಿದೆ. ಇದು ಗುರುಗಳಿಗೆ ಶಿಷ್ಯರು ಕೊಡುವ ಕಾಣಿಕೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ನಾನು ಶ್ರೀಮಾನ್ ದೇವರಾಜ್ ಅರಸ್‌ರ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಅವರಿಗೂ ನನಗೂ ಹೆಚ್ಚಿಗೆ ಸುಮಧುರವಾದಂಥ ಕಾಂಟಾಕ್ಟ್ ಅಥವಾ ಒಂದು ಪರಿಸರ ಬರದೇ ಇದ್ದರೂ ಕೂಡ ೧೯೬೭ ರಲ್ಲಿ ನಾನು ಶಾಸಕನಾಗಿ ಅಸೆಂಬ್ಲಿಯಲ್ಲಿದ್ದಾಗ ನನ್ನ ಪಕ್ಕಕ್ಕೆ ಶ್ರೀಮಾನ್ ದೇವರಾಜ್ ಅರಸ್ ಅವರೂ ಕೂಡುತ್ತಾ ಇದ್ದರು. ೧೯೭೨ ರಲ್ಲಿ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಬೇಕು ಎಂದು ಚರ್ಚೆ ನಡೆಯುತ್ತಾ ಇತ್ತು. ಆಗ ಶ್ರೀಮಾನ್ ಅಂದಾನಪ್ಪ ದೊಡ್ಡಮೇಟಿಯವರು ಜೀವಂತ ಇದ್ದರು. ಆಗ ನಮ್ಮ ರಾಜ್ಯಕ್ಕೆ ಮೈಸೂರು ರಾಜ್ಯ ಎಂದು ಇರಬೇಕು ಎಂದು ದೇವರಾಜ್ ಅರಸ್ ಅವರು ತಮ್ಮ ವಾದವನ್ನು ಮಂಡಿಸುತ್ತಾ ಇದ್ದರು. ಅವರ ಪಕ್ಕಕ್ಕೆ ಕೂತಂಥ ನಾನು ಅವರ ವಿರುದ್ಧ ಕರ್ನಾಟಕ ಆಗಬೇಕು ಎಂದು ಹೇಳಿದಾಗ ಅವರು ಒಂದು ಮಾತನ್ನು ಹೇಳಿದರು. ಏನೆಂದರೆ, Mr. Arakeri, you cannot know the history of Mysore. I said "Mr. Urs is ignorant of the history of Karnataka." ಎಂದು ಹೇಳಿದೆ. ಆಗ ಅವರ ಮನಸ್ಸಿಗೆ ನೋವಾಗಿ ರೆಫರೆನ್ಸ್ ಪುಸ್ತಕಗಳನ್ನು ಒಗೆದು ಕೂತುಕೊಂಡರು. ಆಗ ಶ್ರೀಮಾನ್ ಬಾಳಿಗಾರವರು ನಮ್ಮಿಬ್ಬರನ್ನೂ ಸಮಾಧಾನಮಾಡಿ ನಿಮ್ಮ ಭಾಷಣ ಮುಂದುವರೆಸಿ ಎಂದು ಅರಸರಿಗೆ ಹೇಳಿದರು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ೧೯೭೩ ರಲ್ಲಿ ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವಂಥ ಅಥವಾ ಮಾಡಿದಮೇಲೆ ಅವರು How he used to respond to the will of the people ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ. ಪ್ರಜಾಪ್ರಭುತ್ವದಲ್ಲಿ ಜನತೆಯ ಅಭಿಪ್ರಾಯಕ್ಕೆ ಹೇಗೆ ಮನ್ನಣೆ ಕೊಡುತ್ತಾ ಇದ್ದರು ಎನ್ನುವುದಕ್ಕೆ ಇದು ಸಾಕ್ಷಿಯಾಗಿದೆ. Consistency is by virtue of an ass ಎಂದು ಹೇಳಿದ್ದಾರೆ. There is no finality in thinking. ಶ್ರೀಮಾನ್ ಅರಸು ಅವರು ಆ ನಿಲುವನ್ನು ತೆಗೆದುಕೊಂಡರು. ಅವರು ಮುಖ್ಯ ಮಂತ್ರಿಯಾಗಿ ಬಂದಾಗ ತಮ್ಮ ನಿಲುವನ್ನು ಪರಿವರ್ತನೆಮಾಡಿ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದ್ದು ನೋಡಿದರೆ ಅವರು ಎಂಥಾ ಗ್ರೇಟ್ ಪಾರ್ಲಿಮೆಂಟೇರಿಯನ್ ಮತ್ತು ಪ್ರಜಾಪ್ರಭುತ್ವದ ಬುನಾದಿಯೊಳಗೆ ಅವರಿಗೆ ಎಷ್ಟು ವಿಶ್ವಾಸವಿತ್ತು ಎನ್ನುವುದು ಅರ್ಥವಾಗುತ್ತದೆ. ವಿರೋಧ ಪಕ್ಷಗಳ ಬಗ್ಗೆ ವೈಮನಸ್ಯ ಇರಲಾರದಂಥ, ಸದ್ಭಾವನೆ ಇದ್ದಂಥ ಮಹಾನ್ ವ್ಯಕ್ತಿ ಅರಸು ಅವರು. ನಿನ್ನೆ ಶೋಕ ಸಂತಾಪ ಕೊಡುವಾಗ ಶ್ರೀಮಾನ್ ದೇವೇಗೌಡರು ಒಂದು ಮಾತನ್ನು ಹೇಳಿದ್ದಾರೆ. ಶ್ರೀಮಾನ್ ಅರಸು ಅವರು ಮುಖ್ಯ ಮಂತ್ರಿಗಳಾಗಿದ್ದಾಗ ವಿರೋಧಪಕ್ಷದಲ್ಲಿದ್ದ ನಮಗೆ ಹುರುಪು ಬರುತ್ತಿತ್ತು ಎಂದು ಹೇಳಿದ್ದಾರೆ. ಏಕೆಂದರೆ, ಶ್ರೀಮಾನ್ ದೇವರಾಜ್ ಅರಸ್ ಅವರ ಹಿರಿಮೆ, ವಿಶಾಲ ಮನೋಭಾವನೆಯಿಂದ ವಿರೋಧಪಕ್ಷದಲ್ಲಿದ್ದು ಕೆಲಸ ಮಾಡುವವರಿಗೆ ಅವರ ಬಗ್ಗೆ ಸದ್ಭಾವನೆ ಕೂಡ ಇರುತ್ತಿತ್ತು ಎನ್ನುವ ಭಾವನೆ ಬರುತ್ತದೆ ಅವರು ಅಂಥಾ ಒಬ್ಬ ಹಿರಿಯ ವ್ಯಕ್ತಿ. ಕರ್ನಾಟಕದಲ್ಲಿ ಜೀತಮುಕ್ತ ಕಾನೂನು, ಭೂಸುಧಾರಣಾ ಕಾನೂನು, ಋಣಮುಕ್ತ ಕಾನೂನು ಮುಂತಾದ ಕಾನೂನುಗಳನ್ನು ತಂದು ಜಾರಿ ಮಾಡಿದ್ದರಿಂದ ಹೆಚ್ಚು ಹೆಚ್ಚು ಲಾಭವಾದದ್ದು ಹಿಂದುಳಿದ ವರ್ಗದವರಿಗೆ ಮತ್ತು ಹರಿಜನ–ಗಿರಿಜನರಿಗೆ. ಡಾಕ್ಟರ್ ಅಂಬೇಡ್ಕರ್ ರವರು, ದೀನದಲಿತರು ಏನಿದ್ದಾರೆ ಅವರು ಆರ್ಥಿಕವಾಗಿ ಮುಂದುವರಿಯದೇ ಇದ್ದರೆ ಪ್ರಜಾಪ್ರಭುತ್ವದ ಬುನಾದಿ ಛಿನ್ನ ಛಿದ್ರವಾಗುತ್ತದೆ. They will destroy the very structure of the democracy of the country ಎಂದು ಹೇಳಿದ್ದಾರೆ. ಅದನ್ನು ಶ್ರೀಮಾನ್ ದೇವರಾಜ್ ಅರಸ್ ಅವರು ತಮ್ಮ ಮನಸ್ಸಿನಲ್ಲಿ ಆಳವಾಗಿಟ್ಟುಕೊಂಡು ಆ ಹಾದಿಯಲ್ಲಿ ಹಿಂದುಳಿದ ಜನಾಂಗವನ್ನು ಮುಂದಕ್ಕೆ ತರಬೇಕು. ರೈತರು ಈ ರಾಷ್ಟ್ರದ ಬೆನ್ನೆಲುಬು. ಅವರ ಸಮಸ್ಯೆಗಳನ್ನು ಹೋಗಲಾಡಿಸಿ, ಅವರಿಗೆ ಆರ್ಥಿಕವಾಗಿ ಸಾಮಾಜಿಕವಾಗಿ ಸಮಾನತೆ ಸಿಗಬೇಕು ಎಂದು ಶ್ರೀಮಾನ್ ದೇವರಾಜ್ ಅರಸ್ ಅವರು ಹೋರಾಟಮಾಡಿ ಹೋಗಿದ್ದಾರೆ. ನಾನು ಒಂದೆರಡು ಸಲ ಅವರನ್ನು ಭೇಟಿಮಾಡಿ ಹೇಳಿದ್ದೇನೆ. ನನಗೆ ಅತ್ಯಂತ ಪ್ರಿಯರಾದಂಥ ಆದರ್ಶ ವ್ಯಕ್ತಿಗಳು ಇಬ್ಬರು, ಅವರ ತತ್ವ ಮಾರ್ಗದರ್ಶನಗಳು ನಮಗೆ ದಾರಿದೀಪವಾಗಿವೆ. ಆ ಇಬ್ಬರು ವ್ಯಕ್ತಿಗಳು ಯಾರೆಂದರೆ, ಅವರಲ್ಲಿ ಒಬ್ಬರು ಡಾಕ್ಟರ್ ಬಾಬಾಸಾಹೇಬ್ ಅಂಬೇಡ್ಕರ್‌ರವರು ಮತ್ತು ಕರ್ನಾಟಕದಲ್ಲೇ ಹುಟ್ಟಿದಂಥ ಬಸವಣ್ಣನವರು. ಇವರಿಬ್ಬರೂ ಜಾತಿ ವಿರುದ್ಧ ಧಾರ್ಮಿಕ ಕಂದಾಚಾರದ ವಿರುದ್ಧ, ಶೋಷಣೆ ವಿರುದ್ಧ ಹೋರಾಟ ಮಾಡಿ ಚಿರಂತನವಾದಂಥ ಚೇತನ ಶಕ್ತಿಯಾಗಿದ್ದಾರೆ. ಅಂಥಾ ಹಿರಿಮೆಯಲ್ಲಿ ಬೆಳೆದಂಥ ಶ್ರೀಮಾನ್ ದೇವರಾಜ್ ಅರಸ್ ಅವರು ಇಡೀ ಕರ್ನಾಟಕದಲ್ಲೇ ಅಲ್ಲ ಅಖಂಡ

ರಾಷ್ಟ್ರಕ್ಕೆ ಒಂದು ದೀವಿಗೆಯಾಗಿ ಬೆಳಗಿ ಹೋಗಿದ್ದಾರೆ. ಅಂಥಾ ಒಬ್ಬ ಮಹಾನ್ ನಾಯಕನ ಹಾದಿಯಲ್ಲಿ ಹೋಗುವಂಥ ಪ್ರಯತ್ನವನ್ನು ನಾವು ಮಾಡುತ್ತೇವೆ ಎಂಬ ನಿರ್ಧಾರದಿಂದ, ವಂದನಾ (ಸಂತಾಪ) ನಿರ್ಣಯವನ್ನು ತಂದು ದಿಟ್ಟ ಕಾರ್ಯಕ್ರಮವನ್ನು ಹಾಕತಕ್ಕ ಪಣ ತೊಟ್ಟಿದ್ದಾರೆ. ಇದು ನಿಜವಾಗಲೂ ಅಭಿನಂದನೀಯ. ನಾನು ಕರ್ನಾಟಕದ ದೀನದಲಿತರ ಪರವಾಗಿ ಇನ್ನೊಂದು ಸಲ ಮಹಾನ್ ನಾಯಕನಿಗೆ ಶಾಂತಿಯನ್ನು ಕೋರಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಸುಬ್ಬಯ್ಯ ಶೆಟ್ಟಿ (ಸೂರತ್ಕಲ್).—ಮಾನ್ಯ ಮುಖ್ಯ ಮಂತ್ರಿಗಳೂ, ಈ ಸಭೆಯ ಮುಖಂಡರೂ ಆದ ಶ್ರೀಮಾನ್ ಗುಂಡೂರಾಯರು ಮಂಡಿಸಿರುವ ಸಂತಾಪ ಸೂಚಕ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ೧೯೬೯ ರಿಂದ ನನಗೆ ಶ್ರೀಮಾನ್ ದೇವರಾಜ ಅರಸ್ ಅವರ ಸಂಪರ್ಕ. ಕಾಂಗ್ರೆಸ್ ಇಬ್ಭಾಗವಾದಾಗ ಶ್ರೀಮತಿ ಇಂದಿರಾಗಾಂಧಿಯವರ ಕೆಲವು ನಿರ್ಣಯಗಳಿಂದ ಪ್ರಭಾವಿತರಾದ ಈ ದೇಶದ ಹಲವಾರು ವ್ಯಕ್ತಿಗಳಲ್ಲಿ ನಾನೂ ಒಬ್ಬ. ಆಗ ಶ್ರೀಮಾನ್ ದೇವರಾಜ ಅರಸ್ ಅವರು ಶ್ರೀಮತಿ ಇಂದಿರಾಗಾಂಧಿಯವರ ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ಕರ್ನಾಟಕದಲ್ಲಿ ವಹಿಸಿಕೊಂಡು, ಪಕ್ಷದ ಸಭೆಯನ್ನು ಮಲ್ಲೇಶ್ವರಂ ೧೧ನೇ ಕ್ರಾಸ್‌ನಲ್ಲಿ ಕರೆದಾಗ ಪ್ರಥಮವಾಗಿ ನಾನೂ ಕೂಡ ಹೋಗಿದ್ದೆ. ಆಗಲೇ ನಾನು ಮೊಟ್ಟ ಮೊದಲನೆಯದಾಗಿ ಹೋದದ್ದು. ಅವರ ಹೆಚ್ಚು ಪರಿಚಯ ನನಗೆ ಇರಲಿಲ್ಲ. ಆದರೂ ಅವರು ನನ್ನನ್ನು ಕುಳ್ಳಿರಿಸಿ ಎರಡು ಗಂಟೆ ಸಮಯ ನಮ್ಮ ಹತ್ತಿರ ಮಾತನಾಡಿದರು, ಅವರಲ್ಲಿ ಕಮಿಟ್‌ಮೆಂಟ್ ಎಂದು ಹೇಳುವಂಥ ಗುಣ ಕೂಡ ಇತ್ತು. ಅನಂತರ ಕಾಂಗ್ರೆಸ್ ಇಬ್ಭಾಗವಾದಾಗ ಒಂದು ಒಳ್ಳೆಯ ವಾತಾವರಣ ಕಲ್ಪಿತವಾಯಿತು. ಅದರಲ್ಲಿ ಜನಸಾಮಾನ್ಯರು ಈ ಕಾಂಗ್ರೆಸ್ ಪಕ್ಷಕ್ಕೆ ಕರ್ನಾಟಕದಲ್ಲೇ ಮಾತ್ರವಲ್ಲ ಇಡೀ ದೇಶದಲ್ಲೇ ಬೆಂಬಲಕೊಟ್ಟರು. ರಾಜಕೀಯವಾಗಿ ಸಮಾಜದಲ್ಲಿ ಜನಸಾಮಾನ್ಯರಿಗೆ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತ ಏನಿತ್ತು, ಆ ಹಿಡಿತದಿಂದ ಬಿಡುಗಡೆ ಆಗತಕ್ಕ ಒಂದು ವಾತಾವರಣ ಎಲ್ಲಾ ಕಡೆ ಕಲ್ಪಿತವಾಗಿತ್ತು. ಈ ಒಂದು ವಾತಾವರಣವನ್ನು ಸದುಪಯೋಗ ಪಡೆದುಕೊಂಡವರಲ್ಲಿ ಇಡೀ ರಾಷ್ಟ್ರದಲ್ಲಿ ಶ್ರೀಮಾನ್ ದೇವರಾಜ ಅರಸ್ ಅವರು ಪ್ರಥಮರು. ಇಡೀ ರಾಜ್ಯದಲ್ಲಿ ನೋಡುವಾಗ ಬಹುಶ: ಅವರೊಬ್ಬರೇ ಎಂದು ನನ್ನ ಮನಸ್ಸಿಗೆ ಕಾಣುತ್ತದೆ. ಇಂಥಾ ಒಂದು ವಾತಾವರಣವನ್ನು ಸದುಪಯೋಗ ಪಡೆದುಕೊಂಡು ಜನಸಾಮಾನ್ಯರ ಧೋರಣೆಗಳು ಏನಿತ್ತು, ಚುನಾವಣೆಯಲ್ಲಿ ಏನು ಅಭಿಪ್ರಾಯಗಳು ವ್ಯಕ್ತವಾಗಿತ್ತು ಅದನ್ನು ಅರ್ಥಮಾಡಿಕೊಂಡು, ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ಸಿನ ಕಾರ್ಯ ನೀತಿಗಳನ್ನು, ಧೋರಣೆಗಳನ್ನು ಮನಸಾರೆ ಒಪ್ಪಿ ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾದರು ಶ್ರೀಮಾನ್ ದೇವರಾಜ ಅರಸ್‌ರವರು. ಶ್ರೀಮಾನ್ ದೇವರಾಜ ಅರಸ್ ಅವರ ವ್ಯಕ್ತಿತ್ವ ಬಹಳ ದೊಡ್ಡ ವ್ಯಕ್ತಿತ್ವ ಎಂದು ನಾವೆಲ್ಲರೂ ಒಪ್ಪಿಕೊಂಡಂಥ ವಿಚಾರ. ರಾಜಕೀಯದಲ್ಲಿ ಮೇಧಾವಿಗಳಿರುತ್ತಾರೆ, ಬುದ್ಧಿ ಜೀವಿಗಳಿರುತ್ತಾರೆ, ಕೆಲಸಮಾಡಿ ಅನುಭವವಿರುವಂತಹವರು ಇರುತ್ತಾರೆ, ಇವರಿಬ್ಬರ ಸಮ್ಮಿಳನ ಇರುವಂಥಾದ್ದು ಬಹಳ ವಿರಳ, ಅಂಥಾ ಒಬ್ಬ ವ್ಯಕ್ತಿ ಶ್ರೀಮಾನ್ ದೇವರಾಜ ಅರಸ್‌ರು ಅವರು ಬಹಳ ದೊಡ್ಡ ಮೇಧಾವಿ, ಇದರ ಜೊತೆಗೆ, ಕರ್ನಾಟಕದ ಜನಜೀವನದಲ್ಲಿ ಅವರ ಬೇರು ಬಿಟ್ಟಿತ್ತು. ಹೀಗಾಗಿ ಅವರ ವೈಖರಿ ಈ ರೀತಿ ಬರಲಿಕ್ಕೆ ಕಾರಣವಾಯಿತು.

ತಾವು ಹೇಳಿದ ಹಾಗೆ ಏನೇ ಒಂದು ಕ್ರಿಟಿಸಿಜಂ ಬಂದರೂ ಕೂಡ ಅಥವಾ ಬೇರೆ ಏನಾದರೂ ತಿದ್ದುಪಡಿ ಮಾಡುವಂಥಾ ಪ್ರಸಂಗ ಬಂದಾಗ ಅದನ್ನು ತಿದ್ದುಪಡಿ ಮಾಡುವಂಥಾ ದೊಡ್ಡ ಗುಣ ಕೂಡ ಶ್ರೀ ದೇವರಾಜ್ ಅರಸ್‌ರವರಲ್ಲಿ ಇತ್ತು. ಉದಾಹರಣೆಗೆ ಭೂ ಸುಧಾರಣಾ ಕಾನೂನನ್ನು ತಂದಾಗ ಅದಕ್ಕೆ ತಿದ್ದುಪಡಿ ತರಬೇಕೆಂದು ಮಾನ್ಯ ಸದಸ್ಯರುಗಳು ಹೇಳಿದಾಗ ಅದನ್ನು ಸಂಪೂರ್ಣವಾಗಿ ಜಾರಿಗೆ ತರಲು ಶ್ರೀ ದೇವರಾಜ್ ಅರಸ್‌ರವರು ಒಪ್ಪಿಕೊಂಡಿದ್ದರು. ಇಷ್ಟು ಮಾತ್ರವಲ್ಲ ಹಿಂದುಳಿದ ವರ್ಗದ ಜನ ಏನಿದ್ದಾರೆ ಅವರಿಗೆನಮ್ಮ ಸಂವಿಧಾನದ ಮೂಲಕ ಏನೇನು ಸೌಲತ್ತುಗಳನ್ನು ಕೊಡಬೇಕೆಂದು ಇದೆ ಅದನ್ನೆಲ್ಲಾ ಕೊಡಲು ಧೈರ್ಯವಾಗಿ ಮುಂದೆ ಬಂದವರು ಶ್ರೀಮಾನ್ ದೇವರಾಜ್ ಅರಸ್‌ರವರು. ಮತ್ತೆ ಇಕ್ಕೆದ ಆಗಿನ ರಾಜಕೀಯ ವಾತಾವರಣ ಕೂಡ ನಮ್ಮ ಕರ್ನಾಟಕ ರಾಜ್ಯದಲ್ಲಿ ಅವರಿಗೆ ಅನುಕೂಲವಾಗಿ ಬಂತು ಎಂದು ನಾನಾದರೂ ಕೂಡ ತಿಳಿದುಕೊಂಡಿದ್ದೇನೆ. ನಾನು ಶ್ರೀಮಾನ್ ದೇವರಾಜ್ ಅರಸ್‌ರವರನ್ನು ನೋಡಿದಮಟ್ಟಿಗೆ ಹೇಳುವುದಾದರೆ 'ನೆಪೋಲಿಯನ್ ಒಂದು ಕಡೆ ಹೇಳಿದ ಹಾಗೆ ರಾಜಕಾರಣಿಯಾದವಂಥವನ ಹೃದಯ ತಲೆಯಲ್ಲಿರುತ್ತದೆಂದು' ಹೇಳಿದಹಾಗೆ ಶ್ರೀ ದೇವರಾಜ್ ಅರಸ್‌ರವರು ಹೃದಯವನ್ನು ತಲೆಯಲ್ಲಿಟ್ಟುಕೊಂಡು ಆಡಳಿತ ನಡೆಸಿದ್ದರು. ಇದರಿಂದಾಗಿ ಅವರ ಆಡಳಿತದಿಂದ ಎಲ್ಲರಿಗೂ ಒಳ್ಳೆಯ

ದಾಯಿತು ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಇವರಂಥಾ ದೊಡ್ಡ ಪಾರ್ಲಿಮೆಂಟೇರಿಯನ್ ಮತ್ತೊಬ್ಬರನ್ನು ನಾನು ನೋಡಿಲ್ಲ. ಹೆಚ್ಚು ಕಡಿಮೆ ಎಲ್ಲಾ ಪಾರ್ಲಿಮೆಂಟೇರಿಯನ್‌ಗಳನ್ನೂ ನಾನು ನೋಡಿದ ಹಾಗೆ, ನನ್ನ ಮನಸ್ಸಿಗೆ ನಾನು ತಿಳಿದುಕೊಂಡ ಮಟ್ಟಿಗೆ ಹೇಳುವುದಾದರೆ, ನಮ್ಮ ದೇಶದಲ್ಲಿ ಏನು ಕೆಲವೊಂದು ಮಹಾನ್ ಪಾರ್ಲಿಮೆಂಟೇರಿಯನ್‌ಗಳು ಇದ್ದರು ಅವರ ಸಾಲಿನಲ್ಲಿ ಬರುವಂಥಾ ಒಬ್ಬ ಮಹಾನ್ ಪಾರ್ಲಿಮೆಂಟೇರಿಯನ್ ಶ್ರೀಮಾನ್ ದೇವರಾಜ್ ಅರಸ್ ಆಗಿದ್ದರು. ಅವರು ಒಬ್ಬ ಒಳ್ಳೆಯ ಮಾತುಗಾರರಾಗಿ, ಒಳ್ಳೆಯ ಶಿಷ್ಟಾಚಾರವನ್ನು ಹಾಕುವುದರಲ್ಲಿ ಮೇಲ್ಪಂಕ್ತಿಯವರಾಗಿದ್ದು ಇವತ್ತು ಅವರು ನಿಧನ ಹೊಂದಿದ್ದಾರೆ, ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಎಂದು ನಾನು ಪ್ರಾರ್ಥಿಸಿಕೊಂಡು, ಅವರ ಕುಟುಂಬ ವರ್ಗದವರಿಗೆ ಕಳೆದ ೧ ವರ್ಷದಿಂದ ಇಂಥಾ ಹಲವಾರು ಅಘಾತಗಳು ಸಂಭವಿಸುತ್ತಿರುವುದರಿಂದ ಅದನ್ನು ಸಹಿಸಿಕೊಳ್ಳತಕ್ಕಂಥ ಶಕ್ತಿಯನ್ನು ದೇವರು ಅವರ ಕುಟುಂಬ ವರ್ಗದವರಿಗೆ ನೀಡಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಹಣಕಾಸಿನ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ಹೆಚ್ಚು ಕಾಲ ತಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ. ಶ್ರೀಮಾನ್ ದೇವರಾಜ್ ಅರಸ್‌ರವರು ಕರ್ನಾಟಕವೆಂದು ನಾಮಕರಣ ಮಾಡಿದ್ದು ಮಾತ್ರವಲ್ಲ. ಕರ್ನಾಟಕವೆಂದು ಬರೀ ಭಾವನಾತ್ಮಕವಾಗಿ ಉಳಿಯುವುದು ಮಾತ್ರವಲ್ಲ, ಕರ್ನಾಟಕ ರಾಜ್ಯದಲ್ಲಿರುವ ಜನ ಸಿಜಕ್ಕೂ ತಮ್ಮಲ್ಲಿರತಕ್ಕ ಆಶೆ ಮತ್ತು ನಮ್ಮ ಎಲ್ಲಾ ಭಾವನೆಗಳನ್ನು ಸಂಪೂರ್ಣವಾಗಿ ಬದಲಾವಣೆಗೊಳಿಸುವುದಕ್ಕೆ ಒಂದು ದಾರಿಯನ್ನು ಮಾಡಿಕೊಟ್ಟಂಥ ಮಹಾನ್ ಶಿಲ್ಪಿ ಶ್ರೀಮಾನ್ ದೇವರಾಜ್ ಅರಸ್‌ರವರು. ನಾನು ೧೯೭೨ಕ್ಕಿಂತ ಹಿಂದೆ ರಾಜಕೀಯದಲ್ಲಿ ಇರಲಿಲ್ಲ. ಆದರೆ ನಮಗೆ ಸಾಮಾನ್ಯವಾಗಿ ತಿಳಿದುಬಂದಂತೆ, ನಮಗೆ ಬಂದಿದ್ದಂಥ ಪ್ರಜಾಪ್ರಭುತ್ವ ಎಂಥಾದ್ದು ಆಗಿತ್ತು ಎಂದರೆ ಬರೀ ರಸ್ತೆ, ಸೇತುವೆ ಪ್ರಧಾನವಾದಂಥ ಪ್ರಜಾಪ್ರಭುತ್ವ ಎಂದು ಹೇಳಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ತರುಣರು ತಿಳಿದುಕೊಂಡಿದ್ದಂಥ ಸಂದರ್ಭದಲ್ಲಿ ಇಡೀ ಕರ್ನಾಟಕ ರಾಜ್ಯದ ಪ್ರತಿಯೊಂದು ಪ್ರದೇಶದಲ್ಲೂ ಜವರ ಆಗು ಹೋಗುಗಳನ್ನು ಬದಲಾವಣೆ ಮಾಡತಕ್ಕಂಥ, ಪ್ರಜಾಪ್ರಭುತ್ವದ ಕೆಲವು ಒಣ ಮೌಲ್ಯಗಳಿಗೆ ಜೀವಂತವಾಗಿ ಆರ್ಥಿಕ ಮತ್ತು ಸಾಮಾಜಿಕ ಶಕ್ತಿಯನ್ನು ತುಂಬಿದಂಥ ಒಂದು ಯುಗ ಪುರುಷರು ಶ್ರೀಮಾನ್ ದೇವರಾಜ್ ಅರಸರಾಗಿದ್ದರು ಎಂದು ಹೇಳಿದರೆ ಖಂಡಿತವಾಗಿಯೂ ತಪ್ಪಾಗಲಿಕ್ಕೆ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ರಾಜಕಾರಣಿಗಳಾಗಿರುವ ಅನೇಕ ಮಂದಿಗೆ ಅಭ್ಯಾಸ ಮಾಡುವುದಕ್ಕೂ ಸಮಯವಿರುವುದಿಲ್ಲ. ಆದರೆ ಶ್ರೀಮಾನ್ ದೇವರಾಜ್ ಅರಸ್‌ರವರು ಈ ಒಂದು ವಿಷಯಕ್ಕೆ ಮಾತ್ರ ಅಪವಾದವಾಗಿದ್ದರು. ಅನೇಕ ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಸಿದ್ಧಾಂತಗಳನ್ನು ಅಧ್ಯಯನ ಮಾಡಿ ಅದರ ಸೂಕ್ಷ್ಮತೆಯ ಅನುಭವವನ್ನು ಪಡೆಯುವುದರಲ್ಲಿ ಮಗ್ನರಾಗಿದ್ದರು, ಮತ್ತು ಅದನ್ನು ಬರೀ ಅಧ್ಯಯನ ಮಾಡುವುದಲ್ಲ ನಮ್ಮಂಥ ತರುಣರ ಜೊತೆಯಲ್ಲಿ ಅದನ್ನು ಚರ್ಚೆ ಮಾಡುತ್ತಿದ್ದರು. ಅವರ ಅನುಭವಗಳನ್ನು ವ್ಯವಹಾರದ ಕುಲುಮೆಯಲ್ಲಿ ಹಾಕಿ ಅದನ್ನು ಸಮಾಜಕ್ಕೆ ನೀಡಬೇಕು ಎಂದು ಹೇಳಿ ಚಿರಂತರವಾಗಿ ಚಿಂತನೆ ಮಾಡಿದಂಥ ಮಹಾನ್ ಮೇಧಾವಿ ಶ್ರೀ ದೇವರಾಜ್ ಅರಸ್‌ರವರು ಆಗಿದ್ದರು. ಅವರು ಯುವಕರಲ್ಲಿದ್ದ ಪ್ರತಿಭೆಯನ್ನು ಗುರುತಿಸಿ ನಮ್ಮ ಕರ್ನಾಟಕ ರಾಜ್ಯದಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಉತ್ತಮವಾದ ಮತ್ತು ಭವ್ಯವಾದ ಸೌಧವನ್ನು ಕಟ್ಟಿದಂಥ ಕೀರ್ತಿ ಮಾನ್ಯ ದೇವರಾಜ್ ಅರಸ್‌ರವರಿಗೆ ಸಲ್ಲುತ್ತದೆ. ಇಂಥಾ ಶ್ರೇಷ್ಠ ವ್ಯಕ್ತಿ ಕಣ್ಮರೆಯಾಗಿದ್ದಾರೆ. ಅವರು ಹಾಕಿಕೊಂಡಿದ್ದಂಥ ಅತ್ಯಂತ ಪ್ರಾಮುಖ್ಯವಾದ ಪರಂಪರೆಗಳನ್ನು ನಮ್ಮ ಈಗಿನ ಮುಖ್ಯ ಮಂತ್ರಿಗಳವರು ನೆನಪು ಮಾಡಿಕೊಟ್ಟಿದ್ದಾರೆ, ಅಷ್ಟೇ ಅಲ್ಲಾ ೧೯೮೦ನೇ ಇಸ್ವಿಯ ಬಡ್ಜೆಟ್ ಭಾಷಣದಲ್ಲೂ ಮತ್ತು ರಾಜ್ಯಪಾಲರ ಭಾಷಣದಲ್ಲೂ ಕೂಡ ಹಿಂದಿನ ಸರ್ಕಾರದವರು ಮಾಡಿದಂಥ ಕೆಲಸವೇನಿದೆ, ಅದು ಹಿಂದುಳಿದವರ ವಿಚಾರವಿರಲಿ, ಅಲ್ಪಸಂಖ್ಯಾಂತರ ವಿಚಾರವಾಗಿರಲಿ ಅಥವಾ ದೀನ ದಲಿತರ ವಿಚಾರವಾಗಿರಲಿ, ಅಥವಾ ಯಾವುದೇ ಪ್ರಗತಿಪರವಾದ ಕಾರ್ಯಕ್ರಮಗಳೇ ಇರಲಿ, ನಾವು ಅವುಗಳನ್ನು ಮುಂದುವರಿಸಿಕೊಂಡು ಹೋಗುತ್ತೇವೆಂದು ಹೇಳಿದ್ದೇವೆ. ಅವರು ಹಾಕಿದಂಥ ಪ್ರಗತಿಶೀಲವಾದ ಪರಂಪರೆಯನ್ನು ನಾವು ಸಹ ಮುಂದುವರಿಸಿಕೊಂಡು ಹೋಗಿ ಅದನ್ನು ಆದಷ್ಟು ಬೇಗ ಸಾಧಿಸಬೇಕು ಎಂದು ನಮ್ಮ ಸರ್ಕಾರ ಬದ್ಧ ಕಂಕಣವಾಗಿದೆ. ಮತ್ತೆ ಈ ನ್ಯಾಶನಲ್ ಇನ್ಸ್ಟಿಟ್ಯೂಟ್ ಫಾರ್ ದಿ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಪ್ರಾರಂಭಮಾಡಿ, ಮಾನ್ಯ ಶ್ರೀ ದೇವರಾಜ್ ಅರಸ್‌ರವರು ಏನು ಭವ್ಯವಾದ ಪ್ರಗತಿಶೀಲವಾದ ಪರಂಪರೆಯನ್ನು ಹಾಕಿಕೊಟ್ಟಿದ್ದಾರೋ ಅದನ್ನು ಇನ್ನಷ್ಟು ವೇಗವಾಗಿ ಪರಿಣಾಮಕಾರಿಯಾದ ರೀತಿಯಲ್ಲಿ ಕರ್ನಾಟಕದಲ್ಲಿ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅವರು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಇದನ್ನು ಜಾರಿಗೆ ತರಲು ಒಳ್ಳೆಯ ವಾತಾವರಣವಿತ್ತು.

ಆದುದರಿಂದ ಆಗ ಅವರು ಅದನ್ನು ಅನುಷ್ಠಾನಕ್ಕೆ ತರಲು ಅನುಕೂಲವಾಗಿತ್ತು. ಅವರು ದೊಡ್ಡ ಪ್ರಯೋಗ ಶೀಲ ವ್ಯಕ್ತಿಯಾಗಿದ್ದು, ಅಧಿಕಾರದಲ್ಲಿದ್ದಾಗ ಯಾವುದೇ ವಿಧವಾದಂಥ ಒಂದು ಸಾಧನೆ ಮಾಡಬೇಕೆಂದು ಹೊರಟಾಗ ಅದನ್ನು ಸಾಧನೆ ಮಾಡಿದಂಥ ಸಂತೃಪ್ತಿ ಅವರಲ್ಲಿತ್ತು. ಅಧಿಕಾರದಿಂದ ಹೊರಕ್ಕೆ ಹೋದಾಗ ರಚನಾತ್ಮಕವಾಗಿ ವಿರೋಧ ಪಕ್ಷಗಳನ್ನು ಸಂಘಟಿಸಬೇಕು ತನ್ಮೂಲಕ ದೇಶವನ್ನು ಕಟ್ಟಬೇಕೆಂದು ಅವರು ಪ್ರಾಮಾಣಿಕ ಅನಿಸಿಕೆಯಾಗಿತ್ತು. ಇದಕ್ಕಾಗಿ ಸತತವಾಗಿ ಪ್ರಯತ್ನ ಮಾಡುತ್ತಿದ್ದರು, ಹೋರಾಟ ಮಾಡುತ್ತಿದ್ದರು ಅದನ್ನು ನಾವು ಇತ್ತಕಡೆ ನಿಂತು ನೋಡುತ್ತಿದ್ದೆವು. ಅದರೂ ಅವರು ಅನೇಕ ಸಂದರ್ಭದಲ್ಲಿ ನಿರಾಸೆಯನ್ನು ಎದುರಿಸಬೇಕಾದ ಪ್ರಸಂಗ ಬಂದಿತ್ತು. ವಿರೋಧ ಪಕ್ಷಗಳ ಸಂಘಟನೆ ಮಾಡಿ, ರಚನಾತ್ಮಕವಾಗಿ ಈ ದೇಶವನ್ನು ಕಟ್ಟತಕ್ಕ ಮೂಲ ಪ್ರವಾಹದಲ್ಲಿ ವಿರೋಧ ಪಕ್ಷಗಳನ್ನು ಸೇರಿಸುವ ಕೆಲಸದಲ್ಲಿ ಸಫಲವಾಗದೇ ಇದ್ದಾಗ ಅವರು ಅನೇಕ ಸಾರಿ ಸಂಕಷ್ಟಗಳನ್ನು ಪಡತಕ್ಕ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಅವರ ಆಸೆ ಏನು ಪೂರ್ತಿಯಾಗಿಲ್ಲ ಅದನ್ನು ಪೂರ್ತಿ ಮಾಡತಕ್ಕ ಸಂಕಲ್ಪವನ್ನು ನೀವು ನಾವು ಎಲ್ಲಾ ಮಾಡಬೇಕಾದ ಅವಶ್ಯಕತೆ ಇದೆ ಎಂದು ಹೇಳಿ ನನ್ನ ಎರಡು ಮಾತಂಗಳನ್ನು ಮುಗಿಸುತ್ತೇನೆ.

೪-೩೦ ಪಿ. ಎಂ.

ಅಧ್ಯಕ್ಷರು.—ಸದನದ ಮಾನ್ಯ ಸದಸ್ಯರು ವ್ಯಕ್ತಪಡಿಸಿದಂಥ ಭಾವನೆಗಳಿಗೆ ನನ್ನ ಧ್ವನಿಯನ್ನು ಕೂಡಿಸುತ್ತಾ, ಸದನ ಪಾಸ್ ಮಾಡಿರತಕ್ಕಂಥ ನಿರ್ಣಯಕ್ಕೆ ನನ್ನ ಬೆಂಬಲವನ್ನು ಕೊಡುತ್ತಾ, ಈಗ ಮಾನ್ಯ ಸದಸ್ಯರು ಎದ್ದು ನಿಂತು ಎರಡು ನಿಮಿಷ ಮೌನವನ್ನು ಆಚರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಸಭೆ ಎದ್ದು ನಿಂತು ಎರಡು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಕಳೆದ ಅಧಿವೇಶನವನ್ನು ಮುಂದೂಡಿದ ನಂತರ ನಿಧನರಾದ ಕೆಳಕಂಡ ವ್ಯಕ್ತಿಗಳ ಬಗ್ಗೆ ಸಂತಾಪ ಸೂಚಿಸಲು ನಾನು ವಿಷಾದಿಸುತ್ತೇನೆ.

೧ ೧೯೩೦ ರಿಂದ ೧೯೪೦ರ ವರೆಗೆ ಹಾಗೂ ೧೯೪೧ ರಿಂದ ೧೯೪೫ರ ವರೆಗೆ ಹಿಂದಿನ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಜಿ. ಶಂಕರಶೆಟ್ಟಿ ಅವರು ೩೧-೩-೧೯೮೨ರಂದು ನಿಧನರಾದರು.

೨ ಮುಂಬಯಿಯ ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ೧೯೫೬ರ ನವೆಂಬರ್ ೧ ರಿಂದ ೧೯೫೭ರ ವರೆಗೆ ಮೈಸೂರು ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಸಿದ್ದಪ್ಪ ಚನ್ನಬಸಪ್ಪ ಸಿಂದೂರ್ ಅವರು ೬-೪-೧೯೮೨ರಂದು ನಿಧನರಾದರು.

೩ ೧೯೪೧-೪೫ ಹಾಗೂ ೧೯೪೫-೪೯ರ ವರೆಗೆ ಎರಡು ಬಾರಿ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಕೆ. ನಾಗಭೂಷಣ ಭಟ್ ಅವರು ೭-೪-೧೯೮೨ರಂದು ನಿಧನರಾದರು.

೪ ೧೯೫೨-೫೭ರ ಅವಧಿಯಲ್ಲಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ಬಿ. ಚಿಕ್ಕಣ್ಣ ಅವರು ೨೫-೪-೧೯೮೨ರಂದು, ನಿಧನರಾದರು.

೫ ೧೯೫೭-೬೨ರ ಅವಧಿಯಲ್ಲಿ ವಿಧಾನಸಭಾ ಸದಸ್ಯರಾಗಿದ್ದ ಶ್ರೀ ವೆಂಕಟರೆಡ್ಡಿ ಅವರು ೬-೫-೧೯೮೨ರಂದು ನಿಧನರಾದರು.

ಈ ಎಲ್ಲಾ ಸದಸ್ಯರ ಗೌರವಾರ್ಥ ಸದನ ಎರಡು ನಿಮಿಷ ಮೌನವನ್ನು ಆಚರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಸಭೆ ಎದ್ದು ನಿಂತು ಎರಡು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು.—ಇಂದಿನ ಕಾರ್ಯಕಲಾಪಗಳನ್ನು ನಾಳೆಗೆ ಮುಂದೂಡಿ ನಾಳೆ ಮಧ್ಯಾಹ್ನ ಒಂದು ಗಂಟೆಗೆ ಸಭೆ ಸೇರುವುದು.

(The House adjourned at Thirty-five minutes past four of the Clock to meet again on Wednesday, the 9th June 1982 at One of the Clock)